ಸಂಪ್ರದಾಯದ ಹಾಡುಗಳು

ವಿವಾಹ

ರಂಗೋಲಿ

ಮಂಗಳಕರಮಾಯ್ ಪಡಿ (ತಮಿಳು) **ರಾಗ:ಬೇಹಾಗ್, ಆದಿತಾಳ**

ಮಂಗಳಕರಮಾಯ್ ಪಡಿ ಅಮೈತ್ತೋಮ್। ಮಗ್ಗಿಳುಡನ್ ಕೋಲಮುಂ ಶೆಮ್ಮಣ್ಣಿಟ್ಟೋಂ॥ ಪಂಗಯತ್ತಾಳನ್ ಅರುಳಾಲೇ। ಪಾಂಗುಡನ್ ದಂಪತಿ ವಾಂಳ್ದಿಡವೆ॥1॥ ಅನ್ದಣರ್ ಆಸಿಗಳ್ಳೆ ಕೂರಿಡವೇ। ಅಂದಮುಡನ್ ಪುಗಳ್ ಪಾಡಿನವೇ। ಬಂಧು ಜನಂಗಳುಂ ಕಳಿತ್ತಿಡವೇ। ಸುಂದರ ದಂಪತಿ ವಾಂಳ್ದಿಡವೆ॥2॥ ಕನಿಯುಂ ಪಾಲುಂ ಇನಿಪ್ಪದು ಪೋಲ್। ಮಣಿಯುಂ ಓಸೈಯುಂ ಒಲಿಪ್ಪದುಪೋಲ್। ಮಲರುಂ ಮಣಮುಂ ಮಿಲಿರ್ವದು ಪೋಲ್। ಮಂಗಳ ದಂಪತಿ ವಾಂಳ್ದಿಡವೇ॥3॥ ಅಗ್ಗಿನಿ ಭಗವಾನ್ ಅಮರ್ನ್ದಿಡವೆ। ಆನಂದ ಮೇಳಂಗಳುಂ ಒಲಿತ್ತಿಡವೆ। ಮಿಕ್ಕ ಮಗ್ಗಿಳುಡನ್ ದಂಪತಿಗಳ್। ಪಕ್ಕುವಮಾಯ್ ಮನಂ ಕಳಿತ್ತಿಡವೆ॥4॥

ಚಪ್ಪರ

ಪಂದಲ್ ಕಾಲ್ ನಾಟ್ಟುವೋಮೇ (ಚಪ್ಪರಪೂಜೆ) **ರಾಗ: ಅಠಾಣ, ಆದಿತಾಳ**

ಪಂದಲ್ ಕಾಲ್ ನಾಟ್ಟುವೋಮೇ ಪಾಂಗುಡನೇ ॥ಪ॥ ಅಂಡಮುಡನ್ ಅಲರ್‌ಮೇಲ್ ಮಂಗೈ ನಾದನಿನ್। ಶೆನ್ದಾಮರೈಪಾದಮ್ ಸೇರ್ನ್ದು ವಣಂಗಿ ನಾಮುಮ್॥1॥ ವಾಳೈಯಡಿ ವಾಳೈ ಎನ ವಂಶಂ ವಿಳಂಗಿಡವುಂ। ವಾಳೈಗಳ್ ಕಟ್ಟಿ ಪಣಂಗಾಯ್‌ಗಳ್ ತುಲಂಗಿಡವುಂ॥2॥ ಆಳಿವನನ್ ಅರುಳೈ ಆಲಿಲೈ ಅಲಿತ್ತಿಡುಂ। ಪೇಳಿಯಾಂ ತೆನ್ನೈಯುಡನ್ ಪೇರಿನ್ಬಮ್ ನಿರೈಂದಿಡವುಂ॥3॥

ಸುಮಂಗಲಿ ಪೆಂಡುಗಳೆ ವರುಗ (ತಮಿಳು-ಮುತ್ತೈದೆಪೂಜೆ) **ರಾಗ:ಬೇಹಾಗ್, ಆದಿತಾಳ**

ಸುಮಂಗಲಿ ಪೆಂಡುಗಳೆ ವರುಗ ಇಂಗೇ। ಶುಭಂಗಳೈ ನಡತ್ತಿಡುವೀರ್ ತಾಯೇ ॥ಪ॥ ಅಮರತ್ವಂ ಅಡೈಂದಿಟ್ಟ ದೈವೀಗ ಅನ್ನೈಗಳೇ। ಇಮ್ಮೈಯುವರ್ ಪೋಲವೇ ಎಂಗಳುಕ್ಕು ಅರುಳ್‌ಸೈಯ್ಯ॥1॥ ಮಂಗಳ ವಾಳ್ವುಕೋರ್ ಭಂಗಂ ವರಾಮಲೇ। ಪೊಂಗುಂ ಪರಿಉಡನೆ ಪುನಿದವಾಳ್ವರುಳ್‌ವೀರ್॥2॥ ಕಂಗಲುಂ ಪಹಲುಂ ಕನವಿಲುಂ ನನವಿಲುಂ। ಚೆಂಗಮಲ ಪಾದಂ ಸೆನ್ನಿಮೇಲ್ ಪೋಟ್ರಿನ್॥3॥

ಹಸೆಗೆ ಕರೆಯೋದು - ಗಂಡಿಗೆ

ಆ ಮುರುಳೀಲೋಲ **ರಾಗ:ಸಿಂಧೂಭೈರವಿ**

ಆ ಮುರುಳೀ ಲೋಲ ಮೋಹನ ಬಾಲ। ಹರುಷದಿ ಕರೆವರು ಪೀಠಕೆ ಈಗ ಸರಸದಿ ಬಾ ಬೇಗ। ಮುರಾರಿ ಸರಸದಿ ಬಾ ಬೇಗ॥ಪ॥ ಚಂದಿರ ವದನದ ಸುಂದರಾಕಾರ। ಮಂದರಗಿರಿಧರ ಮೋಹನಾಕಾರ। ಬೃಂದಾವನದಾ ನಂದನ ವಿಹಾರ ಅಂದದ ಪೀಠಕೆ ಬಾ ಗಂಭೀರ॥1॥ ವರಭದ್ರ ಪುರಿಹರ ಸಖನೆಂದೆನಿಸಿ ಶರಣರ ರಕ್ಷಿಪ ಬಿರುದನು ಧರಿಸಿ। ಪರಮಾದರದಲಿ ಕರುಣವ ತೋರಿಸಿ। ಸರಸಿಯರ್ ಕರೆವರು ಬಾ ಸಂತೋಷಿಸಿ॥2॥

ಉತ್ಸಾಹದ ಮಂಟಪಕೆ ಮುತ್ತುಗಳು **ರಾಗ: ಹಿಂದೋಳ**

ಉತ್ಸಾಹದ ಮಂಟಪಕೆ ಮುತ್ತುಗಳು ಬೀಗುತಿದೆ। ಕೆತ್ತಿರುವ ರತ್ನಂಗಳು ಪಚ್ಚೆಯ ವಿಚಿತ್ರಂಗಳು।।ಪ।। ನೀರಜಾಕ್ಷ ಬಾರೋ ಬೇಗನೆ। ನೀರಜಾಕ್ಷ ಬಾರೋ ಬೇಗ। ನಾರೀ ಸತ್ಯಭಾಮೆ ಕೂಡಿ ನೀರೆಯರೂ ಕರೆವರು ನೀಲದ ಹಸೆಗೀಗ।।1।। ಬಂಗಾರದ ಮಂಟಪದೊಳ್ ಅಂಗನೆಯರ್ ಹಾಕಿರುವ ಬಂಗಾರದ ಮಣೆಮೇಲೆ ಮಂಗಳಾಂಗ ಬಂದು ಕೂಡೋ।।2।। ನಾರಿಯರು ಪಾಡುತ್ತಲೇ ಹಾಡುಗಳ ಹೇಳುತ್ತಲೇ। ಆರತಿಯನೆತ್ತಿದರು ನರಸಿಂಹ ಲಕ್ಷುಮಿಗೆ।।3।।

ದಯಮಾಡಿಸಯ್ಯ ದಾನವಾಂತಕ **ರಾಗ: ಹಿಂದೋಳ**

ದಯಮಾಡಿಸಯ್ಯ ದಾನವಾಂತಕ। ಆಯತಾಕ್ಷಿ ಯಾರೂ। ಮಾಯದಾಪೀಠಕೆ।।ಪ।। ಎತ್ತಿ ನೋಡಿದಾರೂ। ಮುತ್ತಿನಾಜ್ಯೋತಿ। ಸುತ್ತರಾಜಿಸೂವ। ವಿಚಿತ್ರದಾಪೀಠಕೇ।।1।। ಬೆಳದಿಂಗಳೊಳು ಕೊಳಲೂದುತಾ। ನಲಿನಾಕ್ಷಿಯಾರ ಸಲಹೀದ। ದೋರೆ।।2।। ಮಾರ ಮೋಹನಾಂಗ। ಮಂದಹಾಸದಿಂದಾ ನಾರಿ। ಮಣಿಯಲೆಲ್ಲಾ ಸೇರಿ ಕರೆಯುವೋರು।।3।।

ಬಾರೋ ಶೃಂಗಾರ ಶ್ರೀಪತಿಯೇ **ರಾಗ: ಜುಂಜೋಟಿ**

ಬಾರೋ ಶೃಂಗಾರ ಶ್ರೀಪತಿಯೇ। ತೋರೂತ ನವಾಶುಭಾಗುಣ ಹಾರಮತಿಯೇ।।ಪ।। ನೀಲ ಮಣಿಗಳುಸಾಲುಗಳು ಮೇಲಾಗಿ ತೋರುವ। ಪೀಠಕೆ। ಬಾಲೆಯರನಾಲಂಗಿಸುತ್ತಲಿ। ನೀಲ ಮೇಘಶ್ಯಾಮಸುಂದರ।।1।। ವಿನಯದಲಿ ಘನನೆನೆಸಿ ಭಕುತರ। ವನಜಮುಖಿಯರು ಹಸೆಗೇ। ವಿನಯದಿಂದಲಿ ವನವಚರಿಸಿದ।।2।। ಲಕ್ಷಜನರೊಳು। ಅಪೇಕ್ಷೆಯಿಂದಲೀ। ಲಕ್ಷ್ಮೀರಮಣನೆ ಬಾರೆಲೋ। ಅಕ್ಷಯದಿ ದ್ರೌಪತಿಯ ಕಾಯ್ದವ ಪಕ್ಷಿವಾಹನ ದೀನರಕ್ಷಕ।।3।।

ಬಾರೋ ಹಸೆಗೆ ವೀರಶಯನಾ **ರಾಗ: ಪೂರ್ವೀಕಲ್ಯಾಣಿ**

ಬಾರೋ ಹಸೆಗೆ ವೀರಶಯನಾ। ನೀರೆಯಾರು ಕರೆಯುವಾರು। ನೀರೆಯಾರು ಕರೆಯುವಾರು। ನೀಲದ ಪೀಠಕೆ ಬೇಗ।।ಪ।। ಬೆಂಚು ಕುರ್ಚಿಸ್ಟೂಲು ಟೇಬಲ್ ಸೋಫಾಗಳೆ ಹಾಕಿರುವೆ।ಶೋಕಿಯಾಗಿ ಬಂದು ಈಗ ಪೀಠವನ್ನೇ ಸ್ವೀಕರಿಸು।।1।। ಕೋಟು ಪೇಟ ಕಾಲರ್। ನೆಕ್‌ಟೈ। ಹ್ಯಾಂಡ್ ಕರ್ಚೀಫ್‌ಗಳನ್ನೇ ಹಿಡಿದು। ಸ್ಟಡಿಯಾಗಿ ಬಂದು ನೀನು ಪೀಠವನ್ನು ಸ್ವೀಕರಿಸೈ।।2।। ಕ್ರಾಫುಗಳನೆ ಬಾಚಿಕೊಂಡು। ರಿಷ್ಟ್ ವಾಚ್ ಕಟ್ಟಿಕೊಂಡು। ಮೋಟಾರ್ ಸೈಕಲ್‌ನಿಂದ ಇಳಿದು ಹಾಲಿನಲ್ಲಿ ಬಂದು ಕೂಡೈ।।3।।

ಮನೋಹರಾ ದುರಿತಾಪಹಾರಾ **ರಾಗ: ಕಾಮಾಚ್**

ಮನೋಹರಾ ದುರಿತಾಪಹಾರಾ। ದಯಾಕರಾ। ಬಾರೋ ಹಸೆಗೀಗಾ।।ಪ।। ರತ್ನಖಚಿತವಾದ। ಮುತ್ತಿನ್ಹಾಸೆಗೀಗಾ। ಮಿತ್ರೆಯರೆಲ್ಲಾರೂ ಕರೆಯೂವರೂ। ಇಷ್ಟಮಾತ್ರದಿ ಸೃಷ್ಟಿಗೈವೋದೇವ। ಎಷ್ಟು ಶೃಂಗಾರವೊ ದೃಷ್ಟಿತಾಕಿತೇನೋ।।1।। ಪರಿಪರಿಯಾ ಆಭರಣವನಿಟ್ಟೂ ಮೆರೆಯುತ್ತ ಬಾಬಾ ಮುರಳೀಧರ। ತರುಣೀಯರೂ ರಮಣೀಯಮಾಗಿ ವಿರಚೀಸಿರುವೋ ವಜ್ರದ್ಹಾಸೆಗೀಗಾ ।।2।। ಸಾಮಗಾನಲೋಲ ಚಾರುಗುಣಶೀಲಾ ನೀರೆನಾಕರೇವೇ ಹೀರದ್ಹಸೆಗೀಗ।।3।।

ಮುರಹರ ಶ್ರೀ ಮಾ ಮನೋಹರ

ಮುರಹರ ಶ್ರೀ ಮಾ ಮನೋಹರ। ಮುದಮು ತೋರಾ ಪೀಠಕು।।ಪ।। ಮದನ ಮಣಿಯಲು ಲೀಲತೋ ನಿನು ಕೋರಿ ವೇಡುಚು ಪಿಲುವರೋ।।ಅ.ಪ।। ಬಾಲು ಡೈ ಗೋಪಾಲ ಬಾಲುಡು। ಕೇಳಿ ಲೀಲನು ಆಡಗ। ಬಾಲಿಕಾ ಮಣಿಯಾಲು

ಚೇರಿ। ಲೋಲನೇತ್ರುನಿ ಪಿಲುವಗಾ॥1॥ ಸಾರಸಾಕ್ಷುನಿ ಚೇರಿ। ಜೊತೆಗಾರಾರ ಪೀಠಕು ಸುಂದರಾ। ವಿರಸನೀಗಿ। ಸರಸಮುತೊ। ಪರಮ ಪುರುಷವೇ ಗರಾ॥2॥

ಬೇಗ ಬಾರೋ ಬಾಲಮೋಹನ **ರಾಗ:ಮೋಹನ**

ಬೇಗ ಬಾರೋ ಬಾಲಮೋಹನ ಹಸೆಗೇ ನೀ। ಬಾಲಾ ಲೀಲೆಯ ತೋರೋ ಬಾಲ ಮೋಹನ॥ಪ॥ ಗೆಜ್ಜೆ ಕಾಲ್ ಕಡಗ ವಜ್ರದಾಭರಣ ಸದ್ದಿನಿಂದಲಿಡುತಾ। ವಜ್ರಕಾಯನೇ ತಪ್ಪು ಹೆಜ್ಜೆಗಳನಿಡುತಾ॥1॥ ಗೋಲಿಯಾಟವು ಮೇಲೆ ಗಜ್ಜುಗವು ಜಾಲಿ ಚೆಂಡಿನಾಟ। ಮೇಲೆನಿಪ ಬಿಲ್ಲನ್ನುರಿಯಾಟವಾಡೋ॥2॥

ಬಾರೋ ಕರುಣಾ ನಿಧಿಯೇ

ಬಾರೋ ಕರುಣಾ ನಿಧಿಯೇ ಹಸೆಗೆ ಈಗ॥ಪ॥ ಮದಗಜಗಮನೆಯರು। ಮುದದಿಂದಲಿ ಕರೆವೋರು। ಪದುಮದ ಹಸೆಗೀಗಾ॥ ಪಾದವಿಡು ಪಕ್ಷಿವಾಹನ॥1॥ ಕರಿರಾಜವರದನೇ ಕಂಬು ಕಂದರನೇ ಕಾಮಿನಿಯರಿಗೇ ಪ್ರೇಮ ತೋರಿದ। ಕಾಮ ಜನಕನೇ॥2॥ ಪೀತಾಂಬರಧರನೇ। ಪಾತಕ ಹರನೇ ಪ್ರೀತಿಯಿಂ ಕರೆಯುವೇ॥ ಪೂತನಿ ಸಂಹಾರಕನೇ॥3॥

ಬಾರೋ ಬೇಗನೆ ಹಸೆಗೆ **ರಾಗ;ಜುಂಜೋಟಿ**

ಬಾರೋ ಬೇಗನೆ ಹಸೆಗೆ ಗೋಪಾಲ ಕೃಷ್ಣ ಬಾರೋ ಬೇಗನೆ ಹಸೆಗೆ॥ಪ॥ ಚಿನ್ನದ ಹಸೆಮಣೆ ರನ್ನದ ಕಾಲು ದೀಪ ನೀಲವರ್ಣನೆ ನಿನ್ನ ಹರಸುವರು॥1॥ ಬಲದಲ್ಲಿ ರುಕ್ಮಿಣಿ ಎಡದಲ್ಲಿ ಸತ್ಯಭಾಮೆ। ಗರುಡ ವಾಹನ ಸಹಿತ ನಾರಿಯರೆಲ್ಲರು। ಕ್ಷೀರಾಬ್ಧಿ ವಾಸಗೆ ಆರತಿ ಎತ್ತುವರು॥2॥

ಬಾರೋ ಪೀಠಕೆ ಶ್ರೀನಿವಾಸ ಬೇಗ **ರಾಗ:ಖರಹರಪ್ರಿಯ**

ಬಾರೋ ಪೀಠಕೆ ಶ್ರೀನಿವಾಸ ಬೇಗ। ಬಾರೋ ಪೀಠಕೆ॥ಪ। ನಂದಗೋಪಿ ನಂದ। ನಂದ ಭಾಗ್ಯನಂದ। ಸುಂದರಾಂಗ ಶೀಲ ಇಂದಿರೇಶ ಧೀರ॥1॥ ಕೊಳಲನೂದಿ ನಲಿವ। ಲಲನೆಯರಿಗೆ ಒಲಿವ। ಜಲಜ ಭವನ ತಾತ ಚೆಲುವ ರೂಪನೀತಾ॥2॥ ಮಧುರೆಯೊಳಗೆ ಪುಟ್ಟಿದ ಮದಮುಖನ ಗೆಲಿದ। ಪದುಮನಾಭ ನಿನ್ನ। ಮುದದಿ ನೆನೆವೆ ಮುನ್ನ॥3॥

ಶೇಷಶಯನ ವಾಸುದೇವ ಬಾ **ರಾಗ: ಯಮನ್, ಆದಿತಾಳ**

ಶೇಷಶಯನ ವಾಸುದೇವ ಬಾ। ಸುಂದರಾಂಗ ಬಾ ಹಸೇಗೆ॥ಪ॥ ಮಧುರೆಯಲ್ಲಿ ಹುಟ್ಟಿ ನೀನು ಮಾವ ಕಂಸನಾ ಕೊಂದದೇವಾ। ಮಾನಿನಿಯ ಮಾನ ಕಾಯ್ದೆ। ದೀನ ಬಂಧು ದಾನವಾರೀ॥1॥ ಜನಕನಾ ಮನೆಗೆ ಹೋಗಿ ಶಿವನ ಧನುವ ಮುರಿದ ದೇವ। ಜಾನಕಿಯ ಕರವ ಪಿಡಿದ ರಾಮಚಂದ್ರ ಹಸೆಗೆ ಬಾರೋ॥2॥ ಬೇಟೆಯನ್ನಾಡುತ ಪೋಗಿ ಬೆಟ್ಟದಲ್ಲಿ ನಿಂದ ದೇವ। ಬೇಡಿದ ಭಕ್ತರಿಗೆಲ್ಲ ವರವ ಕೊಡುವ ವೆಂಕಟೇಶ॥3॥

ಹಸೆಗೀಗ ಬೇಗ ಬಾರೋ **ರಾಗ: ಕಾಂಬೋಧಿ**

ಹಸೆಗೀಗ ಬೇಗ ಬಾರೋ। ಸಾರಸಾಕ್ಷನೇ। ಈ ಪರಿಯಲ್ಲಿ॥ಪ॥ ಘೋರ ದುಃಖಿತರಾಧಾರಭಕ್ತ। ರುದ್ಧಾರಿಯೇ ಶೌರಿಯೇ। ಮುರಾರಿಯೇ ಪ್ರೀಯನೆ॥1॥ ಶ್ರೀಲತಾಂಗಿಯಾ। ಲೋಲನ ದುಗುಣಾ। ಜಾಲಕೌಸ್ತುಭಮಾಲ ಕಸ್ತೂರಿಫಾಲದೊಳೆಸೆವ ದಯಾಳುವಾಲ। ಬಾಲಗೋಪಾಲ ಸುಶೀಲನೆ ನಿರುತದಲಿ॥2॥ ದಿಟ್ಟ ಗುರೂಜಿಯಾ ವಿಠಲೇಮನದಿಷ್ಟವನ್ನು ಕೊಟ್ಟು ಸಲಹೆಲೋ। ಸೃಷ್ಟಿಗೀಶನೆ ನಿನಗೇ ಮೊರೆಇಟ್ಟು ಕೈಕೊಟ್ಟು ನೀ। ಬಿಟ್ಟಗಲದೆಲೆ ಪೊರೆ॥3॥

ಹಸೆಗೆ ಕರೆದು ತನ್ನಿರೀಗ **ರಾಗ: ನೀಲಾಂಬರಿ, ರೂಪಕ**

ಹಸೆಗೆ ಕರೆದು ತನ್ನಿರೀಗ ಕುಸುಮನಾಭನ॥ಪ॥ ಮೀನನಾಗಿ ವೇದವ ತಂದು ಭೂಮಿಯನ್ನು ಪೊತ್ತನಾ ವರಾಹನಾಗಿ ಧರಣಿಯತಂದ। ಚೆಲುವ ವರದ ಕೃಷ್ಣನ್ನಾ॥1॥ ಹತ್ತು ತಲೆಯ ರಾವಣನ್ನ ಕತ್ತರಿಸೀದಾತನ ಮತ್ತೆ ಪಾರ್ಥಗೆ ಸಾರಥಿಯಾದ ಚೆಲುವ ಶ್ರೀ ಕೃಷ್ಣನ್ನಾ॥2॥

ಹಸೆಗೆದ್ದು ಬಾ ದಶರಥಸುತ **ರಾಗ: ತೋಡಿ**

ಹಸೆಗೆದ್ದು ಬಾ ದಶರಥಸುತ ಹಸೆಗೆದ್ದು ಬಾ। ಮಾತೆ ವಾಕ್ಯವ ಕೇಳಿ ಹರುಷವನ್ನು ತಾಳಿ ವನಕೆ ತೆರಳಿ ಪೋದ ಶ್ರೀರಾಮಚಂದ್ರ ಹಸೆಗೆದ್ದು ಬಾ॥1॥ ಸೀತೆ ಶ್ರೀರಾಮರು ಲಾಸ್ಯವಾಡುತಿರಲು। ವನಕೆ ತೆರಳಿ ಪೋದ ಶ್ರೀರಾಮ ಚಂದ್ರ ಹಸೆಗೆದ್ದು ಬಾ॥2॥ ಮುನಿ ವೇಷದಿಂದ ರಾವಣನು ಬಂದ। ಭಿಕ್ಷ ನೀಡು ಎಂದ ಸೀತೆಯನ್ನೇ ಕದ್ದ ಹಸೆಗೆದ್ದು ಬಾ॥3॥ ಸೇತುವೆಯ ಕಟ್ಟಿ ಶರಧಿಯನ್ನು ದಾಟಿ। ವನಕೆ ತೆರಳಿ ಪೋದ ಶ್ರೀರಾಮಚಂದ್ರ ಹಸೆಗೆದ್ದು ಬಾ॥4॥ ಸಪ್ತ ಸಮುದ್ರಗಳ ನೋಡಿ ಪಟ್ಟವನ್ನು ಕಟ್ಟಿ। ದಿಟ್ಟದಿ (ರಘುರಾಮ)। ಪಟ್ಟದರಸಿ ಸಹಿತ ಹಸೆಗೆದ್ದು ಬಾ॥5॥ ರಾಜಸೂಯಾಗದೊಳು ಅಗ್ರ ಪೂಜೆಯನೆ ಪಡೆದು। ಶಿಶುಪಾಲನ ಕೊಂದ ಪಾಂಡವ ರಕ್ಷಕನೆ ಹಸೆಗೆದ್ದು ಬಾ॥6॥ ಹಸೆಗೆ ಬಾರೆಲೋ ದ್ವಾರಕೀ ನಾಥ ರುಕ್ಮಿಣಿ ರಮಣ ಮುತ್ತಿನ ಪೀಠಕ್ಕೆ। ಮಾವ ಕಂಸನ ಕೊಂದ ಮಧುಸೂಧನನೆ॥7॥ ಪಾರಿಜಾತಕೆ ಒಲಿದ ಭಾಮೆಯರಸನೆ ಹಸೆಗೆದ್ದು ಬಾ। ಕುಂಜರ ವನದೊಳು ರಾಧೆಯ ವನದಿ ನೀ ಸುಮಗಳ ಮಧ್ಯದಿ ನಾಟ್ಯವನಾಡುತ ಹಸೆಗೆದ್ದು ಬಾ॥8॥

ಹಸೆಗೆದ್ದು ಬಾ ವಸುದೇವ ಸುತ **ರಾಗ: ಸಾರಂಗ**

ಹಸೆಗೆದ್ದು ಬಾ ವಸುದೇವ ಸುತ। ಹಸೆಗೆದ್ದು ಬಾ॥ಪ॥ ಅಕಳಾಂಕ ಚರಿತಾ। ಆದಾರಿಸೆನ್ನ। ತಪ್ಪುಗಾಳ ಕ್ಷಮಿಸಿ। ಒಪ್ಪಿಕೊಳ್ಳೋ ದೇವಾ॥1॥ ಕಂದನಾಮೊರೆ ಕೇಳಿ। ಕಂಬವನ್ನೇ ಸೀಳಿ। ಕಂದನನ್ನುಕಾಯ್ದ। ಇಂದಿರೇಶ ಬಾರೋ॥2।. ಬಾಲೇ ದ್ರೌಪತೀಗೆ। ಅಕ್ಷಯವಿತ್ತಾ। ಬಹಳ ಹರುಷದಿಂದಾ ಬಾರೈ ಗೋಪಿಕಂದಾ ಹಸೆಗೆದ್ದು ವಸುದೇವ ಸುತಾ॥3॥

ಹಸೆಗೆ ಬಾರೋ ವಸುಧೆಪಾಲ **ರಾಗ: ಶ್ರೀ**

ಹಸೆಗೆ ಬಾರೋ ವಸುಧೆಪಾಲ। ರುಕ್ಮಿಣಿ ಸಹಿತಾ॥ಪ॥ ಮತ್ಸ್ಯಕೂರ್ಮನಾಗಿ ಗಿರಿಯಾ। ಮೆಚ್ಚಿ ತಂದೆಯೋ। ಮೆಚ್ಚಿ ಬಾಲಗೆ ಕಂಬದಿಂದಾ। ಅಚ್ಚುತಾ ಹಸೆಗೇ॥1॥ ಹುಡುಗನಾಗಿ ಪೊಡವಿ ಬೇಡಿಕೊಡಲಿ ಪಿಡಿದೇಯೋ। ಪೊಡಲಗರ್ವವನ್ನೆ ಮುರಿದು।ಪಾಲಕು ಡಿದಧೀರಾನೇ॥2॥ ಅಸುನ ಹೀನಾಗಿ ಕುದುರೆ ಏರಿ ಮೆರೆದೇಯೋ। ಶಶಿಮುಖಿಯರೆಲ್ಲ ನಿನ್ನ ಹಸೆಗೆ ಕರೆಯುವರೂ॥3॥ ಮಂಗಳಾಂಗ ಗಂಗ ಜನಕ। ತುಂಗವಿಕ್ರಮನೆ। ರಂಭೆಕು ರುಕ್ಮಿಣಿ ದೇವಿಸಹಿತ। ದೀನ ಪಾಲ। ದಯಾಳು ದೀನ ಜಯಪಾಲ॥4॥

ಹಸೆಗೇಳೈ ಸುಂದರಾ **ರಾಗ:ಶಂಕರಾಭರಣ-ಆದಿತಾಳ**

ಹಸೆಗೇಳೈ ಸುಂದರಾ। ಅಂಬುಧಿ ಮಂದಿರಾ॥ಪ॥ ಬಿಸಜದಳಾಂಬಕ ಶಶಿಧರಮುಖ। ಸಂತಸದೊಳು ನೀ ನಸುನಗುತಾ॥ಅ.ಪ॥ ಕಾಮಜನಕ ನತಕಾಮಿತ ವರದ। ಶ್ರೀಭಾಮಿನಿ ಪ್ರಿಯ ಗುಣಧಾಮ ಮುದದಿ॥1॥ ಪೀತಾಂಬರ ಪೂತಗುಣಾಕರ। ಪಾತಕ ಹರಸುತ ನಾಥವಿನುತ॥2॥ ದೇವಕೋಟಿಗಳೆಲ್ಲ ಸೇವಿಸೆ ನಿನ್ನನು। ಭಾವಿಸಿ ಕಾದಿಹರೀ ವಿಧದೊಳು॥3॥ ಸುರಪುರ ವಾದ್ಯಗಳುರೆ ಮೊಳಗುತಲಿವೆ। ಸಿರಿಯೊಡನೀಗಲೆ ವರವಿಭವದಿ॥4॥ ಕೀರವಾಣಿಯರಿಂದು ಚಾರು ರಾಗಂಗಳಿಂ। ಸಾರಿ ಕರೆಯುವರು ನಾರಸಿಂಹನೆ॥5॥

ಹಸೆಗೆ ಕರೆಯೋದು - ಹೆಣ್ಣಿಗೆ

ಇವಳ್ಯಾರೆ ಕೋಮಲೇ ಸುಂದರೀ **ರಾಗ:ಮೋಹನ**

ಇವಳ್ಯಾರೆ ಕೋಮಲೇ ಸುಂದರೀ ವರಲಕ್ಷ್ಮಿ ಹಸೆಗೆ ಬಂದಳು॥ಪ॥ ಇಂದ್ರನಂತೆ ವೈಭವದೊಳು। ಚಂದ್ರನಂತೆ ಕಾಂತಿಯು। ಚಂದ್ರ ಸುಗುಣ ರಾಮಚಂದ್ರಂ ಪಟ್ಟದರಸಿಯೇ। ಕಾಣೆ॥1॥ ನಿತ್ಯವ್ರತವ ಮಾಡುತಿಹಳು। ಸತ್ಯಶೀಲೆ ಇವಳು। ಮುತಿನ್ಹಸೆಗೆ ಬೇಗದಿಂದಲೆ ಚಿತ್ತೈಸಿರುವಳೋ ಕಾಣೆ॥2॥ ವರದ ದಾರಿ ಪುರದ ಒಳಗೆ ಭರದಿ ನೆಲಸಿ ಇರುವಳು। ವರದ ವೆಂಕಟಲಕ್ಷ್ಮಿಯಂದದಿ ಕರುಣ ತೋರ್ಪಳೋ ಕಾಣೆ॥3॥

ಇಂದೀವರಾಕ್ಷೀ ಸುಂದರಿ ಬಾರೇ **ರಾಗ: ಕಲ್ಯಾಣಿ**

ಇಂದೀವರಾಕ್ಷೀ ಸುಂದರಿ ಬಾರೇ। ಚೆಂದದ ಪೀಠಕೇ॥ಪ॥ ನೀರೇ ನೀವಯ್ಯಾರದಿಂದಲಿ ಬಾರೇ। ನಾರೀಮಣಿ ಮಾರಜನಕನಾ ಮಾನಿನೀಮಣಿಯೇ॥ಅ.ಪ.॥ ರಮಣೀ ಅಗಣಿತ ಗುಣಮಣಿ ಶ್ರೀಣಿ, ನಗರಾಜ ಪನ್ನಂಗವೇಣಿ। ನಗುನಗುತ ಬಾ ಸೊಗಸಿನಿಂದಲೀ ಸೊಗಸಾದ ಪೀಠಕೆ ನಸುನಗುತೀಗಲೇ॥1॥ ಮಾತೇ ಮೂರ್ ಲೋಕದೊಳಗೆ ಪ್ರಖ್ಯಾತೆ ಲೋಕೈಕನಾಥನಿಗೆ ಪ್ರೀತೆ ಪ್ರೀತಿಯಿಂದಲಿರುತಾ ಸೀತಾಪತೆ ಸಹಿತಾ ನೀ ತಡಮಾಡದೆ ಪ್ರಖ್ಯಾತವಾದ ಪೀಠಕೇ॥2॥

ಕುಸುಮಗಿಂಧಿನಿ ಹಸೆಗೆ ಬಾ **ರಾಗ:ಕಾಮಾಚ್**

ಕುಸಮಗಂಧಿನಿ ಹಸೆಗೆ ಬಾ ಕುಸುಮ ಅಕ್ಷಿಯೆ ಪಾರ್ವತಿ॥ಪ॥ ಉರಗೇಶವೇಣಿಯೆ ಉರುತರ ಪಾಣಿಯೇ। ಅರಳಿದಾ ಪರಿಮಳವೂ ಅರಳಿದಾ ಪರಿಮಳವೂ॥1॥ ಗಣರಾಜ ಮಾತೆಯೇ ಗುಣನಿಧಿ ಪೂಜ್ಯಳೆ। ಅರಳಿದಾ ಪರಿಮಳವಾ ನಿನಗೇ ತಂದಿರುವೇ॥2॥

ಗೋವರ್ಧನೋದ್ಧಾರಿ ಸಹೋದರಿ **ರಾಗ: ಗೌರಿಮನೋಹರಿ**

ಗೋವರ್ಧನೋದ್ಧಾರಿ ಸಹೋದರಿ ಹಿಮಗಿರಿ ಕೌಮಾರಿ ಕಾಮೇಶ್ವರೀ॥ಪ॥ ನಾರಿ ವೈಯಾರಿ ಸುಕುಮಾರಿ ಶಂಕರೀ ಶ್ರೀ ರಾಜೇಶ್ವರಿ। ಪೀಠಕೆ ದಯಮಾಡು ಸುಂದರಿ ಶಂಕರೀ॥1॥ ಬಾಲೇಂದು ಸನ್ನಿಭೆ ಬಾಮಾಮಣಿ ನೀ ಬಾರಮ್ಮ। ಭಕ್ತೈಕ ಚಿಂತಾಮಣಿ ವಾಣಿ ಶುಕವಾಣಿ। ಫಣಿವೇಣಿ ಕಲ್ಯಾಣೀ। ಶ್ರೀ ರಾಜೇಶ್ವರಿ ಪೀಠಕ್ಕೆ ದಯಮಾಡೆ ಶಂಕರೀ॥2॥ ಸಾಸಿರ ದಳಲೋಚನೆ ಶಂಕರಿ ಭೂಸುರ ಕೋಟಿ ಪ್ರಕಾಶೇ। ಸಿರಿ ಶ್ರೀಶ ವರ ವೆಂಕಟಾಧೀಶನ ಸಹೋದರಿ॥3॥

ತಡವೇತಕೆ ಹಸೆಗೇಳೆಲೆ **ರಾಗ: ಹಂಸಧ್ವನಿ**

ತಡವೇತಕೆ ಹಸೆಗೇಳೆಲೆ ಸಖಿಯೇ॥ಪ॥ ಮುನಿ ನಾರದಾನೂ। ಮೂರುಪುಷ್ಪವನ್ನೂ, ಕರೆದು ತಂದುಕೊಟ್ಟೂ। ಕಲಹ ಮಾಡಿಪೋದಾ॥1॥ ದೇವಲೋಕದಿಂದ ರಾಧಾಕೃಷ್ಣ ಬಂದ। ಪಾರಿಜಾತತಂದಾ। ಮುಡಿಸಿದ್ದು ಚೆಂದಾ॥2॥ ವೃಕ್ಷವಾತರುವಾನೂ। ಪಕ್ಷಿವಾಹನಾನೂ। ಲಕ್ಷ್ಮೀದೇವಿಯನ್ನೂ। ಲಕ್ಷ್ಮೀದೇವಿಲೋಲಾ॥3॥

ತಡವೇತಕೆ ಹಸೆಗೇಳೆಲೆ ಸಖಿ **ರಾಗ:ತೋಡಿ**

ತಡವೇತಕೆ ಹಸೆಗೇಳೆಲೆ ಸಖಿ। ಕ್ಷೀರವ ತರುವಾಗ ಪಕ್ಷಿವಾಹನನನ್ನೆ ಪಟ್ಟದರಸಿ ನೀನು ಲಕ್ಷ್ಮೀದೇವಿಯೇ॥1॥ ನಾರದ ಮುನಿಯು ಮೂರು ಪುಷ್ಪವನ್ನು ದೊರೆಗೆ ತಂದು ಕೊಟ್ಟು ಸಲಹೆ ಮಾಡಿಪೋದ॥2॥ ದೇವ ಲೋಕದಿಂದ ರಾಧಾಕೃಷ್ಣ ಬಂದ। ಪಾರಿಜಾತ ತಂದು ಮುಡಿಸಿದ್ದು ಚೆಂದ॥3॥

ದಿವ್ಯಮಣಿಯೆ ಪೀಠಕುರಾವೇ

ದಿವ್ಯಮಣಿಯೆ ಪೀಠಕುರಾವೇ। ದೀನರಕ್ಷಿತೆ।।ಪ।. ದೀನತನಂಬುನ ದಿಕ್ಕ ನಿವೇಡ। ದೀನುಲ ಬ್ರೋಚುಚುನೊ। ಮಾನವತೀ ಭಯ ಹಾರಿಕಿ ರಾಣಿ ವೈ ಮಾನಿನಿ ಮಣಿನುಡು।।1।। ತಾಮರ ಕಮಲಮುನಂದುಲ ಪುಟ್ಟಿ। ತಾಮರಸಾಕ್ಷಿರಾವೇವೇಗ। ತಾಮಸಮೇಲನೆ। ತರುಣಿಲು ಪಿಲುವಾ। ಕಾಮಿತ ಫಲದಾಯಿನಿ।।2।। ದಕ್ಷಿಣ ಕಾಸಿಲೊ ಭಕ್ತುಲು ವೇಡ। ಮುಕ್ತುಲು ನೀ ಚುಚುನೂ। ಚಿತ್ತಜನಕುನಿ। ಪತ್ನಿವೇಗ ಆರ್ತಿತೋಪಿಲು ವಗನೊ।।3।।

ನಾರಿಮಣಿ ಬಾರೆ ಬೇಗ — ರಾಗ:ಕಾಂಬೋಧಿ

ನಾರಿಮಣಿ ಬಾರೆ ಬೇಗ ನಾರ್‍ಯಾರು ಕರೆವರು। ನವರತ್ನದ ಹಸೆಗೀಗ। ನಾರ್‍ಯರು ಕರೆವರು।।1।। ಅಂದಿಗೆ ಕಿರುಗೆಜ್ಜೆ ಮುದ್ದಾದ ಪಾದಕ್ಕೆ ಚೆಂದದಿಂದಲಿ ಕಾಲುಂಗುರ ಗೆಜ್ಜೆ ಗಿಲಿಗಿಲಿ ಎನುತ।।2।। ವಜ್ರದ ಪದಕವ ಒಲೆಯ ಮುತ್ತಿನ ಹಾರ। ಹೆಜ್ಜೆ ಮೇಲೆ ಹೆಜ್ಜೆನಿಡುತ। ಗೆಜ್ಜೆ ಗಿಲಿಗಿಲಿ ಎನುತ।।3।। ಜಡೆಯ ಬಂಗಾರವು ಜಡೆ ಪದಿ ನಾಗರ। ಮುಡಿಯ ಮಲ್ಲಿಗೆ ಹೂವು ಎಡ ಬಲಕೆ ಉದುರುತ।।4।।

ನೀರಜಾಕ್ಷಿ ಹಸೆಗೆ ಬಾರೆ — ರಾಗ: ಹಿಂದೋಳ,ಆದಿತಾಳ

ನೀರಜಾಕ್ಷಿ ಹಸೆಗೆ ಬಾರೆ ನೀರಜ ಚತುರೆ ತ್ರಿಪುರೆ। ಶ್ಯಾಮಲೆ ನಿನ್ನ ಈಗ ಬಾ ಎಂದು ಕರೆವರು। ಸಖಿಯರು ನಿನ್ನ ಪೀಠಕೆ ಈಗ ಸಡಗರದಿಂದ ಕರೆಯುವರು ।।ಪ।। ಹೆಜ್ಜೆಯ ಮೇಲ್ ಹೆಜ್ಜೆಯನಿಟ್ಟು। ಗೆಜ್ಜೆಯ ನಾದವ ಮಾಡುತ। ಚಂದದಿಂದಲಿ ನಿನ್ನ ನಾರಿಯರು ಕರೆವರು। ಅಂಗಜ ಜನಕನ ನೆನೆಯುತ ಹಸೆಗೆ ನೀ ಬಾರೆ ।।1।। ಮುಂಗಾಲಲಿ ನೆರಿ ಚಿಮ್ಮುತಕೈಬಳೆ ನಾದವ ಮಾಡುತ। ಹಣೆಯಲಿ ಕುಂಕುಮವಿಟ್ಟು। ಕೊರಳೊಳು ಮುತ್ತಿನ ಹಾರವ ಧರಿಸಿ। ನಾರಿಮಣಿಯೆ ನವವಧು ನೀನು ಬಾರೆ ।।2।।

ಪಿಲುವರು ಪೀಠಕು ರಾ ತಲ್ಲಿ

ಪಿಲುವರು ಪೀಠಕುರಾ ತಲ್ಲಿ। ಸುಲಲಿತ ಮುಖಿಯಲು ಪಾಡುಚುನೂ। ಪಾಡುಚುನೂ। ವೇಡುಚೂನೂ।।ಪ।। ಸುದತಿ ಮಣಿಯಲು ಶುಭಕರ ಮುಲತೊ। ಸುಂದರ ಪೀಠಕುರಮ್ಮನೂಕು। ಮೇದಿನಿ ಪಾಲಿನಿ ಶ್ರೀಧರ ಶಯನಿ। ಆದರ ಮುಲತೊ ಆನಂದಿಂಚಿ।।1।। ಮುತ್ಯಾಲ ಪೀಠಕು ಮುದಯುತೊನ ಮ್ರುಚು ಚಿತ್ತ ಜನಯ್ಯನ ಪ್ರಿಯ ಸಖಿ ರಾ। ಉತ್ತಮ ಸತಿಯಲು। ಪ್ರೀತಿತೊ ಪಾಡುಕು ಆರ್ತಿಲೊ ಪಿಲುವರು ಹರಸತಿ ರಾ।।2।।

ಬಾಬಾ ಮಣಿ ಬಾ — ರಾಗ: ಹಿಂದೋಳ

ಬಾಬಾ ಮಣಿ ಬಾ ಹಸೆಗೆ। ಶೋಭನೆಯೆ। ಬಾಬಾ ಮಣಿ ಬಾ ಹಸೆಗೆ।।ಪ।। ತಡವೇಕೆನ್ನೊಡತಿಯೆ ಬಲು ಬೆಡಗಿನಿಂದಲಿ। ಅಡಿಯನಿಡುತ ನೀ ಉಡುಪತಿ ಮುಖಿಯಳೇ।।1।। ನೀರೆ ನೀರದ ನೇತ್ರೆಯ ನಾರೀ ಗಣ ಮಕುಟ ಮಣೀ। ಧಾರುಣೀಶ್ವರ ರಾಮ ಮನವ ಸೂರೆಗೊಂಬ ಶೃಂಗಾರಿ।।2।। ಉಟ್ಟಪಟ್ಟೆ ಪೀತಾಂಬರ ಕರಿಬಳೆ ಕಡಗ ಹಾರ। ಇಟ್ಟ ಕುಂಕುಮ ಕಸ್ತೂರಿ ತಿಲಕ ಕಟ್ಟಿದಾರುಮುಡಿ ನಡುಬಳಕುತ್ತಾ।।3।। ಚಂದ್ರವದನೆ ಚಾರು ಶೀಲೆ ಸುಂದರಿ ಸೌಮಂಗಲೆ ಬಾಲೆ। ಕುಂದ ಮುಗಳ ರದನೆ ಚಂದದಿ ಬರುತ ಭಕ್ತರಿಷ್ಟ ಸಲಿಸು।।4।। ಸೀತೆ ವೀರ ಮಾತೆ ವಿಶ್ವಪ್ರೀತ ರಾಮಪ್ರೀತೆ ಭೂಮಿ। ಜಾತೆ ಭೂತ ಭೀತಿ ನಾಶಗೈದ ಪೂತ ಚರಿತೆ ವೈದೇಹಿ ಬೇಗ।।5।।

ಸುಂದರಿ ಬಾರೇ ಹಸೆಗೆ — ರಾಗ ಜುಂಜೋಟಿ

ಸುಂದರಿ ಬಾರೇ ಹಸೆಗೆ। ತ್ರಿಪುರಾ।।ಪ।। ಯೋಗಿನಿಯೇ ಯೋಗೇಶ್ವರೀ ಯೋಗೇಂದ್ರ। ಇಂದ್ರಾರಾಜಿತೆ। ಯೋಗಾಸ್ತುತೆ। ಭಾಗ್ಯನಿಧೆ।।1।। ಮಾನೂನಿ ದೀನಾವಳಿ ಕಾಮಾಕ್ಷಿಯೆ। ನಾ ನಂಬಿದೆನೆ। ನಾನಾಮುಖಿ। ಜ್ಞಾನದಾಯೆ। ಶ್ರೀನಾಥನ ಪ್ರೇಮಾನುಜೇ।।2।। ರುಂಡಮಾಲಾ। ಮಂಡಿತೇ। ಜಂಡ್ಯಾತಕೆ। ಚಾಮುಂಡಿಯೇ। ಶುಂಡಾಲ। ಕೋದಂಡಾಜ್ವಾಲೆ।

ಚಂಡಿಕೇಲಮಾಕಾಶ್ರಯೇ॥3॥

ಬಾ ನೀರೆ ವೈಯ್ಯಾರೆ ರಾಗ: ಸಿಂಧುಭೈರವಿ

ಬಾ ನೀರೆ ವೈಯ್ಯಾರೆ ಬಲು ಗಂಭೀರೆ। ಬಾ ಪೀಠಕೆ ನೀ॥ಪ॥ ಸುಂದರೀ ನಿನ್ನನೂ। ಚಂದದಿ ಕರೆವೇ। ಅಂದವಾದ ಕುಂದಣದ್ದಸೆಗೇ ಚಂದದಿಂದ ನೀ॥ಅ.ಪ॥ ರತ್ನ ಖಚಿತವಾದ ಚಿತ್ರದಾ ಹಸೆಗೇ। ಕೃತ್ತಿವಾಸನ ಸತಿ। (ನಿನ್ನ) ಅರ್ಥಿಯಿಂ ಕರೆವೇ। ಮುತ್ತಿನಾರತಿಗಳ ಹಸ್ತದಿಂ ಪಿಡಿದೂ। ಮುತ್ತೈದೆಯರೆಲ್ಲ ಕರೆವೋರು ನಿನ್ನ ಚಿತ್ತೈಸು ದೇವಿ ನೀ॥1॥

ಬಾ ಲಲಿತಾಂಗಿಯೇ ರಾಗ: ಲಲಿತ

ಬಾ ಲಲಿತಾಂಗಿಯೇ ಬೇಗನೆ ಹಸೆಗೇ। ಜಲಜಾಕ್ಷಿಯರ್ ವರ ಪೀಠಕೇ॥ಪ॥ ಬಾಲಕ ಮಣಿವೇಳೆಯಾಂಗಿಯೂ। ಲೀಲೆಯಿಂದಲಿ ಗುಣ ಶೀಲೆ। ಘನಲೀಲೆಯಿಂದಲಿ ಗುಣಶೀಲೇ॥1॥ ಸತತ ವಿಷ್ಣುದೇವತೆಯು।ಪೊಗಳು ತಾ। ರತುನ ಮಂಟಪಕೆ। ಸಾರುತ ಪತಿಯ ಬಳಿಯ ಸೇರುತನೀನಲಿವ। ಸತಿಯೆ ನೀ ಸಲೆ। ಸಂಭ್ರಮದಲಿ ಬಾ॥2॥ ಕೋಮಲಾಗಿಯರೂ। ಭೂಮಿ ಜಾಲದವ। ರಾಮ ಶ್ರೀ ಚಂಪಕಧಾಮನಾ। ಪ್ರೇಮದಿಂದಲಿ ಭಾಮೆಯರೆಲ್ಲರೂ। ಸುಕ್ಷೇಮದಿಂದಲೀ। ಕರೆಯುವರೂ॥3॥

ಬಾರಮ್ಮ ಬೇಗ ಹಸೆಗೆ ರಾಗ: ಆರಭಿ

ಬಾರಮ್ಮ ಬೇಗ ಹಸೆಗೆ। ಭಾಗ್ಯದ ಲಕ್ಷ್ಮೀ ದೇವಿ॥ಪ॥ ಪೀತಾಂಬರದ ನೆಲೆಯು। ಜಾತೀಮುತ್ತಿನ ಸರವು। ಸಾಸೀರ ನಾಮದರಸಿ। ವಾಕ್ಕೂಗಳಾಲಿಸುತಲಿ॥1॥ ಜಡೆಯಾ ಬಂಗಾರಧರಿಸಿ। ಹಣೆ ಯೋಳಾ ಕುಂಕುಮವಿರಿಸಿ। ಅಡಿಮೆಲ್ಲಡಿಗಳಿಡುತ। ಸಡಗರದಿಂದ ಹಸೆಗೆ॥2॥ .... ಕಂಕಣವಿಟ್ಟು ಫಣೆಯೋಳು ತಿಲಕವಿಟ್ಟು। ವರಕಂಚುಕಾವ ತೊಟ್ಟು। ಭಜಿಪಾರು ಭಕ್ತರೊಟ್ಟು॥3॥

ಬಾರೆ ಕೋಕಿಲ ವಾಣಿ ರಾಗ:ಮಲಯಮಾರುತ, ಮಿಶ್ರಛಾಪುತಾಳ

ಬಾರೆ ಕೋಕಿಲ ವಾಣಿ। ಬಾರೆ ಬಂಭರ ವೇಣೀ। ಬಾರೆ ಹಸೆಗೆ ರುಕ್ಮಿಣಿ। ನೀರೆ ನೀ ಕಲ್ಯಾಣಿ॥ಪ॥ ಲೋಲ ನೇತ್ರೆಯೆ। ನಿನ್ನ ನೋಲೈಸುತಿರುವರು। ನಳಿನ ನಯನೆಯರು। ಆಲಸ್ಯವೇತಕೆ॥ಅ.ಪ॥ ಕೋಗಿಲೆಗಳ ಮೃದು। ರಾಗಕೆ ವನಲಕ್ಷ್ಮಿ। ರಾಗವ ತಳೆಯುವಂತೀಗಳಾನಂದದಿ॥1॥ ಪಂಕಜಾಂಬಕಿ ದಿವ್ಯಾಲಂಕಾರ ಶೋಭಿತೆ। ಬಿಂಕದಿ ಬಾರೆ ಶಶಾಂಕಾರ್ಧ ಸಮಫಾಲೆ॥2॥ ವರಯದು ತಿಲಕ ಶ್ರೀ। ನರಸಿಂಹನೊಡಗೂಡಿ ಹರುಷದಿಂ ಬಾರೆ। ಸುಂದರ ಹಂಸಗಮನೆ ನೀ॥3॥

ಬಾರೇ ಹಸೆಗೇ ಭಾಮಿನಿ ರಾಗ: ತೋಡಿ

ಬಾರೇ ಹಸೆಗೇ ಭಾಮಿನಿ ವನಿತಾಮಣಿ ॥ಪ॥ ವನಜಲೋಚನೆ ಬಾರೆ ನೀ। ಮಲ್ಲಿಗೆ ಲತೆಗಳು ಪಲ್ಲವಿಸುತಿದೆ। ಫುಲ್ಲಲೋಚನೆ ಬಾರೆ ನೀ ವನಿತಾಮಣಿ॥1॥ ಸುಂದರಾಂಗಿಯೆ ನೀ ಬ್ರಹ್ಮನರಾಣಿಯೇ। ನಗಧರನರಸಿ ವನಿತಾಮಣಿ ಬಾರೇ॥2॥ ಬಗೆ ಬಗೆಯಿಂದಲಿ ಸ್ತುತಿಪೆನು ನಿನ್ನನು। ಪದ್ಮಾವತಿ ತಾಯೇ ಪರಮಪಾವನೆ ನೀ॥3॥

ಹಸೆಗೆದ್ದು ಬಾರೆ ಬಿಸಜಾಕ್ಷಿ ರಾಗ: ಮೋಹನ-ಆದಿತಾಳ

ಹಸೆಗೆದ್ದು ಬಾರೆ ಬಿಸಜಾಕ್ಷಿ ಮೋಹನೆ॥ಪ॥ ವಾಸುಕಿಶಯನ ಶ್ರೀವಾಸುದೇವನ ಪ್ರಿಯಳೆ॥ಅ.ಪ॥ ಕ್ಷೀರಸಾಗರವನ್ನು ಸುರರು ಅಸುರರು ಮಥಿಸೆ। ಸುರರನು ಪೊರೆಯಲು ವಾರಿಧಿಯೊಳುದಿಸಿದೆ॥1॥ ಪತಿಯ ವಕ್ಷಸ್ಥಳವ ಹಿತದಿ ನೀ ಸೇರುತ। ಪತಿತರ ಪೊರೆಯುವ ಸತಿಶಿರೋಮಣಿಯೆ॥2॥ ಕರಿಗಿರಿ ನಿಲಯ ಶ್ರೀಹರಿಯ ಪಟ್ಟದ ರಾಣಿ। ನಿರುತವು

ಸ್ಮರಿಸಲು ಕರುಣದಿ ಪೊರೆಯುವೆ॥3॥

ಹಸೆಗೆ ಬಾರೆ ನೀ ಭಾಮಿನೀ **ರಾಗ: ಷಣ್ಮುಖಪ್ರಿಯ-ಆದಿತಾಳ**

ಹಸೆಗೆ ಬಾರೆ ನೀ ಭಾಮಿನೀ। ಕೃಷ್ಣನ ಒಡಗೂಡಿ ಬೇಗನೆ ಬಾರೆ। ಮುತ್ತಿನ ಮಂಟಪದಿ ಹಸೆಮಣೆ ಹಾಕಿ। ಮುತ್ತೈದೆಯರು ಕಾದು ನಿಂತಿಹರು॥1॥ ಪೀತಾಂಬರ ಉಟ್ಟು ಪ್ರೀತಿಯಿಂದಲಿ ನೀನು। ಮಲ್ಲಿಗೆ ಸಂಪಿಗೆ ಮಾಲೆ ಮುಡಿದು। ಮುಗುಳು ನಗೆಯಿಂದ ಮುಖವ ತೋರುತ। ಮಂಗಳಾಂಗಿಯೇ ನೀನು ಬೇಗನೆ ಬಾರೆ॥2॥ ಸಖಿಯರು ನಿನ್ನನು ಸಡಗರದಿ ಕರೆವರು। ಪ್ರಿಯತಮನ ಜೊತೆಗೂಡಿ ಬೇಗನೆ ಬಾರೆ। ಸಂತಸದಿಂದಲಿ ಸೊಬಗು ಬೀರುತ। ಅರಳಿದ ಹೂವಿನಂತೆ ಆನಂದದಿಂದ॥3॥

ಹಸೆಗೇ ಬಾ ಶಶಿಮುಖಿಯೆ **ರಾಗ:ಧನ್ಯಾಸಿ**

ಹಸೆಗೇ ಬಾ ಶಶಿಮುಖಿಯೆ॥ ಸಮಸ್ತ ಜಗಕೆ ಮಾತೆ ಸೀತೆ॥ಪ॥ ಮುತ್ತಿನ ಪೀಠಕೆ ನೀನತಿ ಬೇಗ। ಉತ್ತುಮರೆಲ್ಲರು ಕರೆವರು ಈಗ। ಪುತ್ಥಳಿ ಗೊಂಬೆಯಂತಿರುವ ನೀನೀಗ। ಚಿತ್ತವ ತೋರಿ ಕರುಣಿಸು ಬೇಗ। ಮುತ್ತೈದೆಯರು ಕೂಡಿ ಬೇಡುವರೀಗಾ॥1॥ ಧರೆಯೊಳು ದಕ್ಷಿಣಕಾಶಿಯ। ಭಕ್ತರನೆಲ್ಲರ ಕರುಣಿಸುತೀಗ। ಲಕ್ಷ್ಮೀದೇವಿಯೆ ಬಾರೆಲೆ ಬೇಗಾ। ಆರ್ತಿಯಿಂ ಕರೆವೊ ಹಸೆಗೆ ನೀನೀಗ॥ ಚಿತ್ತಜನಯ್ಯನ ರಾಣಿಯೆ ಬೇಗ॥2॥

ಹಸೆಗೇಳೆ ರುಕ್ಮಿಣಿ ಜನನೀ

ಹಸೆಗೇಳೆ ರುಕ್ಮಿಣಿ ಜನನೀ॥ಪ॥ ಕಟ್ಟಳೆ ಮೀರಿ ಕೃಷ್ಣನ ವರಿಸಿ। ನೀ ಶ್ರೇಷ್ಠತೆಯಂ ಪೊಂದಿದೆಯೆ ಶ್ರೇಷ್ಠಳೆ ಬಾರೆಲೆ॥1॥ ಹತ್ತಾವತಾರ ಎತ್ತಿದ ಧೀರ ಸಚ್ಚರಿತ। ಅಚ್ಯುತನ ಮೆಚ್ಚಿನ ರಾಣಿಯೆ॥2॥ ಮರುಗ ಮಲ್ಲಿಗೆ ಮೊಗ್ಗು ಶಾವಂತಿಗೆ ಮುಡಿಯೊಳಗೆ। ಧರಿಸುತಲೆ ಮದಗಜಗಾಮಿನಿ॥3॥

ಹಸೆಗೆ ಕರೆಯೋದು – ವಧುವರರನ್ನು

ಬಾರೋ ಬೇಗ ಕರೆವೆನೀಗ ರಾಗ: ಜಂಜೋಟಿ - ಆದಿತಾಳ

ಬಾರೋ ಬೇಗ ಕರೆವೆನೀಗ ರಾಧೆಯೊಡನೆ ಮಾಧವ। ಮೆರೆವ ದೊರೆಯೆ ಆಸನದಿ ಮಂಡಿಸೋ ನೀ ಯಾದವ॥ಪ॥ ನಾಗಮರಿ ಚೆಲುವಮರಿ ತಿರುವಿ ತಿರುವಿ ಗೈದಿಹೆ। ಬಾಲಬೀಸಿ ತಾಳಹಾಕಿ ಹೆಡೆಯನಾಡಿ ಕರೆದಿದೆ॥1॥ ಝುಣಕ ಝುಣ ಜುಮ್ಮ ಜುಮ್ಮ ನಾದ ಬೀರಿ ಬಾ ಹರಿ। ಚೆನ್ನ ಚೆಲುವ ಚೆನ್ನದ ಹಸೆಗೆ ರಾಧೆಯೊಡನೆ ಶ್ರೀಹರಿ॥2॥ ಚೆನ್ನದ್ ಎಲೆ ಬಣ್ಣದ್ ಎಲೆ ನಿಂತು ನಿನ್ನ ಕರೆದಿದೆ। ಬಣ್ಣ ಬಣ್ಣ ಬೆರೆತು ಮನವಸೂರೆಗೊಂಬ ಹಸೆಗೆ ನೀ॥4॥

ಸಾರಸಾಕ್ಷ ಬಾರೋ ನೀ **ರಾಗ: ಮಾರ್ಗಹಿಂದೋಳ**

ಸಾರಸಾಕ್ಷ ಬಾರೋ ನೀ ಪೀಠಕ್ಕೀಗಾ॥ ಸಾರಸಾಕ್ಷ ಬಾರೋ॥ ನೀ ಪೀಠಕ್ಕೆ॥ಪ॥ ಮುತ್ತುರತ್ನಂಗಾಳೂ। ಕೆತ್ತಿದಾ ಪೀಠಾವೂ। ಉತ್ತುಮಾಂಗ್‌ನೇಯಾರಿತ್ತು ಬೇಡುವೇವೂ। ಚಿತ್ತಾಜಾಪಿತಾನೇ ಅರ್ತಿಯಿಂದಲಿ। ಚಿತ್ತೈಸುದೇವಾ। ಸತ್ಯಭಾಮೆ ಸಹಿತ॥1॥ ನೀರೊಳಾಗೆ ಪೊಕ್ಕು। ಭಾರವನ್ನೆ ತಾಳಿ। ಧಾರುಣೀಯತಂದೇ। ಘೋರ ರೂಪವಾಂತು। ಘೋರವೂಪವಾಂತು ತರುಳಾದಿಗೆದ್ದು। ನಾರಸಿಂಹ ದೇವಾ। ನಾರಿಲಕ್ಷ್ಮೀಸಹಿತ॥2॥ ಶಿಲೆಯ ಸ್ಥಿರವಮಾಡೀ ಗೋಪಿಯಾರ ಕೂಡೇ। ಲಲನೆಯಾರವ್ರತ। ವಳಿದು ತುರುಗವೇರಿ। ಜಲಜನಾಭ ಶ್ರೀ ಹರೀ ಜಲಜನಾಭಶೌರೀ॥3॥

ಹರಿ ಸಹಿತಲಿ ಬಾ **ರಾಗ: ಸಿಂಧುಭೈರವಿ**

ಹರಿ ಸಹಿತಲಿ ಬಾ। ಹಸೆಗೆ ಈಗ॥ಪ॥ ಕಿರುನಗೆ ನಗುತಾ ನೆರಿಯನೆ ಚಿಮ್ಮುತಾ। ಸರಸಗಳಾಡುತ। ಉರಗವೇಣಿಯೇ

ಬಾ॥ಅ.ಪ.॥ ಪೀತಾಂಬರವನು ಪ್ರೀತಿಯಿಂದುಡತಲಿ ನಾ। ಶ್ರೀಕೃಷ್ಣನು ಕಾದಿರುವನು ಬಾ॥1॥ ಕಂಕಣ ಕೈಯೊಳು। ಕುಲುಕುತ ಹೊಳೆಯುತಾ। ವೆಂಕಟರಮಣನ ಬಿಂಕದರಸಿ ಬಾ॥2॥

ಹಸೆಗೇ ಬಾರೆಲೋ ದ್ವಾರಕ ವಾಸ **ರಾಗ: ನೀಲಾಂಬರಿ**

ಹಸೆಗೇ ಬಾರೆಲೋ ದ್ವಾರಕ ವಾಸ ॥ಪ॥ ಸುಂದರ ವನದೊಳು ರಾಧೆಯೊಡನೆ ನೀ। ಸುಮಗಳ ಮಧ್ಯದಿ ನಾಟ್ಯವನಾಡಿದೆ॥1॥ ರಾಜಸುಯಾಗದಿ ಅಗ್ರಪೂಜೆಯ ನೆವದಿ। ಶಿಶುಪಾಲನ ಕೊಂದ ಭಾಮೆಯ ಸಖನೆ॥2॥ ಸರಸಿಜ ನೇತ್ರೆಗೆ ಸರಸೀರುಹಾಕ್ಷಗೆ। ಸರಸದಿ ಸಂಪಿಗೆ ತೈಲವನೊತ್ತುತ॥3॥ ಅಸುರ ಸಂಹಾರಗೆ ವಸುದೇವ ಸುತನಿಗೆ। ಕುಸುಮ ಬಾಣನ ಪಿತಗೆ ಪರಿಪರಿ ತೈಲದಿ॥4॥

ಹಸೆಗೀಗ ಬಾರೆಲೆ ನೀರೆ

ಹಸೆಗೀಗ ಬಾರೆಲೆ ನೀರೆ ಶ್ರೀ ಹರಿಸಹಿತ॥ಪ॥ ಮುತ್ತಿನ ಹಸೆಗೆ ರತ್ನದ ಮೇಲ್ಹಾಸು। ಮುದ್ದು ಶ್ರೀಕೃಷ್ಣನ ಮೋಹದಿಂ ಕರೆತಾರೆ॥1॥ ಮುತ್ತಿನ ರಂಗವಲ್ಲಿ ಪಚ್ಚೆಯ ತೋರಣ। ಮುರಹರಿಯ ಕೂಡೆ ನಲಿನಲಿದಾಡುತ॥2॥ ಬಾಲೇರು ನಾವ್ ನಿಂತು ಪಾಡೀ ಕರೆವೆವೆ। ಬಾಲಾಗೋಪಾಲನ ಕರಪಿಡಿದು ಬಾರಮ್ಮ॥3॥

ಎಣ್ಣೆಶಾಸ್ತ್ರ - ಗಂಡಿಗೆ ಮತ್ತು ಹೆಣ್ಣಿಗೆ

ಹಸೇಗೇ ಬಾರೋ ಬೇಗಾನೇ **ರಾಗ: ಶ್ರೀ**

ಹಸೇಗೇ ಬಾರೋ ಬೇಗಾನೇ। ಶ್ರೀ ಕೃಷ್ಣಾರುಕ್ಮಿಣೀ ಸಹಿತಾ॥ಪ॥ ಪಾದಾರವಂದ್ಯನಯನಾ। ಹರಿಯೇ। ಮಂದರೋದ್ಧಾರ॥ಅ.ಪ.॥ ಕಂದನಾ ನುಡಿಯಕೇಳಿ। ಶ್ರೀಹರಿಯೂ ಕಂಬವಾ ಸೀಳೀ। ಸಿಡೀದೂ ಒಡೆದು ಬಂದನಾ ಹರೀಯೂದಯವ ತೋರಿದೆಯೋ॥1॥ ರಾಮಾವತಾರದಲ್ಲೀ। ಸೀತೆಯಾ ವರಿಸಿದೀಯಲ್ಲೋ। ಪರಾಶುರಾಮರಾ ಸಂಗ। ಯುದ್ಧವಾ। ಮಾಡುನೀನಿಗಾ॥2॥ ರಾಜರಾಜಾರೇ ಪೂರಿತಾ ವರದ ರಾಜರೇ ರವೀ ಕೋಟಿತೇಜಾರೇ ಪೀಠಕೂಲೇಸಿಂಪೋದಾರೆ॥3॥

ಎಣ್ಣೆಯನೊತ್ತಿದರು ಹರಿಗೆ **ರಾಗ:ಬೇಹಾಗ್**

ಎಣ್ಣೆಯನೊತ್ತಿದರು ಹರಿಗೆ। ಕನ್ಯೆಯರೆಲ್ಲ ಕೂಡಿ। ಕರುಣಾಕರ ವಂದ್ಯಗೇ॥ಪ॥ ಮಲ್ಲೆ ಮಲ್ಲಿಗೆ ಜಾಜಿಯು ಸಂಪಿಗೆ। ಚೆಲ್ವ ಗುಲಾಬಿ ಮುಡಿಸುತ ಹರಿಗೇ॥1॥ ಮಾಲತಿ ಭೃಂಗವು ಮಂದಾರ ಕೇತಕಿಯು ಚೆಲುವಾಂಗನೇರು ಕೂಡಿ ಸನಕಾದಿ ವಂದ್ಯಗೆ॥2॥

ನೀಲ ಲೋಚನೆಗೆ ಶ್ರೀ ಲಲನೆಯರು **ರಾಗ:ನೀಲಾಂಬರಿ**

ನೀಲ ಲೋಚನೆಗೆ ಶ್ರೀ ಲಲನೆಯರು ತೈಲವನೊತ್ತಿದರೂ। ಸಖಿಗೇ ತೈಲವನೊತ್ತಿದರು॥ಪ॥ ಅಂಗನೆಯರು ಕೂಡಿ ಮಂಗಳ ಪಾಡಿ। ಮಂಗಳಾಂಗಿಗೆ ಸಂಭ್ರಮದಿ। ಅಂಗೈಯೊಳು ನವ ಭೃಂಗಾಮಲಕವು ಅಂಗನಾ ಮಣಿಗೆ ಆದರಿದಿ॥1॥

ಒತ್ತಿದರೆಣ್ಣೆಯ ಪದ್ಮಾವತಿಗೀಗ (ಎಣ್ಣೆಶಾಸ್ತ್ರ-ಹೆಣ್ಣಿಗೆ) **ರಾಗ:ಆರಭಿ, ಆದಿತಾಳ**

ಒತ್ತಿದರೆಣ್ಣೆಯ ಪದ್ಮಾವತಿಗೀಗ। ಆಡುತ ಪಾಡುತ ನಾರಿಯರು। ಘಮಘಮಿಸುವ ಮಲ್ಲಿಗೆ ಹೂವಿನಿಂದ। ಸಂಪಿಗೆ ಎಣ್ಣೆಯನೊತ್ತಿದರು॥ಪ॥ ಹಣೆಗೆ ಕುಂಕುಮವಿಟ್ಟು ಮಲ್ಲಿಗೆ ಮುಡಿಸಿ। ಮುತ್ತಿನಕ್ಷತೆಗಳ ನೆತ್ತಿಯೊಳ್ ಇಡುತಲಿ। ಮತ್ತೆ ನಾರಿಯರು ಮುತ್ತಿನಾರುತಿ ಪಿಡಿದು। ಆರತಿ ಮಾಡಲು ಕಾದಿಹರು॥1॥ ಪರಿಮಳ ಬೀರುವ ಸಂಪಿಗೆ ಎಣ್ಣೆಯಿಂದ

ಪರಿಮಳದೆಣ್ಣೆಯ ಒತ್ತುವರು। ಬೆಳ್ಳಿಬಿಂದಿಗೆಯಲಿ ಪನ್ನೀರು ತುಂಬಿದ। ಅರಶಿನ ಎಣ್ಣೆ ಹಚ್ಚಿ ಎರೆಯುವರು॥2॥

ತೈಲವನೊತ್ತಿರಿ ಈಗ (ಎಣ್ಣೆಶಾಸ್ತ್ರ-ಗಂಡು) **ರಾಗ:ತಿಲಂಗ್**

ತೈಲವನೊತ್ತಿರಿ ಈಗ। ಲಲನೇಯರೆಲ್ಲ ಬೇಗ॥ ಲಲಿತಾಂಗನಿಗೆ ಬೇಗ॥ಪ॥ ಮಹಾನುಭಾವಗೆ ಮೋಹಿನಿಪ್ರಿಯಗೆ। ಮಾನುನಿ ಮಣಿಯರು ಬೇಗ। ಮನುಮಥನಯ್ಯಗೆ ಮಾ ಮನೋಹರಗೆ। ಪುನುಗು ಜವ್ವಾಜಿ ಬೆರೆಸಿದ ತೈಲವ॥1॥ ಹಿಮಗಿರಿ ಕುಂತಳ ಕೇಸರಿ ತೈಲ। ಭ್ರಮಿಸುತ ರಮೆಯರು ಹರಿಗೇ। ಸೊಂಪನು ಸೂಸುತ ಕಂಪನು ಬೀರುತ। ತಂಪನ್ನುಯೀಯುವ ಸಂಪಿಗೆ ತೈಲವ॥2॥

ತೈಲವನೊತ್ತಿದರ್ ಲಲನೆಯರೆಲ್ಲರೂ (ಎಣ್ಣೆಶಾಸ್ತ್ರ-ಹೆಣ್ಣಿಗೆ) **ರಾಗ:ನೀಲಾಂಬರಿ**

ತೈಲವನೊತ್ತಿದರ್ ಲಲನೆಯರೆಲ್ಲರೂ। ಜಲಜ ಸಂಭವೆಗೀಗಾ। ಸುಲಲೀತಾ ಕುಸುಮದಾ॥ಪ॥ ಅಂಗನೇಯರೂ ಕೂಡೀ। ಮಂಗಳಾವನು ಪಾಡೀ। ಅಂಗೈಯೊಳು ನವಾ ಭೃಂಗಾಮಲಕದಾ॥1॥ ಸಾರಸಾ ನೇತ್ರೇಗೆ ಶ್ರೀರಾಮಣೀಗೇ। ದಿವ್ಯಾಚಾರುಚರೀತ್ರೆಗೇ ಸಾರಸಾಸುಮದಿಂ॥2॥ ಸುರಗಿ ಸೇವಂತಿಗೇ ಪರಿಮಳಾ ಸುಮಗಳಾ। ಸಿರಿಮಾಂಗಿರಿಪತೀಯರಸೀಗೇ ಮುದದಿಂ॥3॥

ಗೋಧಿಕಲ್ಲು ಶಾಸ್ತ್ರ

ಸಿದ್ಧಿವಿನಾಯಕ ಸಿದ್ಧಿಯ (ಸಂಡಿಗೆ ಇಡುವುದು) **ರಾಗ: ಭೌಳಿ**

ಸಿದ್ಧಿವಿನಾಯಕ ಸಿದ್ಧಿಯ ಮಾಡಯ್ಯ ಉದ್ದಿನುಂಡಲಿಗೆ ನಿನಗೀವೆ। ಸಿದ್ಧಿವಿನಾಯಕ ನಿನಗೀವೆ ಕಾರ್ಯವು ಆಗುಮಾಡಯ್ಯ ನೀ ಗಣನಾಥ॥1॥ ಉದ್ದು ಕರಿಯ ಉದ್ದು ಉದ್ದು ಬಿಳಿಯ ಉದ್ದು ಉದ್ದನ್ನೇ ತೊಳೆದ ತಿಳಿನೀರು। ತಿಳಿನೀರ ಕುಡಿಯೋಕ್ಕೆ ಬಂದ ಪಕ್ಷಿಗಳೆರಡು ಹೇಳಿದವೇ ಮನದ ಶಕುನಾವ॥2॥ ಆಚೆ ಕೊಂಬೆಯ ಪಕ್ಷಿ ಈಚೆ ಕೊಂಬೆಗೆ ಹಾರಿ ಮಾತುಮಾತಿಗೆ ಸ್ವರಗೈದು। ಸ್ವರಗೈದು ಆ ಪಕ್ಷಿಗಳೆರಡು ಹೇಳಿದವೇ ಮನದ ಶಕುನಾವ॥3॥ ಅಕ್ಕಿ ಸಣ್ಣ ಅಕ್ಕಿ ಅಕ್ಕಿ ಕೆಂಪಕ್ಕಿ ಅಕ್ಕಿಯ ತೊಳೆದ ತಿಳಿನೀರು। ತಿಳಿನೀರ ಕುಡಿಯೋಕ್ಕೆ ಬಂದ ಪಕ್ಷಿಗಳೆರಡು ಹೇಳಿದವೇ ಮನದ ಶಕುನಾವ॥4॥ ಎಳ್ಳು ಕರಿಎಳ್ಳು ಎಳ್ಳು ಬಿಳಿಎಳ್ಳು ಎಳ್ಳನ್ನೆ ತೊಳೆದ ತಿಳಿನೀರು। ತಿಳಿನೀರ ಕುಡಿಯೋಕೆ ಬಂದ ಪಕ್ಷಿಗಳೆರಡು ಹೇಳಿದವೇ ಮನದ ಶಕುನಾವ॥5॥ ಒಂದೂರು ಮಗಳೀಗೆ ಅಂದಣವ ಓಲೆಯ ಕಳುಹಯ್ಯ ಒಂದೂರು ಮಗಳು ಬರಬೇಕು ಬೇರೂರು ಮಗಳೀಗೆ ಓಲೆಯ ಕಳುಹಯ್ಯ ಬೇರೂರು ಮಗಳು ಬರಬೇಕು॥6॥ ಅಕ್ಕ ತಂಗಿಯರ್ ಕೂಡಿ ಮನದ ಮಾತಾಡುತ್ತ ಹಪ್ಪಳ ಸಂಡಿಗೆ ಇಡಬೇಕು॥ಮುದದಿ ಮಾಡು ಮದುವೆಯ ಶುಭಕೆಲಸಾವ॥7॥

ಮಲನೀರು

ಮಾಡಿದರು ಮಲನೀರನು

ಮಾಡಿದರು ಮಲನೀರನು ॥ಪ॥ ಚೆಲುವೆಯನು ಕುಳ್ಳಿರಿಸಿ ॥ಅ.ಪ॥ ತುಳಸೀ ಮುಂದೆ ಮಣೆಯನಿಟ್ಟು। ಹೊಳೆವ ಗಡಿಗೆಯ ಮುಂದಕಿಟ್ಟು। ಕೆನ್ನೆಗೆ ಅರಿಸಿನ ಬಳಿಯುತಲಾಗ। ಚೆನ್ನೆಗೆ ಓಕಳಿನೀರನೆ ಚೆಲ್ಲಿ ॥1॥ ಪಾದಕೆ ಅರಿಶಿನ ಬಳಿಯುತಲಾಗ। ಅಂದದ ಚೆಲುವೆಯ ಮೊಗದ ತುಂಬ। ತುಂಬಿ ಗಡಿಗೆಲಿ ಓಕಳಿ ನೀರ। ಸುರಿಯುತ ತಾವು ನಲಿಯುತಲಿ ॥2॥

ಮೀಯುವ ಮನೆಗಳಾ ರೂಪಾವ **ರಾಗ: ಆನಂದಭೈರವಿ**

ಮೀಯುವ ಮನೆಗಳಾ ರೂಪಾವ ಏನೆಂಬೆ ಹೂವನು ಕಾಲ್ಗಹರಡಿ ಗಿಣಿಹಿಂಡು। ಗಿಣಿಹಿಂಡು ನಾಟಕ ಶಾಲೆ ಮೀಯುವೋ ಮನೆಯಾ ಸಡಗರ॥ಪ॥ ಬಚ್ಚಲ ಮನೆಗಳ ವಿಸ್ತಾರ ಏನೆಂಬೇ ಹೂವಿನ ಕಾಲ್ಗಹರಡಿ ಗಿಳಿಹಿಂಡು।

ಗಿಳಿಹಿಂಡು ನಾಟಕ ಶಾಲೆ ಮೀಯುವೋ ಮನೆಯ ಸಡಗರ।। ಆಯದಲಿ ಛಾಯದಲಿ ಮೂರಾಯದಲಿ ಒಲೆ ಹೂಡಿ ಶ್ರೀ ಗಂಧದ ಚಕ್ಕೆ ಒಲೆಗಿಟ್ಟು ಒಲೆಗಿಟ್ಟು। ಕಾದವೆನೀರೂ ಮಿತ್ರೆ ಮಗನ ಸಡಗರ।। ಅಂದದಲಿ ಚೆಂದದಲಿ ಮೂರಂದದಲಿ ಒಲೆಹೂಡಿ ಶ್ರೀಗಂಧದ ಚಕ್ಕೆ ಒಲೆಗಿಟ್ಟು ಒಲೆಗಿಟ್ಟು। ಕಾದವೆ ನೀರು ಮಿತ್ರೆಯ ಮಗನ ಜಳಕಕ್ಕೆ।।

ಬೆನ್ನೀರ ತೊಳೆಯಿರೇ **ರಾಗ: ಮಾಯಾಮಾಳವಗೌಳ**

ಬೆನ್ನೀರ ತೊಳೆಯಿರೇ ಬಾಲನ್ನ ತಾಯಿಗೇ। ಇನ್ನೆರಡು ಹಡೆದ ಅಣುಗೀ ಮಹಲಕ್ಷ್ಮೀಗೆ। ಬೆನ್ನೀರ ತೊಳೆದು ಹರಸಿದರು।।1।। ಮಲ್ನೀರ ತೊಳೆಯಿರೇ ಮಗುವಿನ ತಾಯಿಗೇ। ಮತ್ತೆರಡು ಹಡೆದ ಅಣುಗಿ-ಮಹಲಕ್ಷ್ಮೀಗೆ। ಬೆನ್ನೀರ ತೊಳೆದು ಹರಸಿದರು।।2।। ಅಕ್ಷತೆಯ ತಳಿಯಿರೇ ಲಕ್ಷಣವಂತೆಗೆ। ಇನ್ನೆರಡು ಹಡೆದ ಅಣುಗಿ-ತಂಗ್ಯವ್ವಾಗೇ। ಅಕ್ಷತೆಯ ತಳೆದು ಹರಿಸಿದರು।।3।।

ದಿಬ್ಬಣ

ಬಂದಿರೊ ಸರ್ವರು ಬಂಧುಗಳೆಲ್ಲರು **ರಾಗ: ಕಲ್ಯಾಣಿ**

ಬಂದಿರೊ ಸರ್ವರು। ಬಂಧುಗಳೆಲ್ಲರು। ಬಂದಿರೊ ನೀವೆಲ್ಲರೂ।।ಪ।। ಇಕೊಳಿಲ್ಲಿ ಪರಿಮಳ ಜಲವು। ಮಗುಳಲ್ಲಿ ಶುದ್ಧೋದಕವು। ತೊಳಕೊಳ್ಳಿರೆಲ್ಲರಿಗೀ। ಕೈ। ಕಾಲು ಮುಖಗಳನೆಲ್ಲವು।।1।। ಸವಿಗೊಳ್ಳಿರೀ ತನಿವಾಲ। ಕೈಗೊಳ್ಳಿರೀ ಸೀಯಾಳ। ರನದಾಳಿಕಬ್ಬು ಕೋಲ। ಬಲುರಸವಾದ ಪಾನಕಂಗಳ।।2।। ಮೃದರತ್ನ ಕಂಬಳಿಯಲ್ಲಿ। ನವರತ್ನ ಹಸೆಮಣೆಯಲ್ಲಿ। ವರವಿಷ್ಟರಗಳಲ್ಲಿ ಕುಳ್ಳಿರಿ ಸುಖದಲ್ಲಿ।।3।। ತಂಗಾಳಿ ಬೀಸುವ ವ್ಯಜನ। ಶೃಂಗಾರವಾಗಿದೆ ಭವನ। ಮಂಗಲೋತ್ಸವ ಕಾಗಿ ಶೃಂಗಾರ ಗೈದಿಹ ಭುವನ।।4।। ಮಂದಾರ ಮಲ್ಲೀ ಕಮಲ। ಕುಂದಾರವಿಂದದ ಮುಗುಳ। ಸೌಗಂಧಿ ಪನ್ನೀರ ಶೃಂಗಾರ ಗೈದಿಹ ಹದನ।।5।।

ಹೆಬ್ಬಾಗಿಲೊಳಗೆಲ್ಲಾ ಗುಬ್ಬಿ ಸಾಲಿಟ್ಟಂತೆ **ರಾಗ: ಆನಂದಭೈರವಿ**

ಹೆಬ್ಬಾಗಿಲೊಳಗೆಲ್ಲಾ ಗುಬ್ಬಿ ಸಾಲಿಟ್ಟಂತೆ। ದಿಬ್ಬಣ ನಮ್ಮನಿಗೆ ಬರಲೆಂದು। ಬರಲೆಂದು ಅಪ್ಪಯ್ಯ। ಮುದ್ರೆಯುಂಗುರವ ಕಳುಹಿದ।।1।। ಚಾವಡಿಯ ಒಳಗೆಲ್ಲಾ ಹೂವ ಸಾಲಿಟ್ಟಂತೆ ಬೀಗರು ನಮ್ಮನಿಗೆ ಬರಲೆಂದು ಬರಲೆಂದು ಅಣ್ಣಯ್ಯ ಹರಳಿನುಂಗುರವ ಕಳುಹಿದ।।2।। ಮೂಡಿಂದ ಬಂದವೆ ರೂಢಿಯ ದಿಬ್ಬಣ ಸಂಪಿಗೆ ವನದೊಳಗೆ ನಿಲಹೇಳಿ। ನಿಲಹೇಳಿ ಆ ಮನೆಯ ಕಡಗದ ಕೈಯವರು ಎರ್ದುಗೊಂಡು।।3।। ತೆಂಕಿಂದ ಬಂದವೆ ಸಂಪತ್ತಿನ ದಿಬ್ಬಣ। ಮಲ್ಲಿಗೆ ವನದೊಳಗೆ ನೀಲಲ್ಹೇಳಿ। ನಿಲಲ್ಹೇಳಿ ಈ ಮನೆಯ ಕಡಗದ ಕೈಯವರು ಎದುರ್ಗೊಂಡು।।4।। ಕುದುರೆ ತರುತಿರೆಂದು ಕೊಂಡು ಲಾಯವ ಕಟ್ಟಿದೆವು। ಕುದುರೆಗೆ ಕಡಲೆನೆನೆಸಿದೆವು। ನೆನೆಸಿದೆವು ನಾವು। ನಿಮ್ಮ ಕುದುರೆಯನ್ನಾರು ತಡೆದಾರು।।5।। ಆನೆ ತರುತೀರೆಂದು ಆನೆಗೆ ಮನೆ ಮಾಡಿದೆವು। ಆನೆಗೆ ಹುರುಳಿ ನೆನೆಸಿದೆವು। ನೆನೆಸಿದೆವು ನಾವು। ನಿಮ್ಮ ಆನೆಯನ್ನಾರು ತಡೆದಾರು।।6।।

ಬೀಗರನ್ನು ಎದುರುಗೊಳ್ಳುವುದು

ಎದರುಗೊಂಡರೂ ಸಂಪದದಿ ಅಳಿಯನಾ **ರಾಗ: ಶಂಕರಾಭರಣ**

ಎದುರುಗೊಂಡರೂ ಸಂಪದದಿ ಅಳಿಯನಾ।।ಪ।। ಮುದದೆ ಪಾಡಿ ಪೊಗಳಿ ನೋಡಿ। ಮದನ ರೂಪನಾ।।ಅ.ಪ।। ಭೇರಿ ಕಹಳೆಗಳ್ ಸುತ್ತ ಭೋರಿಡುತ್ತಿರೇ। ಸಾರಿ ವಿಭವ ಮೀರಿದವನ ಸರೋರುಹಾಕ್ಷನ।।1।। ಚಿತ್ತದೊಲಿಯುತ ಮತ್ತೆ। ಮತ್ತೆ ನಲಿಯುತಾ। ಮುತ್ತಿನ ಕಳಿವೆತ್ತಳಿಯನ। ಅತ್ತೆನೋಡಿ ಸಂಭ್ರಮದಿ।।2।। ಬಂಧು ಬಳಗದ ಬಲು। ಸಂದಣಿಯೊಳು ತಾ। ಇಂದ್ರನಂತೆ ಗಜವನೇರಿ। ಬಂದಿಳಿದಾ ಅಳಿಯನನ್ನು।।3।। ಗಂಧ ಕುಸುಮದಿಂ ನಲವಿಂದೆ ಪೂಜಿಸೀ। ಚಂದ್ರ ನಂದದಿಂದೆ ಮೆರೆವ। ಸುಂದರಾಂಗನಾ ಅಂದು।।4।। ಕನಕ ಪಾತ್ರೆಯೊಳ್ ಕೋಟಿ ಕನಕ ನಾಣ್ಯ ದಿಂ। ಘನ

ವರದಕ್ಷಿಣೆಯನಿತ್ತು। ಕನಕ ವರ್ಣನಂಗೊಲಿದು।।5।। ಚಿತ್ತದೊಲಿಯುತ ಮುದವೆತ್ತು ಬೀಗುತ। ಅತ್ತೆಮಾವಂದಿರೊಲಿದು ಮತ್ತೆ ಪೂಜಿಸುತ ನಲಿದು।।6।। ವಿವಿಧ ವಿಭವದಿಂ ಬಂದು। ನವ ವಿಲಾಸದಿಂ। ಭುವಿಯೊಳೆಸೆವ ನಾರಸಿಂಹನಿವನೆನುತ್ತಲೀ ಬೇಗ।।7।।

ಒಂದಾಗಿ ಬಂದಿರೊ ಸಕಲ **ರಾಗ: ಆನಂದಭೈರವಿ**

ಒಂದಾಗಿ ಬಂದಿರೊ ಸಕಲ ಬಂಧುಗಳೆಲ್ಲ। ಚಂದವಾದುದು ವನಕೆ। ದಿಬ್ಬಣಿಗರೆ। ಚಂದವಾದುದು ಮನಕೆ ।।ಪ।। ಬಿಸಿಲ ಕಾಂತಿಯೊಳು ಬಳಲಿ ದಾರಿಯೊಳು। ವಶಗೆಟ್ಟು ನೀವೆಲ್ಲ ಬಹಳ ಕಂಗೆಟ್ಟಿರಿ।।1।। ಸಣ್ಣ ಕನ್ನೆಯರು ಚಿಣ್ಣ ಬಾಲಕರು। ಐನೂರು ಮಂದಿಯರು ತಾವೆಲ್ಲರಿಂದು।।2।। ಚಾಮರ ಪಿಡಿದು ಬೀಸುವೆವೊಲಿದು। ಕ್ಷೇಮವಾಗಲಿ ಯೆನುತ ಬೀಸುವೆವೊಲಿದು।।3।।

(ದಿಬ್ಬಣಕಡೆಯವರ ಉತ್ತರ)

ಬಂತು ಬಂತೆಮಗುಪಚಾರ ಸಂತೋಷದಿಂದಲಿ ಕಾಂತೆಯರೆ।।ಪ।। ಕಲ್ಲು ಸಕ್ಕರೆಯ ಫುಲ್ಲಲೋಚನೆಯರಿಗೆ। ಎಲ್ಲ ಎಲ್ಲವರಿಗೆ ಕೊಡಿಸಿದಿರಿ।।1।। ಕಸ್ತೂರಿ ಗಂಧ ಮಿತ್ರೆಯರಿಗೆ ಚಂದ। ಕತ್ತುರಿ ವೀಳೆಯವನಿತ್ತೀರೋ।।2।।

(ಉತ್ತರ: ದಿಬ್ಬಣದ ಕಡೆಯವರು)

ನಮಗೇತಕೀ ಉಪಚಾರವೂ। ಸುಮಗಂಧಿಯರೆ। ಬಹು ಭಾರವು।।ಪ।। ಬಂದೆವು ಬಲುದೂರದಿಂದಲಿ ನಡೆಯುತ್ತ ಬಂದೆವು ಬಹುಜನರೊಗ್ಗಿನಲ್ಲಿ।।1।। ಅಲ್ಲಲ್ಲಿ ಪಥದಲ್ಲಿ ನಿಲ್ಲುತ ನೆಳಲಲ್ಲಿ। ತಳ್ಳುವ ಪೊಂಗೊಡೆ ತಂಪಿನಲಿ।।2।। ನೀರೆಳನೀರುಗಳ ಸಾರುತೀಂಟಿದೆವು। ಫಲಾ। ಹಾರಗೊಳ್ಳುತ ಬಂದೆವೆಲ್ಲರು।।3।।

ಬೀಗರ ಬಿಡಾರ

ಈ ಬಿಡದೀ ಮಂದಿರ **ರಾಗ: ಆರಭಿ**

ಈ ಬಿಡದೀ ಮಂದಿರ ಎಷ್ಟು ಶೃಂಗಾರವಾಗಿದೆ। ಏನು ಆನಂದವಾಗಿದೆ।।ಪ।। ವಿಧವಿಧಾದ ವಾದ್ಯಘೋಷದಿ ಎದುರುಗೊಂಡು। ಬೀಗರನ್ನು ಮುದದಿಕಾರಿನೊಳ್ ಕುಳ್ಳೀರಿಸಿ। ಸದನಕಾಗಿ ಕರೆದು ತಂದಿಹುದೇನು।।1।। ಮುತ್ತು ರತ್ನ, ಪಚ್ಚೆ ತೋರಣ। ಸುತ್ತಬಾಗಿಲೊಳ್। ಕಂಗೊಳಿಪುದು। ಮತ್ತೆ ಬಾಗಿಲೊಳ್ ಸರ್ವೇಂಟಿಹನು।। ಚಿತ್ರಪಟಗಳೆಷ್ಟು ಶೋಬಿಪುದೇನು ಆನಂದವಾಗಿದೆ।।2।। ಚಿತ್ರಕೆಲಸ ನಿರ್ಮಿಸಿರುವ। ರತ್ನ ಕಂಬಳಿ ನೆಲಕೆಹಾಸಿದೆ। ಪಟ್ಟೆ ಮಂಚಪರದೇ ಬಿಟ್ಟಿದೇ। ಎತ್ತ ನೋಡಲು ನಿಲುವ ಕನ್ನಡಿ। ಏನು ಆನಂದವಾಗಿದೆ।।3।। ನಾನಾ ವಿಧದ ಸೋಫಾ, ಕುರ್ಚಿ, ಫ್ಯಾನು ಲೈಟು। ಈಸಿಚೇರ್ ಮಾನಿನಿಯರ ಡ್ರೆಸ್ಸಿಂಗ್ ರೂಂ। ಗಾನ ಕೇಳಲು ರೇಡಿಯೋ ವಿಹುದೇನು। ಆನಂದವಾಗಿದೆ।।4।। ಕೇಶರಂಜನ ತೈಲ ತಲೆಗೆ। ಬಾಚುವುದಕೆದಂತದ್ದಣಿಗೆ। ಸೋಪುಬಾಕ್ಸ್, ಫೇಸ್‌ಪೌಡರ್।ವಾಷಿಂಗ್ ಬ್ರಶ್। ಹ್ಯಾಂಡ್ ಕರ್ಚಿಫ್‌ಗಳು। ಏನು ಆನಂದವಾಗಿದೆ।।5।। ಬಳಲಿ ಬಂದ ಬೀಗರಿಗೆ ಎಳನೀರು ತಿಳಿಯ ಪಾನಕ। ಅಳುವೋ ಬಾಲಕರೀಗೆ ಕ್ಷೀರ। ಹೊಳೆವೋ ಬಿಂದಿಗೆಯೊಳಗೇತುಂಬಿಹುದೇನು। ಆನಂದವಾಗಿದೆ।।6।। ಅಡಿಗೆ ಶಾಲೆಯೊಳಗೆ ಬಹಳ। ವಿಧವಿಧಾದ ಭಕ್ಷಭೋಜ್ಯ। ಹದವಗೈದ ತಿಂಡಿಕಾಫಿ। ರೆಡಿಯ ಮಾಡಿದ ಪ್ಲೇಟ್ ಸ್ಪೂನುಗಳೇನು। ಆನಂದವಾಗಿದೆ।।7।। ರೌಂಡ್ ಟೇಬಲ್ ಮೇಲೆ ಹಾಸಿದಾ। ಅಂದವಾದ ಟೇಬಲ್ ಕ್ಲಾತ್ ಗಂಧಪುಷ್ಪಪರಿಮಳಾದ ದುಂಡುಮಲ್ಲಿಗೆ ತಾಂಬೂಲಾದಿ ಗಳು। ಏನು ಆನಂದವಾಗಿದೆ।।8।।

ವರಪೂಜೆ

ಉಟ್ಟ ಪೀತಾಂಬರವು ಕಂದರದೊಳಗಿಟ್ಟ ರಾಗ: ವಸಂತ

ಉಟ್ಟ ಪೀತಾಂಬರವು ಕಂದರದೊಳಗಿಟ್ಟ ಮುತ್ತಿನ ಸರವು। ಕಟ್ಟಾಳು ಬಾಲಕ ಥಳಥಳ ಥಳಿಸುತ ದಿಟ್ಟನಾಗಿರುವ ವೈಶಿಷ್ಟ್ಯದೋಳೀತನು॥ಪ॥ ಅಳಿಯನ ನೋಡೆ ಸಖೀ ಮಂಟಪದಲ್ಲಿ ಕುಳಿತಿರ್ಪನ। ಬಂದು ಜಲಜ ಮುಖಿಯೇ ನಿನ್ನ। ಲಲನೆಗೆನ್ನುತ ಬಂದ। ಗೆಲವು ಸಂತೋಷದಿ ಹೊಳೆಯುತ್ತ ಇರುವಂತ ಅಳಿಯನ ನೋಡೆ ಸಖಿ। ಮಂಟಪದಲ್ಲಿ ಕುಳಿತಿರ್ಪನ ಬಂದು॥1॥ ಮದನನಂತಿರುವನು। ವಿದ್ಯೆದೊಳತಿ ಚದುರತಾನಹನು। ವಿಧವಿಧ ಶಾಸ್ತ್ರ ಪುರಾಣವ ಕಲಿತಿರ್ಪ ನಗರ ವಲ್ಲಭನೋಡು। ಮುದಧಿ ನೀ ನಡೆ ತಂದು॥2॥ ಈರೇಳು ಜಗದಿ ಈತನ ಪೋಲುವವರಿಲ್ಲ ಚೆಲುವಿನಲ್ಲಿ। ಯುವತಿ ಮಣಿಯೆ ನಿನ್ನ ಕುವರಿಯೆನ್ನುತ ಬಂದ। ರವಿಕೋಟಿ ತೇಜನ ನವಪುಷ್ಯ ಬಾಣನ॥3॥

ವರನ ಪೂಜೆಯ ಮಾಡಿದ ರಾಗ: ನಾಯಕಿ

ವರಾನ ಪೂಜೆಯ ಮಾಡಿದ। ದ್ರೌಪದಿರಾಯ ವರಾನ ಪೂಜೆಯ ಮಾಡಿದ॥ಪ॥ ದೊರೆಯು ವರನಾ ಪೂಜಿಸುತ್ತಲಿ। ಸುರಿಯು ಭೂ ಮಳೆ ಕರೆಯುತಿರಲು। ಅರಳು ಮಲ್ಲಿಗೆ ಉದುರುತಿರಲು। ತರುಣಿಯಾರು ಪಾಡುತಲೆ॥1॥ ಗಂಧ ಹಚ್ಚಿಸಿ। ಅಳಿಯಗೆ। ಕಂಠದ ಮೇಲೆ। ಗಂಧವನ್ನೆ ಹಚ್ಚಿ ಅಳಿಯಗೆ ಕಂಠದಮೇಲೇ। ಬಹುಚಂದವಾದ। ಪುಷ್ಪಮಾಲೆ ತಂದು ಬೇಗ ಹಾಕಿದಾರು॥2॥ ಕ್ಷಮೀಸಿ ಬಂದಳಿಯಾನೀಗೆ ಕ್ಷೀರವಕೊಟ್ಟು। ಕ್ಷಮಿಸಿಬಂದ ಅಳಿಯನೀಗೆ। ಕ್ಷೀರವು ಸಕ್ಕರೆ ಕೊಟ್ಟು। ರಾಜಿಸೊವಹಗಲು ಬತ್ತಿ ಬಿರುದು ಸಹಿತ ಬಂದ ಅಳಿಯಗೆ॥3॥

ವರನ ಪೂಜೆಯ ಮಾಡಿದರು ರಾಗ: ನಾಯಕಿ

ವರನ ಪೂಜೆಯ ಮಾಡಿದರು ಹಿಮವಂತನು। ತರುಣಿ ಮೇನಕೆಯೊಡನೆ॥ಪ॥ ಹರನ ಶಂಕರನ ಶಶಿಧರನ ಮೃಧುಕರನ ಸುರನರ ಸೇವಿತನ ಸುಂದರನ॥ಅ.ಪ॥ ರತ್ನದ ಹರಿವಾಣವ ತಂದಿರಿಸುತ್ತ। ಸನ್ನುತಾಂಗನ ಪಾದವ। ಚಿನ್ನದ ಗಿಂಡಿಯೊಳ್ ಪನ್ನೀರಿನಿಂದಲಿ। ಚೆನ್ನಾಗಿ ತೊಳೆಯುತ್ತಲೀ ನಲಿಯುತ್ತಲೀ॥1॥ ಸುರಲೋಕ ಚಂದನ ಘಮಘಮಿಸುತಲಿರೆ। ಪರಿಮಳ ಪುನಗನೀಡಿ। ಮರುಗ ಮೊಲ್ಲೆ ಗಿರಿಚಂಪಕ ಪಾದರಿ। ಸುರಗಿ ಕೇತಕಿ ಸುಮದಿ ಸಮ್ಮುದದಿ॥2॥ ಸಂಪಿಗೆ ಸುರಪಾರಿಜಾತ ಮಾಲೆಯನು। ಸಂಪ್ರೀತಿಯಿಂದರ್ಪಿಸುತ್ತ। ಪೀತಾಂಬರ ನವರತ್ನದಾಭರಣ ಪವಿತ್ರಾದ್ಯಲಂಕಾರದಿ ಸಡಗರದಿ॥3॥ ಮಗಳ ಕರಪಿಡಿಯುತ್ತ ಮಿಗೆಪಾಲಿಸು ನಮ್ಮಗಳೆನೆನುತ ಬೇಡುತ್ತ ಮಗುಳೆ ಪಾದಯುಗಳಕೆ ತಲೆಬಾಗಿ। ಮುಗುಳುನಗುತ ಕೊಂಡಾಡುತ್ತ॥4॥ ವರ ಧೂಪದೀಪವ ಇರಿಸಿ ನೈವೇದ್ಯವ ಇರಿಸಿ ಫಲಾದಿಗಳ ಪರಿಪರಿ ಭಕ್ಷ್ಯವ ಇರಿಸಿ ತಾಂಬೂಲವ ನೆರೆ ಸಮರ್ಪಣೆ ಮಾಡುತ್ತಾ ಕೊಂಡಾಡುತ್ತ॥5॥

ರಾರಾ ಮನೋಹರ

ರಾರಾ ಮನೋಹರ ಹಾರಮೇತು ಸುಂದರ ಕೋರಿತಿದಯಾಕರ। ರಾರಾ ವೇಗ ಪರಾತ್ಪರ॥ಪ॥ ಓ......। ಮಲ್ಲೆ ಮಲ್ಲಿ ಶ್ಯಾಮಂತಲು ದೆಚ್ಚಿ ಉಲ್ಲ ಸಮುನಾತನೆ ಗೂರ್ಚಿ। ಸಲ್ಲಲಿತಾಂಗಲು ಎಲ್ಲಡಲನು ಗೂಡಿ। ಪಾಟಲು ಪಾಡುಚುನುಂಡಾ। ನೇವೇಸೆದ ನೀ ಮೆಡನಿಂದಾ॥1॥ ಓ.....। ಮಂದರ ಗಿರಿಧರ ಮಾ ಮನೋಹರ ಮಂಗಳಕರ ಈ ಹಾರ। ಕೆಚ್ಚಿತಿ ನೇಸುಕುಮಾರ। ಇಂದಿರರಮಣ ಪೊಂದುಗನೀ ಕಂದರ ಮುನ ಚುಪವೇರಾ। ಓ ಸುಂದರ ನಂದ ಕುಮಾರ॥2॥

ಶ್ರೀಮದ್ಗುರುವಿನ ಪಾದವನೆನೆದೂ (ಹೆಣ್ಣಿಗೆ ಅಲಂಕಾರ) ರಾಗ: ಮಾಂಡ್

ಶ್ರೀಮದ್ಗುರುವಿನ ಪಾದವನೆನೆದೂ ನಾಗಸ್ಯನ ಪಾದ ಪದ್ಮಕೆ ಮಣಿದು। ಯೋಗ ವಂದಿತೆಯರು ರಾಗದಿ ಕರಗಳಿಂ। ಸಾಗರ ಶಯನನ ಮದುಮಗಳಿಗೆ ರಾಗದಿ ಮೇಗಲವಾ ತೊಡಿಸ್ಯಾರು॥1॥ಭೃಂಗಕುಂತಳೆಯರು ಸಂಗೀತರವದಿ। ಅಂಬುಜೋದ್ಭವನನು ಪಾಡುತ ಪೊಗಳುತ। ರಂಭೆಯರೆಲ್ಲರು ಹರುಷ ವೈಭವದಿ। ತುಂಬುರ ನಾರದರೆಲ್ಲರು ಸ್ತುತಿಸಲು। ಅಂಬುಜನಾಭನ ಮಡದೀಗೆ ಮೇಗಲವ ತೊಡಿಸ್ಯಾರು॥2॥ ನಾರಿಯರೆಲ್ಲರು ಆನಂದದಲಿ। ನಾರಾಯಣನನು

ನೆನೆದೊಂದಾಗಿ। ನೀರಜ ಮುಖಿಯರು ಕೂಡಿ ಸಂತಸದಿ। ವಾರಿಜನಾಭನ ಪಾಡುತ ಪೊಗಳುತ್ತ। ವಾರಿಜನಾಭನ ಶೋಭನವತಿಗೆ ಮೇಗಲವ ತೊಡಿಸ್ಯಾರು॥3॥

ಕಾಶಿಯಾತ್ರೆ

ಕಾಶಿಗೆ ಹೋಗುವೆನೆನ್ನುತಾ **ರಾಗ:ಮೋಹನ**

ಕಾಶಿಗೆ ಹೋಗುವೆನೆನ್ನುತಾ ತಾನು ಆಸೆಯ ತೊರೆದಿಹೆನು॥ಪ॥ ಹಾವುಗೆಯೊಳು ಕಾಲ ಈ ಕ್ಷಣದೊಳು ಭಾವಿಸಿಟ್ಟನು। ಬಹಳ ಸಾವಿರ ನಾಮದ ದೇವರ ದಯದಿಂದ ಭಾವಿಸಿದೆನೆನುತಲಿ ಭಾವ ಭಕ್ತಿಗಳಿಂದ॥1॥ ಕಣ್ಣಿಗೆ ಕಪ್ಪನಿಟ್ಟು ಮತ್ತೆ ಅವಒಳ್ಳೆಯ ಧೋತರವನುಟ್ಟು। ಚಿನ್ನದುಂಗುರವನ್ನೆ ಮುನ್ನತಾ ಕೈಗಿಟ್ಟು। ಚೆನ್ನ ಕೇಶವನಾಣೆ ಎನ್ನುತಾ ಸುಖ ಪ್ರಿಯ॥2॥ ಬಗಲೊಳು ಗಂಟನ್ನು ಮತ್ತಿರದವ ಹೆಗಲೊಳು ಕೊಡೆಯನ್ನುಹಗುರದ ತೊಂಬಿಗೆಯನ್ನು ಕೈಯೊಳು ಸುಗುಣ ನೀ ಮೆಲ್ಲನೆ ಜಿಗಿದನೆ ವ್ರತಕೆಂದು ಪೋದನೆ॥3॥ ವ್ರತಕೆಂದು ಎನ್ನುತಲಾಗ ಸೋದರಮಾವ ಬಂದು ದಾರಿಯ ಬಿಟ್ಟು। ನೀ ಬೇಗನೆ ಬಾರೆಂದು ಮೋಹದ ಮಗಳನ್ನೆ ಭೇದವಿಲ್ಲದೆ ಕೊಡುವೆ॥4॥

ಆಡಿಪೂರತ್ತಿಲ್ ಉದಿತ್ತ (ಊಂಜಲ್-ತಮಿಳು) **ರಾಗ: ಕುರಂಜಿ**

ಆಡಿಪೂರತ್ತಿಲ್ ಉದಿತ್ತ ಆಂಡಾಳ್ ಎನ್ನುಂ ಕೋದ್ಯೆ। ಅಣಿ ಅರಂಗರುಡನೆ ಊಂಜಲ್ ಆಡಿನಾಳ್ ಅಪ್ಪೋದ್ಯೆ॥ಲಾಲಿ॥ ಪಾಡಿ ಪಾಮಾಲ್ಯೆ ತಂದ ಪಟ್ಟಭಿರಾನ್ ಕೋದ್ಯೆ। ಅಣಿ ಅರಂಗರ್ ಉಡನ್ ಊಂಜಲ್ ಆಡಿನಾಳ್ ಅಪ್ಪೋದ್ಯೆ॥ಲಾಲಿ॥ ನವರತ್ನ ಮಣಿಪುದೈತ್ತ ಸ್ವರ್ಣಮಯ ಊಂಜಲ್। ಚಂದ್ರಸೂರ್ಯ ಕುಲಮಣಿಗಳ್ ವಂದು ಎದಿರ್‌ಕೊಳ್ಳ॥ಲಾಲಿ॥ ಪಾಲಾಲೆ ಕಾಲಲಂಬಿ ಪಟ್ಟಾಲೆ ತುಡೈತ್ತು। ಮಿಲ್ಕಾಲೆ ಕಾಲಲಂಬಿ ಸಿಲ್ಕಾಲೆ ತುಡೈತ್ತು। ಮಣಿತೇಂಗಾಯ್ ಕೈಯಿಲ್ ಕುಡುತ್ತು ಮಂಜಲ್ ನೀರ್ ಚುಳುಟ್ರಿ ॥ಲಾಲಿ॥ ಮಣಿರತ್ನ ಮಂಟಪತ್ತಿಲ್ ಕುತ್ತುವಿಳಕ್ಕೆರಿಯಾ। ಆಳಗಾನ ತಾಳಿಕಟ್ಟಿ ಅಮ್ಮಿ ಮೆದುಚ್ಚಿ ಪೊರಿಯಿಟ್ಟಾಲ್ ॥ಲಾಲಿ॥ ಅಂದಮಲರ್ ಸುಂದರಿಯುಂ ವಿಂದೆಯುಡನ್ ವಂದು ಅಂದಮುಳ್ಳ ಸುಂದರನುಕ್ಕು ಆರತಿ ಶೈದ॥ಲಾಲಿ॥

ಕನ್ನೂಂಜಲಾಡಿರುಂದಾಳ್ (ಊಂಜಲ್-ತಮಿಳು) **ರಾಗ: ಆನಂದಭೈರವಿ**

ಕನ್ನೂಂಜಲಾಡಿರುಂದಾಳ್ ಮನಂ ಮಗ್ದಿಂಳ್‌ದಾಳ್। ಕನ್ನೂಂಜಲಾಡಿರುಂದಾಳ್ ಕಾಂಚನಾ ಮಾಲೈ॥ಪ॥ ಪೊನ್ನೂಂಜಲಿಲ್ ಪೂರಿತ್ತು ಪೂಸಣಂಗಳ್ ಧರಿತ್ತು। ಈಶ್ವರನಾರಿಡತ್ತಿಲ್। ಆಸೈಗಳ್‌ರೊಂಬವೈತ್ತು॥1॥ ಉತ್ತಮಿ ಪೆಟ್ರ ಕುಮಾರಿ। ನಿತ್ಯ ಸರ್ವಾಲಂಕಾರಿ। ಭಕ್ತರ್‌ಗಳ್ ಪಾಪ ಸಂಹಾರಿ। ಪದ್ಮ ಮುಖವೈಯ್ಯಾರಿ॥2॥ ಅಸ್ಸೆಂದು ಸಂಗಲಿಯಾಡ। ಉಸಂದು ಊರ್ವಸಿಪಾಡ। ಇಸ್ಸೆಂದು ತಾಳಂಗಳ್ ಪೋಡ। ಮೀನಾಕ್ಷಿ ಕೈಯಾಲ್ ಕೊಂಡಾಡ॥3॥

ಬೆಳ್ಳಿಯ ಬಟ್ಟಲ ಬೆಳಗಿತಾರೆ (ಮಧುಪರ್ಕ) **ರಾಗ: ಸಿಂಧುರಭೈರವಿ**

ಬೆಳ್ಳಿಯ ಬಟ್ಟಲ ಬೆಳಗಿತಾರೆ। ಒಳ್ಳೆ ಕೆಂದೆ ಕರೆದ ನೊರೆ ಹಾಲ ತಾರೆ। ಪ್ರೀತಿಯಿಂದಳಿಯನ ಪಾದ ತೊಳೆಯೆ ಬಾರೆ॥1॥ ಹಾಲು ಕೊಡುತ್ತಾ ನಿನ್ನಳಿಯಗೆ। ಆಕಳಹಾಲ ಕೊಡುತ್ತೆ। ನಿನ್ನಳಿಯಗೆ ಹಾಲು ಕೊಡುತ್ತಾ ಬಂದು ಬಾಲಕೃಷ್ಣಯ್ಯಗೆ। ಕ್ಷೀರ ಬೆಣ್ಣೆಯ ದಧಿ ಮೊಸರನ್ನೆ ಸುರಿದುದಕೆ॥2॥ ಮುತ್ತಿನ ಬಟ್ಟಲು ಬೆಳಗಿ ತಾರೆ. ಒಳ್ಳೆ ಕೈಲೆ ಕರೆದ ನೊರೆ ಹಾಲು ತಾರೆ। ಮೋಹದಳಿಯನ ಪಾದ ತೊಳೆಯೇ ಬಾರೇ॥3॥ ಚಿನ್ನದ ಬಟ್ಟಲ ಬೆಳಗಿತಾರೆ ಒಳ್ಳೆ ಕೆಂದೆ ಕರೆದ ಹಾಲು ತಾರೆ। ಪ್ರೀತಿಯಿಂದಳಿಯನ ಪಾದ ತೊಳೆಯ ಬಾರೆ॥4॥

ಮುತ್ತಿನ ರಥವೇರಿ ಮುಂದೆ (ವರಪೂಜೆ ಪಾದತೊಳೆಯುವ ಹಾಡು) **ರಾಗ: ಆನಂದಭೈರವಿ**

ಮುತ್ತಿನ ರಥವೇರಿ ಮುಂದೆ ಬಂದವನ್ಯಾರೆ। ಮಿತ್ರೆ ನಿಮ್ಮ ನೆಗೆ ಬಂದವನ್ಯಾರೆ। ಮಿತ್ರೆ ರುಕ್ಮಿಣಿಗೆ ಪತಿಯಾಗಬೇಕೆಂದು।

ಬಂದು ನಿಂದವನಾದ ಕೃಷ್ಣನ॥1॥ಪಾದವ ತೊಳೆದ ಬೀಷ್ಮಕರಾಯ। ತನ್ನ ಮಗಳ ಧಾರೆಯ ನೆರೆದು ಕೊಡುವೆವೆನ್ನುತ। ಪಾದ ತೊಳೆದ ಭೀಷ್ಮಕರಾಯ॥2॥ ಹವಣದ ರಥವೇರಿ ಮುಂದೆ ಬಂದವನ್ಯಾರೆ। ಹರದಿ ನಿಮ್ಮನೆಗೆ ಬಂದವನ್ಯಾರೆ। ಹರದಿ ರುಕ್ಮಿಣಿಗೆ ಪತಿಯಾಗಬೇಕೆಂದು। ಬಂದುನಿಂದವನಾದ ಶ್ರೀಕೃಷ್ಣನ॥3॥ ಕಾಶಿಯಿಂದ ತರಿಸಿದ ಸುರಗಂಗೆ ಭಾಗೀರಥಿಯಾ। ವಾಸವಾಗಿರುವ ಯಮುನೆಗಳೂ। ಸಾಸಿರ ನಾಮಗೆ ಮಗಳ ಕೊಡುವೆವೆನ್ನುತ॥4॥ ತುಂಬೆಯ ಹೂವನ್ನೆ ಚಂದದಿ ಕೊಯ್ಯುತ ತಂದು ರಂಗರಾಯರ ಪಾದವ ತೊಳೆದು। ಇಂದು ತನ್ನಯ ಮಗಳ ಧಾರೆಯೆರೆವೆನೆಂದು। ಪಾದವ ತೊಳೆದು ಭೀಷ್ಮಕರಾಯ॥5॥

ಮನ್ಮಥನುಕ್ಕು ಮಾಲೆಯಿಟ್ಟಾಯೇ (ತಮಿಳು-ಸಂಬಂಧಮಾಲೆ) ರಾಗ: ಪೂರ್ವಿಕಲ್ಯಾಣಿ

ಮನ್ಮಥನುಕ್ಕು ಮಾಲೆಯಿಟ್ಟಾಯೇ ಅಡಿ ನಾದೆ। ಜನ್ಮಮದಿ ಸೂಕಿಟ್ಟು ನೀರಾಡಿ ॥ಪ॥ ಮನ್ಮಥನುಕ್ಕು ಮಾಲೈ ಇಟ್ಟು। ಮಾಲೈದನ್ನೈ ಕೈಪಿಡಿತ್ತು। ಜಲಕ್ಕನೋರ್ವ ಲೋಚನುಕ್ಕು। ಕಿಡಚ್ಚದೇ ಭಾಗ್ಯಮಡಿ॥1॥ ಶೆಂದಾಳೈ ಓಡಲಿಲೇ ಮಂದಾರೈ ಪೂತೊಡುತ್ತು। ಇಂದಿರನುಂ ಚಂದಿರನುಂ ಸುಂದರನುಂ ಇರುಂದಾರಡಿ॥2॥

ಮಾಲೆ ಹಾಕಿದಳ್ ಬಾಲೆ ದಮಯಂತಿ (ಸಂಬಂಧಮಾಲೆ) ರಾಗ: ಸುರಟಿ

ಮಾಲೆ ಹಾಕಿದಳ್ ಬಾಲೆ ದಮಯಂತಿ ಬಹಳ ಹರುಷದಿ ನಳನಿಗೆ॥ಪ॥ ಭೀಮ ನಂದಗೆ ಬಿಂಕದಿಂದಲಿ ಭೀಮೇಶಕೃಷ್ಣನ ಕೊರಳಿಗೆ॥1॥ ಮೊಲ್ಲೆ ಮಲ್ಲಿಗೆ ಮೊಗ್ಗು ಸಂಪಿಗೆ ಎಲ್ಲ ಕುಸುಮವ ಕಟ್ಟಿದ ಮಂದಾರ ಪುಷ್ಪದ ಹಾರವನ್ನೇ ಪತಿಯ ಕೊರಳಿಗೆ ಹಾಕಿದಳ್॥2॥

ರತ್ನ ಊಂಜಲಿಲ್ ಆಡಿನಾಳ್ (ತಮಿಳು-ಊಂಜಲ್) ರಾಗ: ಆನಂದಭೈರವಿ

ರತ್ನ ಊಂಜಲಿಲ್ ಆಡಿನಾಳ್। ಪದ್ಮಾಸುತನ್ನೈ ಪಾಡಿನಾಳ್ ॥ಪ॥ ಮುತ್ತು ಸರಂಗಳ್ ಕುಲುಂಗಿಡ। ರತ್ನಮಾಲೈ ಅಸ್ಸೆಂದಿಡ। ಸುಟ್ರಿಲುಂ ಸಖಿಗಳ್ ಎಳಂಗಿಡ। ನಿತ್ತಂಮುಮ್ ಮಧುರಾಂಬಿಕೈ॥1॥ ಮದಿಮುಗ ಮಂದಹಾಸಮಾಯ್। ಮನ್ನನಿಡತ್ತಿಲ್ ನೇಸಮಾಯ್। ಭಾಸ್ಕರನ್ ಪುಗಳ್ ಪ್ರಕಾಶಮಾಯ್। ಪರದೇವತೆ ಉಲ್ಲಾಸಮಾಯ್॥2॥

ಅಗ್ನಿತಂದದ್ದು

ತಂದಳೆ ಯಜ್ಞಪುರುಷನ

ತಂದಳೆ ಯಜ್ಞಪುರುಷನ ಸೌಭದ್ರೆ ತಾ। ತಂದಳೆ ಯಜ್ಞಪುರುಷನ॥ಪ॥ ಭಾಮೆ ದೇವಕಿ ತನ್ನ ಮೋಹದ ಮಗಳಿಗೆ ಚಿನ್ನವಿಟ್ಟು ಅಲಂಕರಿಸಿ ಉಪ್ಪು ಬೇವ ನೀವಳಿಸೀ ಕಾಶ್ಮೀರದೇಶದಾ ಕಸ್ತೂರಿಯ ತಿಲಕವಿಟ್ಟಳು॥1॥ ಪಟ್ಟವಾಳಿ ಪೀತಾಂಬರವನುಡಿಸಿ ಪಟ್ಟೆ ಕುಪ್ಪಸವ ತೊಡಿಸಿ। ಅಚ್ಚಮಲ್ಲಿಗೆ ಸರಗಳ ಮುಡಿಸಿ ಸರ್ವಾಭರಣ ವನಲಂಕರಿಸಿ। ಯಜ್ಞ ಪುರುಷನ ಕೊಟ್ಟು ಕಳುಹಿದಳು॥2॥ ಹೊತ್ತು ಹೋಗಿಸದೆ ಯಜ್ಞಪುರುಷನ ತರಹೇಳಿದರು ಗಾರ್ಗ್ಯಾರು ಕಂಗಳ ಭಾವ ಭಂಗಾರದಾ ಬೆಳಕು ಭೂಮಂಡಲವ ಮುತ್ತುತಲಿರೆ। ಯಜ್ಞಪುರುಷನ ತಂದಿತ್ತಳು ಶ್ರೀ ಕೃಷ್ಣನ ತಂಗಿ ಸೌಭದ್ರೆ॥3॥

ಧಾರೆ

ದೇವದೇವಿಯರತಿ ವೈಭವದಿ (ಧಾರೆಗೆ ಮಧುಮಗಳ ಕರೆದುತರುವುದು) ರಾಗ: ನೀಲಾಂಬರಿ

ದೇವದೇವಿಯರತಿ ವೈಭವದಿ। ಭಾವಜನರಗಿಣೆಯೆನುತ ಸಂಭ್ರಮದಿ। ಪಾವನೆ ರುಕ್ಮಿಣಿ ದೇವಿಯು ಸಹಿತಲೆ। ಸಾವಿರನಾರಿಯರೊಗ್ಗಿಲಿ ವಿಭವದಿ। ಬಾಲೆ ಮದುಮಗಳಾ ಕರೆತಂದಾ॥1॥ ಬರಲತಿ ಸಂಭ್ರಮ ಪಡುತ ನಾರಿಯರು।

ಪರಿಪರಿ ಶೋಭನ ಪಾಡುತ್ತ ಹರುಷದಿ। ಮೆರೆವ ಸಾಲಂಕೃತ ಮದುಮಗಳನು ವರನಿದ್ದ ಮಂಟಪದೆಡೆಗಾಗಿ ಕಲರವ। ವಾದ್ಯರವ ಸಂಭ್ರಮದಿ ಕರೆತಂದಾ॥2॥ ಕಾಲಲಂದುಗೆ ಗೆಜ್ಜೆ ಗಿಲಿಗಿಲಿಕೆನುತಾ। ತಾಳಸಂಗೀತರವದೊಳು ಬರುತಾ। ನೀಲಾಂಗನ ಶುಕ ಬಾಲೆಯರೊಳಗ್ಗಿಲಿ। ಓಲಾಡುತ ಕಲಕೀರ ವಾಣಿಯರೊಡನೆ। ಸಮ್ಮೇಳದಿ ಮದುಮಗಳನು ಕರೆತಂದಾ॥3॥

ಧಾರೆಯನೆರೆದರಂದು ಮೀನಾಕ್ಷಿಗೆ **ರಾಗ: ಮೋಹನ**

ಧಾರೆಯನೆರೆದರಂದು ಮೀನಾಕ್ಷಿಗೆ॥ಪ॥ ಜಲಜಲೋಚನೆ ಸಹಿತ ಆಕ್ಷಣದೊಳು। ಖಳವೈರಿ ನಡೆತರಲು। ಲಲನೆ ಕಾಂಚನಮಾಲಿ ಶೂರಸೇನನೋಳ್ಮತ್ತೆ । ನಿಲದೆ ಭಾಂದವರೊಳು ಒಲವಿನಲಿ ಬೆಸಗೊಂಡು॥1॥ ಕನ್ಯಾದಾನವ ಮಾಡಲು ನೇಮವೆಯೆಂದು। ಮುನ್ನ ಸರ್ವರ ಕೇಳಲು। ಸಮ್ಮತದಲಿ ಸುಮುಹೂರ್ತವೆನ್ನಲು ಬೇಗ। ಪನ್ನಗಾರಿಧ್ವಜನು ಬರಲು ಮಂಟಪಕಾಗ॥2॥ ಧರಣಿಸುರರು ಸಂತೋಷದಿ ಸಂಕಲ್ಪವ ಒರೆಯಲು ಹರಿಮುದದಿ। ಅರಸಿಯು ಮಹಲಕ್ಷ್ಮಿ ಸಹಿತ ಬಾಲಕಿಯನು। ಹರಿಗೆ ಅರ್ಪಿತವೆಂದು ಧಾರೆಯನೆರೆದರು॥3॥ ಮೆರೆವೂ ಲಾಜದ ಹೋಮವ ಮಾಡಿಸಿ ಮತ್ತೆ ಕರಕೆ ಕಂಕಣ ದಾರವು। ವರವಧುವಿಗೆ ಕಟ್ಟಿ ಭರದೊಳರುಂಧತಿಯ। ದರುಶನ ಗೈಸುತ್ತ ಕರೆದ್ದಸೆ ಮಣೆಯೊಳು॥4॥ ಕಡಲ ಶಯನನ ಇದಿರೇ ಮೀನಾಕ್ಷೀ। ಮೃಡನು ಸಹಿತ ಕುಳ್ಳಿರೇ। ಮಡದಿಯ ರಕ್ಷತೆ ವೀಳ್ಯಗಳನೇ ಮಾಡಿ। ಕಡು ಚೆಲ್ವಿನಾರತಿಯ ಪಿಡಿಯೆ ಸಂಭ್ರಮದೊಳು॥5॥

ಮಾಂಗಲ್ಯ ಧಾರಣೆ

ಒಂದೊಂದು ಮುತ್ತಿಟ್ಟು **ರಾಗ: ಆನಂದ ಭೈರವಿ**

ಒಂದೊಂದು ಮುತ್ತಿಟ್ಟು। ಮುಂದೆ ಹರಾಳಿಟ್ಟು। ಕುಂದಾಣದ ಕೋವಿ ಕಸ್ತೂರೀಯ। ಕುಸುರಿ ಕರಿಯಾಮಣಿಯಾ। ಗಂಡಕಟ್ಟಿದಾನೇ ಮಡಾದೀಗೆ॥1॥ ಆರಾರು ಮುತ್ತಿಟ್ಟು। ಕೊಡೆಹರಾಳಿಟ್ಟು। ನಿಲಾಪಕೋವಿ ಕುಸೂರಿಯಾ। ಕುಸುರೀ ಕರಿಯಾಮಣಿಯಾ। ರಾಯಕಟ್ಟಿದಾನೆ ಮಡಾದೀಗೆ॥2॥ ಹತ್ತತ್ತು ಮುತ್ತಿಟ್ಟು ಹತ್ರೆಹರಾಳಿಟ್ಟು। ಮುತ್ತೀನ ಕೋವಿ ಕುಸೂರಿಯಾ। ಕುಸುರಿ ಕರಿಯಾಮಣಿಯಾ। ರಾಯ ಕಟ್ಟಿದಾನೆ ಮಡದೀಗೆ॥3॥

ಕಟ್ಟಿದ ಮಾಂಗಲ್ಯ ಸೂತ್ರವ ದೇವ **ರಾಗ:ಶ್ರೀ**

ಕಟ್ಟಿದ ಮಾಂಗಲ್ಯ ಸೂತ್ರವ ದೇವ। ಬೆಟ್ಟದೊಡೆಯ ಜಗಜಟ್ಟಿ ವೆಂಕಟರಮಣ॥ಪ॥ ಅಷ್ಟಲಕ್ಷ್ಮೀಯರ ಕೂಟದಿ ದೇವ। ಕೊಟ್ಟ ಕನ್ಯಾರತ್ನ ಭೂಷಣವ। ಅಷ್ಟರೊಳಗೆ ಬಲು ಶ್ರೇಷ್ಠದಿಂ ಕೈಪಿಡಿದು॥1॥ ಅಂಗನೆರೆಲ್ಲರು ಕೂಡತ ದೇವ। ಶೃಂಗಾರ ಕನ್ಯೆಯ ನೋಡುತ। ಮಂಗಳ ಗರುಡವಾಹನ ವೆಂಕಟರಮನ॥2॥ ರಾಜಾಧಿರಾಜರು ನೋಡುತ ಪಾದ। ಕಾಣಿಕೆಕಲ್ಪವ ನೀಯಲು। ಪಾಣಿಗ್ರಹಣವ ಕೊಂಡ ನಾಗಶಯನನು॥3॥

ಕಟ್ಟಿದ ಮಾಂಗಲ್ಯ ಚಿತ್ತದೊಲ್ಲಭ **ರಾಗ:ಶ್ರೀ**

ಕಟ್ಟಿದ ಮಾಂಗಲ್ಯ ಸೂತ್ರವ ಚಿತ್ತದೊಲ್ಲಭ ತಾನು ಮಿತ್ರೇಗೆ ಹರುಷದೀ॥ಪ॥ ಮಿರುಮಿರುಗುವ ಸ್ವರ್ಣದಾರದಿ ವರ ಕರಿಮಣಿ। ಸರಗಳ ಮಧ್ಯದಿ ಮೆರೆವೂ ರತ್ನದ ತಾಳಿ ತರುಣಿ ಮಣಿಗೆ ತಾನು॥1॥ ದೀರ್ಘ ಸುಮಂಗಲಿಯಾಗಿರು ಎಂದು ರಾಗದಿ ಐದೆಯರ್ ಪಾಡಲು ಆಗಮಾರ್ಥದ ಮಂತ್ರ ನಾಗಸ್ವರವು ಮೊಳಗೆ॥2॥ ಮುತ್ತೈದೆತನ ಸ್ಥಿರವಾಗಲಿ ಮಿತ್ರೆ ಕಟ್ಟಿದ ಕರಿಮಣಿ ಭಾಗ್ಯವು ಅಷ್ಟಪುತ್ರರ ಭಾಗ್ಯ ಹೊತ್ತು ಬಾಳೆನುತ॥3॥

ಶೋಭಾನೆ ಕೋಟಿ (ತಮಿಳು-ಶೋಭಾನೆ) **ರಾಗ: ಕುರಂಜಿ**

ಶೋಭಾನೆ। ಕೋಟಿ ಮನ್ಮಥರ್ ಪೂಪರಿತ್ತು। ಶ್ರೀ ಗೋಮತಿ ಸಮೇತನುಕ್ಕು। ಶಂಖು ಚಕ್ರ ಈಶನುಕ್ಕು। ಸ್ವಾಮಿ

ಶಂಕರೇಶ್ವರನುಕ್ಕು॥1॥ ಗಿರಿರಾಜ ಪುತ್ತಿರಿಕ್ಕಿ। ಪಾರ್ಪುಗಳಿನ್ ಸುಂದರಿಕ್ಕಿ। ಪರಂಧಾಮನ್ ಈಶ್ವರಿಕ್ಕಿ। ಪ್ರತ್ಯಕ್ಷ ಸುಂದರಿಕ್ಕಿ॥2॥

ಊಟ – ಅತಿಥಿಗಳದ್ದು

ಮೊದಲಿಗೆ ಬಂದಿತು ಉಪ್ಪಿನಕಾಯಿ **ರಾಗ: ಮಾಂಡ್, ಏಕತಾಳ**

ಮೊದಲಿಗೆ ಬಂದಿತು ಉಪ್ಪಿನಕಾಯಿ। ಹದದಲಿ ಬೆರೆತಿಹ ಉಪ್ಪುಖಾರವು। ಮಾವಿನ ಮಿಡಿಯ ಉಪ್ಪಿನಕಾಯಿಯು। ಭಾವವ ಕೆರಳಿಪ ಉಪ್ಪಿನಕಾಯಿಯು॥ ಎಡಗಡೆ ಬದಿಯಲ್ಲಿ ಉಪ್ಪಿನ ತುಣುಕೂ। ಬಡಿಸುತ ಬಲಗಡೆ ಸಿಹಿಯಾತುಣುಕು। ನಂತರ ಬಂದಿತು ಕೋಸಂಬರಿಯದು। ಅಂತರವಿಲ್ಲದೆ ಹಿಂಬಾಲಿಸಲದು....॥ ನೋಡಿರಿ ಅಲ್ಲಿನ ಪಲ್ಯದ ಸಾಲನು। ಕಂಬಿಯ ರೈಲನು ಮೀರಿಸೊ ಪರಿಯನು॥ ಊಟಕೆ ಮುಖ್ಯವು ಅನ್ನದ ತುತ್ತು। ರುಚಿರುಚಿ ಊಟವು ಒಂದೊಂದೆ ತುತ್ತು....॥ ಬಂಗಾರ ಕಡ್ಡಿಯ ಸಣ್ಣಕ್ಕಿ ಅನ್ನವು। ಮೇಲೋಗರಕಾ ಘಮಘಮ ತುಪ್ಪವು॥ ಪರಿಮಳ ತುಂಬಿದ ಸಾರದು ಬಂದಿತು। ಅದರಾ ರುಚಿಯದು ಅಮೃತವ ಮೀರಿತು....॥ (ರಾಗ-ಅಠಾಣ) ಇದೀಗ ಬಂದಿತು ಚಿರೋಟಿ ಅಲ್ಲಿಗೆ। ಕಂಡೆವು ಬಣ್ಣದ ಖೀರಿನ ಜೊತೆಗೆ। ಕೆನೆಯಾ ಬಣ್ಣದ ಫೇಣಿಯು ಬಂದಿತು। ಜನರ ಚಿತ್ತವ ಬಿಡದೇ ಸೆಳೆಯಿತು....॥ ಮಿರಿಮಿರಿ ಮಿಂಚುವ ಜಹಂಗೀರಲ್ಲಿ। ಮೋಡಿಯ ಹಾಕಿತು ಜನಗಳಿಗಲ್ಲೀ॥ ಬಂಗಾರ ಬಣ್ಣದ ಲಾಡುಗಳಿಳಿದುವು। ಚಿನ್ನದ ಗಟ್ಟಿಗಳೆ ಭೂಮಿಗೆ ಇಳಿದಿವೆ....॥ ಸವರನ್ ಬಣ್ಣದ ಕರಿಗಡಬುಗಳೇ। ಗರಿಗರಿ ಬಿಸಿಬಿಸಿ ಆಂಬೋಡೆಗಳೇ॥ ದಪ್ಪಗೆ ಹೆಚ್ಚಿದ ಕುಂಬಳಕಾಯಿಯು। ಹದದಲಿ ಬೆರಸಿದ ಮಜ್ಜಿಗೆ ರುಚಿಯಾ॥ ಮಜ್ಜಿಗೆ ಹುಳಿಯು ಬಂದಿತು ಜೊತೆಗೇ। ಆಂಬೋಡೆ ರುಚಿ ಹೆಚ್ಚಿಸುವುದಕೇ॥ ರುಚಿರುಚಿಯಾದ ಕೇಸರಿ ಬಾತೂ। ಬೊಂಬಾಯ್ ಬೋಂಡದ ಜೊತೆಜೊತೆಬಂತು.....॥(ರಾಗ-ಮೋಹನ)। ಒಂದೇ ಎರಡೇ ಬಣ್ಣಿಸಲವನು। ಸಾವಿರ ನಾಲಿಗೆ ಶೇಷಗಸಾಧ್ಯವು। ಸೀತಾಳ ಪಾತಾಳ ಪಚ್ಚ ಪರಿಮಳ। ಗಂಗಾ ಸಿಂಧು ಯಮುನಾ ನದಿಗಳ.....॥ ನೀರದು ಬೇಕೇ? ಬೇಕೇ ನೀರು?। ಎನ್ನುತ ಕೂಗುತ ಬಂದರು ಹುಡುಗರು। ಬೆಣ್ಣೆಯ ಕಾಸಿದ ತುಪ್ಪದಿ ಮಾಡಿದ। ಮೈಸೂರುಪಾಕು ಬಿಡುವರು ಯಾರದ? ಗಾರಿಗೆ ಮಂಡಿಗೆ ಹೋಳಿಗೆ ಕವಳಿಗೆ। ಜನವದು ಬೆಚ್ಚಿತು ಬೆವರಿತು ಘಳಿಗೆಗೆ। ಕೊನೆಯಲಿ ಬಂದಿತು ಮಜ್ಜಿಗೆಗನ್ನವು। ಮಜ್ಜಿಗೆ ಎಂದರೆ ತಪ್ಪಿದ ಬರಹವು। ಕೆನೆಕೆನೆ ಮೊಸರು ಸೇರಿಸಿ ಕಲೆಸಿದ। ತೆಂಗಿನ ತುರಿಯಲಿ ರುಚಿಯು ಹೆಚ್ಚಿದ...॥ (ರಾಗ-ಸಿಂಹೇಂದ್ರ ಮಧ್ಯಮ)। ಕಡಲೆಯ ಉದ್ದಿನ ಕರಿಬೇವುಸೊಪ್ಪಿನ। ಶುಂಠಿಕೊತ್ತುಂಬರಿಯಾ ಸೊಪ್ಪಿನ ಎಸಳಿನ॥ ಪರಿಮಳ ತುಂಬುತ ಬಂದಿತು ಬಂದಿತು। ಮೊಸರಿನ ಅನ್ನವು ಮುಗಿತವ ತಂದಿತು.....॥ ತಿಂದಿತು ತೇಗಿತು ಜನತೆಯು ತಣಿಯಿತು। ತೃಪ್ತಿಯ ತೇಗನು ಹೊರಡಿಸಿ ನಲಿಯಿತು॥ ಕಂಡೆವು ಇಂದೇ ಇಂತಹ ಔತಣ। ಇನ್ನೆಲ್ಲು ಕಾಣೆವು ಸೊಗಸಿನ ಔತಣ॥ ಎನುತಲಿ ಹಾಡಿತು ಹೊಗಳಿತು ಹರಸಿತು। ಹೊಗಳುತ ತಣಿಯಿತು ತೃಪ್ತಿಯ ಸೂಸಿತು॥

ಮದುವೆ ಊಟವು ನಡೆದಿದೆ

ಮದುವೆ ಊಟವು ನಡೆದಿದೆ। ಎಲ್ಲೆಲ್ಲು ಸಡಗರ ತೋರುತಿದೆ। ಊಟದ ಸಂಭ್ರಮ ನಡೆದಿದೆ। ಎಲ್ಲೆಲ್ಲು ಸಡಗರ ತೋರುತಿದೆ॥ಪ॥ ಅಂದದ ತಿಂಡಿ ತಿನಿಸುಗಳೆನಿತೊ। ಸುಂದರವಾದ ಭಕ್ಷ್ಯಗಳೆನಿತೋ। ಚಂದದ ಶ್ಯಾವಿಗೆ ಸೂಪುಗಳೆನಿತೋ। ಮಂದಿಯು ಸೇರಿಹ ವೈಖರಿ ಎನಿತೋ॥1॥ ಘಮಘಮಿಸಿರುವ। ಬಿಸಿಬೇಳೆ ಬಾತು। ಬೆಣ್ಣೆಯ ತೆಗೆಯದ। ಮೊಸರಿನ ಬಾತು। ಬಣ್ಣಿಸಲಾಗದ। ವಾಂಗಿಯ ಬಾತು। ತಿನ್ನಲು ಆಗದೆ ಕೈಗಳು ಸೋತು॥2॥ ಮಧುರದಿ ಮೆರೆವ। ಮಂಡಿಗೆ ಪೇಣಿ। ಬಡಿಸಿಹರಾರೋ। ಸುಂದರಿ ಜಾಣೆ। ಸನಿಹದಿ ಇರಲು। ಹೃದಯದ ರಾಣಿ। ಮರೆಸಿದೆ ಎಲ್ಲರ ಆದರ ವಾಣಿ॥3॥

ಭೂಮ

ಕರೆದರು ಭೂಪತಿ **ರಾಗ: ಭೈರವಿ**

ಕರೆದರು ಭೂಪತಿ ತರುಣಿಯರೆಲ್ಲರು ಹರಿಯನು ಮಂಜುಳ ಪೀಠಕೆ ತಾವ್।।ಪ।। ಸುತ್ತಲು ಕೆತ್ತಿದ ಪೊಳೆಯುವ ಮುತ್ತಿನ ಮಣಿಯನು ತಂದಿಡುತಾ। ಉತ್ತಮ ಪೀತಾಂಬರಗಳ ಹಾಸಿಸುಪತ್ರಗಳಿಂದದಿ ವಿಸ್ತರಿಸೀ।।1।। ಪನ್ನಗವೇಣಿಯರ್ ಮುನ್ನಮೇ ತಾವ್ ಬಣ್ಣದ ರಂಗೋಲಿಗಳ್ಹಾಕೀ। ಕನ್ನಡಿಯಂದದಿ ಮಿಣ್ಣಗೆ ಹೊಳೆಯುತಾ। ಚಿನ್ನದಪಾತ್ರೆಯ ತಂದಿರಿಸೀ।।2।। ತರ ತರ ಕೋಸುಂಬರಿಗಳು ನಾನಾ ಪರಿಪರಿ ಪಕ್ವಾನ್ನ। ಶಾಖಗಳೂ। ಪರಿಪರಿಯಲಿ ಸುಂದರಿಯರು ಲೋಕಾಭರಣವ ಭೂಮಕೆ ಬಡಿಸುತ್ತಾ।।3।। ಮಂಡಿಗೆ ಹಪ್ಪಳ ದುಂಡುಗುಳ್ಳೂರಿಗೆ। ಸಂಡಿಗೆಗಳನ್ನಲ್ಲಿ। ತಂದಿಡುತಾ। ಖಂಡಿತ ಸುರರಿಪು ಮಂಡಲ ಯದುಕುಲಾ। ಮಂಡಲ ಮುದದಿ ಬಾರೆಂದೂ।।4।।

ಚಂದ್ರಮುಖಿ ತಂದು ಬಡಿಸೆ

ಚಂದ್ರಮುಖಿ ತಂದು ಬಡಿಸೆ ರಂಗನಾಥ ಹರಿಯ ಭೂಮಕೆ। ಸಾಲು ಬಾಳೆಎಲೆಯ ಹಾಕಿ ಮೇಲೆ ಪನ್ನೀರಚೆಲ್ಲಿ ಪಾಯಸ ಪಾತ್ರಾಭಿಗಾರ ನಾರಿಯಾರು ಬಡಿಸಿದಾರು।।1।। ಉಪ್ಪು ಉಪ್ಪಿನ ಕಾಯಿ ಪಲ್ಯ ಚಟ್ನಿ ಕೋಸಂಬ್ರಿಗಳನು। ಮಿತ್ರೆಯಾರು ತಟ್ಟೆಯಲಿ ನಾರಿಯಾರು ಬಟ್ಟಲುಗಳಲಿ।।2।। ಹಪ್ಪಳ ಸಂಡಿಗೆಗಳನು ಮಿತ್ರೆ ನೀನು ಬಡಿಸೆ ಹೋಳಿಗೆ ಚಿತ್ರಾನ್ನ ನಾರಿಯಾರು ಬಡಿಸಿದಾರು।।3।।

ಜನ ನೋಡೋಣ ಬನ್ನಿ ಭೂಮಕ **ರಾಗ:ಮೋಹನ**

ಜನ ನೋಡೋಣ ಬನ್ನಿ ಭೂಮಕ ಶ್ರಿಂಗಾರ ನೋಡಿ ಕಟ್ಟಿರುವುದು ಮಾಳಿಗೆಗ್ಹೊಳಪು।। ಕೆಂಪು ನೀಲ ಹಸಿರು ಪಚ್ಚೆ ಪಂಚವರ್ಣದ ರಂಗೋಲಿ। ವಂಕಿ ವಂಕಿಗೋಪುರಾವು ಪಂಕಜಾಕ್ಷಿಯರ್ ಹಾಕುತಿರುವವರು।।1।। ದೊಡ್ಡಬಾಳೆ ಎಲೆ ಕಡ್ಡಿ ಹಚ್ಚಿದ ದೊನ್ನೆ ರುಬ್ಬಿದಾಂಬೋಡೆ। ಹಪ್ಪಳ ಕಲೆಸಿದ ಚಿತ್ರಾನ್ನ। ಒತ್ತಿ ಹಿಂಡಿದ ಮುಚ್ಚೋರೆ। ಚಕ್ಕುಲಿ ಬಡಿಸಿ ಎತ್ತ ನೋಡಲು ಸುತ್ತ ಪಟಗಳು। ಮತ್ತೆ ಬ್ರಾಹ್ಮಣರು ಬಡಿಸಿ ಬಂದರು ಲಟ್ಟಿಸಿದ ಹೋಳಿಗೆಯಾ। ತಟ್ಟನೆ ಎಲೆ ಎಲೆಗೆ ಬಡಿಸೋರು।।2।। ಎಡಬಲದಲ್ಲಿ ರಮ್ಯ ಸಾಲುದೀವಿಗೆ ಹಚ್ಚಿ। ಕುಡಿಯೋ ತಂಬಿಗೆ ತಾಲಿ ಕೂಡು ಮಣೆಗಳು ಹಾಕಿ। ಇಡುವರೆ ಭೂಮಕ್ಕೆ।। ಒಂದು ಕಡಿಮೆ ಇಲ್ಲದೆ। ಉಡುವರು ಜರತಾರೀ ಪೀತಾಂಬರವ ಮಡದೀರು। ಅಲಂಕಾರದಿಂದಲಿ ಸಡಗರದಿಂದೊಂದು ಅಡಿ ಇಡುವರು।।3।। ಎಲೆ ಎಲೆಗೆ ಬಂದು ಶ್ಯಾವಿಗೆ। ಪರಮಾನ್ನ ಬಟ್ಟಲುಪಾಯಸ। ಕರಿದಗುಳ್ಳೂರಿಗೆ ಪುಟ್ಟೀಲಿ ಬಡಿಸೋರು। ಕಟ್ಟೆ ಕಟ್ಟಲು ಸಾರು ಹುಳಿ ಥಟ್ಟನೆ ಬಡಿಸೋರು। ಅಲ್ಲದೆ ಹೆಪ್ಪು ಕೆನೆಯ ಮೊಸರು ಥಟ್ಟನೆ ವೆಂಕಟಪ್ಪನಿಗೆ ಬಡಿಸೋರು।।4।।

ತಾರೇ ತಾರೇ ಭೂಮವ ನೀರೆ **ರಾಗ:ಬೃಂದಾವನಿ**

ತಾರೇ ತಾರೇ ಭೂಮವ ನೀರೆ। ತಾಮಸ ಮಾಡದೆ ಹೇ ವಯ್ಯಾರಿ।।ಪ।। ಬಾಳೆ ಎಲೆಗಳನು ಭಾಮೆಯರು ಬಹಳ ಹರುಷದಲಿ ಹಾಕುತಲಿಂದು। ಭಾಸುರಾಂಗಿ ನೀ ಬಳುಕುತ ಬಂದೂ ಬಡಿಸಲು ಭಾಸುರಾಂಗಿ ನೀ ಬಳುಕುತ ಬಂದೂ।। ಬಡಿಸಲು ಉಪ್ಪು ಚಿಟ್ನಿಯೆ ಮುಂದು। ಬಹುವಿಧವಾದ ಕೋಸಂಬ್ರಿಯನಿಂದು।।1।। ಉತ್ತಮ ವಾಗಿಹ ಉದುರು ಪಲ್ಯಗಳು। ಚಿತ್ರ ಚಿತ್ರ ಮಜ್ಜಿಗೆ ಪಳಿದ್ಯಗಳೂ। ಮುತ್ತನು ಹೋಲುವ ಶಾಲ್ಯಾನ್ನಗಳೂ। ಆರ್ತೀಯಿಂದಲಿ ಆಂಬೋಡೆ ಚಕ್ಕುಲಿಗಳ ಚಿತ್ರಾಜನಯ್ಯಗೆ। ಚಿತ್ರಾನ್ನಗಳೂ।।2।। ಮಂಡಿಗೆ ಪೇಣಿ ಜಿಲೇಬಿಗಳನ್ನು ಚಂದದಿ ಸೇವಿಗೆ ಪಾಯಸಗಳನೂ। ಅಂದದಿ ಹಪ್ಪಳ ಸಂಡಿಗೆಯನ್ನೂ ಸಂದರವಾದ ಸೊಪ್ಪುಗಳನ್ನೂ। ಇಂದಿರೆ ರಮಣಗೆ ನೀ ಇನ್ನೂ।।3।। ಧರೆಯೊಳು ದಕ್ಷಿಣ ಕಾಸಿಯನೀಗ। ವರನರಸಿಂಹನ ಭೂಮವ ಬೇಗ। ಪುರಜನರೆಲ್ಲರು ಕೊಡುತಲೀಗಾ। ಹರುಷವ ನೋಡಿ ಹರುಷಿಸುವಾಗ ಪರಿ ಪರಿ ವಿಧದ ಪಕ್ವಾನ್ನವನ್ನೀಗಾ।।4।।

ಭೂಮದ ಊಟವು ಮದುವೆಲಿ ಚೆನ್ನ

ಭೂಮದ ಊಟವು ಮದುವೆಲಿ ಚೆನ್ನ। ಬಣ್ಣಿಸಲಾಗೊಲ್ಲ ಎಂಥಾ ಸೊಗಸು ಎಂಥಾ ನೋಟ ಎಲ್ಲೂ ನೋಡಿಲ್ಲ। ಆಹಾ ಎಲ್ಲೂ ದೊರಕಲ್ಲಾ।।ಪ।। ಸಾಲೂ ದೀಪಗಳು। ಬಾಳೆಲೆ ಅಂಚಿನಲ್ಲಿ। ಸುತ್ತಾ ಬೆಳಗುತಿದೆ। ರಂಗೂರಂಗಿನ। ಬಣ್ಣ ತುಂಬಿರುವ। ಹೂವು ಸೊಗಸಾಗಿದೇ। ಇಂಗೂ ತೆಂಗಿನಲಿ ಕಾಯಿ ಪಲ್ಯಗಳ ಸವಿಯು ಚೆನ್ನಾಗಿದೆ। ಸೇಂಗಾತೈಲದಲಿ। ತೇಲಿ ಬಂದಿರುವ। ತಿಂಡಿ ಬಹಳಾಗಿದೇ ನೀವಿಂದು ಬನ್ನಿ। ಮುದದಿಂದ ತಿನ್ನಿ ಆನಂದ ನಮಗಾಗಿ ಕಾಯುತಿದೆ ।।1।। ಕರ್ಜಿಕಾಯಿಗಳ। ಬಜ್ಜಿಬೋಂಡಗಳ ಜೋಡಿ ಸರಿಯಾಗಿದೆ। ಸಜ್ಜಿ ಬಾತುಗಳ। ಹಾಲೂ ಕೀರುಗಳ ರುಚಿಯು ತಲೆಗೇರಿದೆ। ಲಾಡು ಫೇಣಿಗಳು ಜಾಮೂನ್ ಪೇಡೆಗಳು ಎಲ್ಲಾ ಒಂದಾಗಿದೆ। ಖಾರಾ ಬಾತುಗಳು। ಪೂರಿ ಪಲ್ಯಗಳು ಸೇರಿ ಜೊತೆಯಾಗಿದೆ ಆನಂದದಿಂದ। ಸಂತೋಷದಿಂದ ಮನಕಿಂದು ಉಲ್ಲಾಸ ತೋರುತಿದೆ।।2।।

ಭೂಮದೂಟ ನೋಡಲೆರಡು

ಭೂಮದೂಟ ನೋಡಲೆರಡು। ಕಣ್ಣುಸಾಲದು। ನೆಂಟರಿಷ್ಟರೆಲ್ಲ। ತುಂಬಿದ। ಮಂದಿರಾವಿದು।। ತಿಂಡಿ ತೀರ್ಥ ಚೆನ್ನ। ಅನ್ನ ಉದಕದಿಂದ। ಊಟದಾ ಮೋಜಿದು।।ಪ।। ಬಾಳೆ ಎಲೆಯ ತುಂಬ ಭಕ್ಷ್ಯ ಬಡಿಸಿದೇ। ಸಾಲು ಸಾಲು ದೀಪಗಳು। ಹೊಳೆದಿದೇ। ಬಳುಕಿ ಭಾಮಿನಿಯರು। ಬಡಿಸುತಿರುವರೂ। ಬಡಿಸಿ ಮೊದಲು ಘೃತವ ತರುತ ನಿಂತರೂ। ಬಡಿಸಿ ಮೊದಲು ಘೃತವ ತರುತ ನಿಂತರೂ।।1।। ಕಾಯಿಪಲ್ಯ ಚಟ್ನಿ ಕೋಸಂಬರೀ ಸಾಟಿ ಇಲ್ಲಂದತೆ ಇರುವ ಉಪ್ಪೇರಿ। ಲಾಡು ಫೇಣಿ ಖಾರ ಬೂಂದಿ ಕಾದಿರೇ। ಬರದು ರುಚಿಯು ಬಾಯಿತುಂಬ ತಿಂದರೇ।।2।।

ಭೂಮದೂಟ ನೋಡಿ ನಲಿಯುವ

ಭೂಮದೂಟ ನೋಡಿ। ನಲಿಯುವ ಸಂತೋಷ। ಓ । ಭಾಮಿನಿಯರೆಲ್ಲ। ಬಡಿಸುವ ಉಲ್ಲಾಸ। ಇದು ಮದುವೆ ಆನಂದ। ಮಹದಾನಂದ।।ಪ।। ವಿಧವಿಧ ಭಕ್ಷ್ಯಗಳನ್ನೂ। ಮುದದಲಿ ಬಡಿಸಿದವರನೂ। ಕದಳಿಯ। ಎಲೆಯಂಚಲಿ। ನೋಡಿ ವೈಖರಿಯನು। ಮಲ್ಲಿಗೆಯಂತಿರುವನ್ನ। ಬೆಳ್ಳನೆ ಕೆನೆ ಮೊಸರನ್ನ। ಕರಗಿಸಿ ಬಿಸಿಮಾಡಿದ। ಘೃತವೂ ಶಾಲ್ಗೀದನ್ನ।।1।। ಮಂಡಿಗೆ ಫೇಣಿ ಚಿರೋಟಿ। ತಿಂಡಿಗೆ ಎಲ್ಲಿದೆ ಸಾಟಿ। ಅಂದದ ಮದುಮಗನಿಗೆ। ಇರಲೂ ಸನಿಹ ಸೀಟಿ। ಚಂದದ ಸಂತಸವಿಂದು। ಬಿಟ್ಟರೆ ದೊರಕದು ಮುಂದು ಹೊಂದುವ। ಆನಂದವ। ಮನವಾ ತಣಿಸಿ ಇಂದು।।2।।

ಭೂಮಕ್ಕೆ ಬಡಿಸಿದರು — ರಾಗ: ಮೋಹನ

ಭೂಮಕ್ಕೆ ಬಡಿಸಿದರು ಮಂಗಳೆಯರು। ಕಾಮಾಕ್ಷಿ ಗಿರೀಶ್ವರಗೇ। ಭಾಮೇರು ಮಡಿಗಳ ನೇಮದಿಂದ್ ಧರಿಸುತ। ಶ್ರೀ ನಾರಾಯಣ ಮಹಾದೇವ ಶ್ರೀಲಕ್ಷ್ಮಿ(ಶೈಲ) ಬಾಲಕಿಯರು।।1।। ಬಾಳೆಲೆಗಳನ್ಹಾಸಿ ಭಾಮಾ ಮಣೀಯರು। ನೀಲಾ ಬಟ್ಟುಗ್ಗಳಿರಿಸೀ। ಲೋಲಾಪಕಂಗಳ। ಲೀಲೆ ಇಂದ್ ಬಡಿಸುತ ಶ್ರೀಮಹಾದೇವ। ಶ್ರೀ ಗಿರಿಜ(ರುಕ್ಮಿಣಿ) (ಸತ್ಯಭಾಮೆ) ಪಾರ್ವತಿಯರಿಗೆ।।2।। ಸರಸ ಕೋಸಂಬರಿ ಕರಿದಾಂಬೋಡೆಯ ಪರಿಪರಿ ಚಿತ್ರಾನ್ನವ। ಸುರುಳಿ ಹೋಳಿಗೆ ಮಂಡಿಗೆ। ಕರಿದ ಚಿರೋಟಿಯ ಸರಸಿಜ ನೇತ್ರೇಯರ್। ಗಿರೀಶ(ರಾಮ)(ಸೀತೆ) ಪಾರ್ವತಿಯರಿಗೆ ಅಭಿಮಾನದಿ ಬಡಿಸಿದರು।।3।।

ಭೂಮವ ಬಡಿಸಲು ಬಾರೆ — ರಾಗ: ಕಲ್ಯಾಣಿ

ಭೂಮವ ಬಡಿಸಲು ಬಾರೆ। ಕಾಮನ ಪಿತನಿಗೆ ಸಾರೆ। ಕೋಮಲಾಂಗಿ ಪ್ರೇಮದಿಂದ।।ಪ।। ಪರಮಾನ್ನವು ಗವಲಿ ಬಟವಿ। ಪರಿಪರಿ ಪಾಯಸಗಳ ಸವಿ ಸವಿಯಲೆಂದು। ಕ್ಷೀರ ಘೃತವ ಬೆರೆಸಿ ತರಿಸಿ ಇರಿಸಿರುವೆನು।।1।। ಅನ್ನ ಅಮರಿ ಸಾರುಗಳನು। ಸನ್ನುತ ಚಿತ್ರಾನ್ನಗಳನು। ಮುನ್ನ ಮಜ್ಜಿಗೆಗಳ ನಲೆಯಲಿನ್ನು ಬಡಿಸಿ ಇರಿಸಿರುವೆನು।।2।। ಉಪ್ಪು ಉಪ್ಪಿನ ಕಾಯಿಗಳನು। ಹಪ್ಪಳ ಸಂಡಿಗೆಗಳನು। ತುಪ್ಪದಲಿ ಕರಿದು ಸರ್ವರೊಪ್ಪುವಂತೆ।।3।। ಬಟ್ಟನ ಬುರಬುರಿಗಳನು। ಅಟ್ಟಹಾಸದಿಂದ।

ಸರ್ವರೊಟ್ಟುಗೂಡಿ ಸವಿಯಲೆಂದು॥4॥ ಹಾಲು ಮೊಸರು ಮಿಶ್ರಮಾಡಿ। ಮೇಲಾದೋಗರವ ನೀಡಿ ಮೇಲೆ ರಾಮಗರ್ಪಿಸುವೆನು। ಬಾಲ ಬಾಲಕಿಯರು ಕೂಡಿ॥5॥

ಮುತ್ತಿನ ದೊನ್ನೆಯರಚಿಸಿದರಾಗ (ಹಾಲು, ತುಪ್ಪ ಬಡಿಸುವ ಹಾಡು) ರಾಗ:ಭೈರವಿ

ಮುತ್ತಿನ ದೊನ್ನೆಯರಚಿಸಿದರಾಗ। ಮಿತ್ರೆಯರೆಲ್ಲರು ನೆರೆದರು ಬೇಗ। ನಾಗಲೋಕದಿಂದ ತರಿಸಿದ ಕ್ಷೀರ। ಮಹಾಲಕ್ಷ್ಮೀಗೂ ನಾರಾಯಣಸ್ವಾಮಿಗೂ ನಾರಿಯರು ಹಾಲು-ತುಪ್ಪ ಬಡಿಸುವರು। ॥1॥ ಚಿನ್ನದ ದೊನ್ನೆಯ ರಚಿಸಿದರಾಗ। ಕನ್ನೆಯರೆಲ್ಲರು ನೆರೆದರು ಬೇಗ। ದೇವ ಲೋಕದಿಂದ ತರಿಸಿದ ಕ್ಷೀರ। ನಾರಿ ಮಹಾಲಕ್ಷ್ಮಿಗೂ ನಾರಾಯಣಸ್ವಾಮಿಗೂ ನಾರಿಯರ್ ಹಾಲು ತುಪ್ಪ ಬಡಿಸಿದರು॥2॥ ಹವಳದ ದೊನ್ನೆಯ ಚರಿಸಿದರಾಗ ಹರದೆಯರೆಲ್ಲ ನೆರೆದರು ಬೇಗ। ಸತ್ಯ ಲೋಕದಿಂದ ತರಿಸಿದ ಕ್ಷೀರ। ನಾರಿ ಮಹಾಲಕ್ಷ್ಮಿಗೂ ನಾರಾಯಣ ಸ್ವಾಮಿಗೂ ನಾರಿಯರ್ ಹಾಲು ತುಪ್ಪ ಬಡಿಸಿದರು॥3॥

ಉರುಟಣೆ

ಅರಸಿನ ಹಚ್ಚುವೆನೀಗ ರಾಗ: ಪುನ್ನಾಗವರಾಳಿ

ಅರಸಿನ ಹಚ್ಚುವೆನೀಗ ಸರಸಿಜಾಕ್ಷಗೆ ಬೇಗ। ದಿವ್ಯ ಕರುಣೆಸು ಮುಖವನು ಕರ ಕಮಲಕೆ ನಾನು। ಅರಸಿನ ಹಚ್ಚುವೆನು॥ಪ॥ ಚಿಕ್ಕ ಪ್ರಾಯದಿ ನಾನು। ನಿಮ್ಮನು ನೆನೆವೆನು। ಎನ್ನಪಾಲಿಸು ಜಾಣ। ಅಕ್ಷತೆಯನಿಡುವೆನು॥1॥ ಕಂಬು ಕಂಠನೆ ದಿವ್ಯ। ತಾಂಬೂಲ ಪಿಡಿದು ನಾ। ಕೊಳ್ಳುನೀ ಶ್ರೀನಿವಾಸ। ನಂಬಿ ಪಾದದಾಸ॥2॥ ಸುರಗಿ ಮಲ್ಲಿಗೆ ಜಾಜಿ। ಸರಗಳ ಪಿಡಿದು। ನಾ ಕೊರಳ ಪಾಲಿಸು ಜಾಣ। ಸರಗಳ ನಾ ಹಾಕುವೆನು॥3॥

ಉರುಟಣೆಗೆ ಬಾರೆ ಹರುಷದಿಂದಲಿ ರಾಗ: ಸುಪೋಷಿಣಿ

ಉರುಟಣೆಗೆ ಬಾರೆ ಹರುಷದಿಂದಲಿ ನೀರೆ ಸರಸಾದಿಂ ವಯ್ಯಾರೆ ಅರಸಿಯೇ ನೀ ಬಾರೆ॥ಪ॥ ಸರಸಿಜಾಕ್ಷಿಯೆ ನಿನ್ನ ಮೆರೆವೊ ಕಪೋಲಕ್ಕೆ ಸರಸಾದಿಂದಲಿ ನಾನು। ಅರಿಸಿನವ ಹಚ್ಚುವೆನು॥1॥ ಲೋಲಾನೇತ್ರೆಯೆ ನಿನ್ನ ಫಾಲವನು ತೋರೆ ಲೀಲೆಯಿಂ ಕುಂಕುಮದ ತಿಲಕವನು ತಿದ್ದುವೆನು॥2॥ ಮಂದಗಮನೆಯೆ ನಿನ್ನ ಕಂದಾರವನು ತೋರೆ ಸುಂದಾರಿಮಣಿ ನಿನಗೆ ಗಂಧವನು ಹಚ್ಚುವೆನು॥3॥ ಸಾರಸಾಕ್ಷಿಯೆ ನಿನ್ನ ಸೋಲುವೋ ಮುಡಿಗೆ ದಿವ್ಯ ಪಾರಿಜಾತದ ಹೂವ ಮಾಲೆಯನು ಮುಡಿಸುವೆನು॥4॥ ಪದುಮನೇತ್ರಿಯೆ ನಿನ್ನ ಮಧುರಾಧರವ ನೀಡು ಸುದತೀಮಣಿ ತಾಂಬೂಲವ ಮುದದಿಂ ನೀಡುವೆನು॥5॥

ಉರುಟಾಣೆಗೆ ಹರುಷಾದಿ ಬಾರೈ ರಾಗ:ಶ್ರೀ

ಉರುಟಾಣೆಗೆ ಹರುಷಾದಿ ಬಾರೈ। ಉರುಗಾದಿ ಪತಿಗೆ ನಾನೀಗ ಲೇ॥ಪ॥ ಸಡಗಾರದಿಂದ ಸನಕಾದಿವಂದ್ಯ। ಇನಕುಲ ತಿಲುಕನೆ ಬೇಗನೇ॥ಅ.ಪ॥ ಮತ್ಸ್ಯನಾಗಿ ವೇದಗಳನ್ನ ತಂದು। ಕೂರ್ಮನಾಗಿ ಗಿರಿಯಾ। ಬೆನ್ನೊಳು ಪೊತ್ತು ಕಾಮಜನಕನೇ ನಿನ್ನ। ಕಾಲು ಕೋರೆದಾಡೆಗೆ। ಪ್ರೇಮದಿಂದ ಅರಿಶಿನವ ಹಚ್ಚುವೆ॥1॥ ಹಿರಣ್ಯಾಕ್ಷನನ್ನು ಕೊಂದೆ ನೀ ಭರದಿ ತರಳನಿಗಾಗಿ ಕಂಬದಿಂದ ಬಂದೆ। ವರ ನಾರಸಿಂಹ। ಪರಮಾದರದಿ। ತಿಲುಕಾವತಿದ್ದುವೆ ಬೇಡುವೇ॥2॥ ವಾಮನನಾಗಿ ಬಲಿಯಾ ಭೂಮಿಗೆ। ತುಳೀದೇ ತಾತನಾಜ್ಞೆಯಿಂದ ಮಾತೆಯನು ಕೊಂದೆ। ನಾಥ ಪರಶುರಾಮನನು ಬೇಡುತಲಿ। ಪೂಸುವೆನು ಗಂಧವ ಸುಂದರಾ ನಿನ್ನ ಕಂಧರಕ್ಕೀಗಾ॥3॥ ಕೈಕೆಯಾಜ್ಞೆಯಿಂದ ಕಾನನಕೆ ಪೋಗಿ। ರಾವಣನ್ನ ಕೊಂದ ರಾಮಚಂದ್ರನೇ। ರಮಣೀಯರಾ ಸೀರೆಗಳ। ಕದ್ದ ರಾಜೀವಾಕ್ಷಗ್ಹಾರವ ಹಾಕುವೆ॥4॥ ನಾರಿಯರ ವ್ರತವಾ ಕೆಡಿಸಿದ ಬೌದ್ದನೆ। ಕುದುರೆಯನ್ನು ಏರಿ ಬಂದ ಕಲ್ಕ್ಯನೇ ನೀ ವರ ಅಲಂಕಾರ ಪೊರೆವೊ। ದೊರೆಯೆ ಕರ ನೀಡು ವೀಳ್ಯವ ಕೊಡುವೆನಾ॥5॥

ಉರುಟಣೆಯನುಗೈಯುವೆ ನಾ **ರಾಗ: ರೀತಿಗೌಳ**

ಉರುಟಣೆಯನುಗೈಯುವೆ ನಾ। ಸರಸಿಜಾಕ್ಷನೇ.....॥ಪ॥ ಅರುಣ ಪ್ರಭೆಯು ಪೋಲುತಿರುವೋ। ಮೆರೆವೋ ಕದಪಿಗೇ....। ಅರಿಶಿನಾವ ಹಚ್ಚುವೆನಾ। ಕರುಣದಿಂ ನೋಡೈ॥1॥ ಪಂಕಜಾಕ್ಷನಿಮ್ಮ ಫಣೆಗೆ। ಕುಂಕುಮನಿಟ್ಟೂ...। ವೆಂಕಟೇಶಾ ಪೊರೆಯೋ। ಎಂದಲಂಕರಿಸುವೆನೂ.....॥2॥ ಗಳವು ಮೂರೇಖೇಯಿಂದ ಹೊಳೆಯುತಿರುತಿಹಾಕಂಠಕೆ ಬಳಿವೆಸು ಗಂಧವನ್ನೂ। ನಲವಿನಿಂದಲೀ....॥3॥ ಕುಂದ ಮರುಗ ಸುಮಗಳಿಂದ। ಅಂದವಾಗಿಹಾ ಮಂದರಾದ ಹಾರವನ್ನೂ। ತಂದುಹಾಕುವೆ ....॥4॥ ನಿರ್ಮಲಾಂಗ ನಿಮಗೆ ತಾಂಬೂಲವೀಯುವೇ...। ಸನ್ಮೋದದಿ ಸ್ವೀಕರಿಸು ಮನೋಹರ॥5॥

ಎನ್ನರಸ ಚೆನ್ನರಸ – ಹೆಣ್ಣು **ರಾಗ:ಪುನ್ನಾಗವರಾಳಿ**

ಎನ್ನರಸ ಚೆನ್ನರಸ ಪಟ್ಟದರಸ ಪ್ರಾಣಕಾಂತ। ಸನ್ನುತಾಂಗ ಎನ್ನಾದಿರನ್ನ ಗುಣಸಂಪನ್ನ। ಪ್ರಾಣಪ್ರಿಯ॥ಪ॥ ಕರಮುಗಿದು ಬೇಡಿಕೊಂಬೆ ತವ ಚರಣವನು ನೀಡುಎಂಬೆ। ವರಕರ ಪರಿಶೋಭಿಸುತಿರುವೋ ಅರಿಶಿನವ ಹಚ್ಚುವೇನು॥1॥ ಬಾಲೆಯಾದ ಎನ್ನ। ಮೊರೆಯ ಲೀಲೆಯಿಂದ ಲಾಲಿಸಯ್ಯ। ಬಾಲ ಚಂದ್ರನ ಪೋಲುವಂಥ ಫಣೆಗೆ ತಿಲಕವನ್ನು ಇಡುವೆ॥2॥ ಸುಂದರಾಂಗ ಬಾಹುಯುಗಳ ಚಂದದಿಂದ ನೀಡಬೇಕೈ। ಅಂದದಿಂದ ಕಂಠಕೆಸೆವೊ ಗಂಧವನ್ನು ಹಚ್ಚುವೆನು॥3॥ ನಂಬಿದೆನೈ ನಿನ್ನ ಚರಣ। ಬೆಂಬಿಡದೆ ವಂದಿಪೆ ರಮಣ। ತಾಂಬೂಲವ ಕೈಗೊಳ್ಳೈ ಸುಗುಣ ಸಂಭ್ರಮದಿಂ ಕರುಣಾ ಭರಣ॥4॥ ಸ್ವೀಕರಿಸೆಂದೆನುತ ನಾನು ನೇಮದಿಂದ ಕೇಳಿಕೊಂಬೆ ನಾಗಸಂಪಿಗೆ ಮಾಲೆಯನ್ನು ಹಾಕುವೆನು ಸೀತಾಪತೆ॥5॥ ಯಾಮಳಾವದಂತ ಪದಕೆ ಜಾವಳಾವನ್ನಚ್ಚುವೆನು ಭೂಮಿಜದೊಡೆಯ ನೀನು ಭಾವ ಜಲಸನ್ನುಡಿಯ ಲಾಲಿಸಿ॥6॥ ಮಾರಸುಂದರಾನೆ ನಿನಗೆ ಆರತಿಯನೆತ್ತುವೆನು ವಾರಿಜಾಕ್ಷನಾದ ನಿನಗೆ ಉರುಟಣೆಯ ಮಾಡುವೆನು॥7॥

ಎನ್ನರಸಿ ಚೆನ್ನರಸಿ – ಗಂಡು **ರಾಗ:ನೀಲಾಂಬರಿ**

ಎನ್ನರಸಿ ಚೆನ್ನರಸಿ ಪಟ್ಟದರಸಿ ಪ್ರಾಣಕಾಂತೆ। ಸನ್ನುತಾಂಗಿ। ಮುಖವ ತೋರು। ಅರಿಶಿನವ ಹಚ್ಚುವೇನು॥ಪ॥ ಪೂರ್ಣ ಚಂದ್ರಮನ ಪೋಲ್ವ ಲಲಾಟಗಳ ಬೆಳಕ ತೋರು। ಕುಂಕುಮವನಿಡು ವೆನೀಗ। ಪಂಕಜಾಕ್ಷಿ ನಿನಗೆ ಬೇಗ॥2॥ ಗಂಧ ಕಸ್ತೂರಿ ಪುನುಗು ಜವ್ವಾಜಿ ಪರಿಮಳಗಳ ಬೆರಿಸಿ ದಂಥ। ಗಂಧವನು ಹಚ್ಚುವೇನು। ಸುಂದರಾಂಗಿ ನಿನಗೆ ನಾನು॥2॥ ಮೊಲ್ಲೆ ಮಲ್ಲಿಗೆ ಜಾಜಿಮರುಗ ಒಳ್ಳೆ ಶಾವಂತಿಗೆಯ ಹಾರವನ್ನು ಹಾಕುವೇನು। ಸಾರಸಾಕ್ಷಿ ನಿನಗೆ ನಾನು॥3॥ ಬೆಳ್ಳಿತಟ್ಟೆಯಲ್ಲಿ ಒಳ್ಳೆ ವಿಳ್ಳೆಯದೆಲೆಯು ಅಡಿಕೆ ಸುಣ್ಣ ವೀಳ್ಯೆಯವ ಸ್ವೀಕರಿಸೌ ಪ್ರಾಣಕಾಂತೆ ತಡವು ಮಾಡದೇ॥4॥

ಉರುಟಣೆಯನು ನಾ **ರಾಗ: ಶಂಕರಾಭರಣ**

ಉರುಟಣೆಯನು ನಾ ವಿರಚಿಪೆ ರಮಣ। ಕರುಣೆಸು ಗುಣಮಣಿಗಳ ಶರಣ॥ಪ॥ ಕಾಳಿಯ ಫಣೆ ಮೇಲೆ ನಾಟ್ಯವನಾಡಿದ। ಪಾದಕೆ ಅರಿಶಿನ ಹಚ್ಚುವೆನು। ಕನ್ನಡಿಯಂದದಿ ಹೊಳೆಯುವ ಮುಖಕೆ। ತಿಲಕವ ತಿದ್ದುವೆ ನಾನೀಗ॥1॥ ಅತ್ತರು ಪನ್ನೀರು ಪುನುಗು ಜವ್ವಾಜಿಯ। ಅಂದದ ಗಂಧವ ಹಚ್ಚುವೆನು। ಮರುಗ ಮಲ್ಲಿಗೇ ಸುರಗಿ ಶಾವಂತಿಗೆ। ಹಾರವ ಹಾಕುವೆ ನಾನೀಗ॥2॥

ಉರುಟಣೆಯ ಮಾಡುವೆ ಅರಸಾ **ರಾಗ: ಮೋಹನ**

ಉರುಟಣೆ ಮಾಡುವೆ ಅರಸಾ ನಿಮಗೇ। ನಾ ಉರುಟಣೆಯ ಮಾಡುವೆ॥ಪ॥ ವರದರ್ಪಣದ ಪೋಲ್ ಮೆರೆವೊ ಕಪೋಲವ। ಕರುಣೆಸು ತೊಡೆವೆನು ಅರಿಶಿನವನು ನಾ॥1॥ ಬಾಲ ಮೃಗಾಂಕನಂತೆ ಕಂಗೊಳಿಸುವ ಫಾಲಕೆ। ಕುಂಕುಮವಿಡುವೇ ಪಾಲಿಸೋ ರಮಣ॥2॥ ಶ್ರಮದಿ ನೀ ಬಳಲಿರುವೆ ಗಂಧವ ಹಚ್ಚಿ। ಉಪಚರಿಸಿ ಪಾಡುವೆ ಲಾಲಿಸು

ರಮಣ॥3॥ ಮಂದಹಾಸ ವದನೇಂದುವ ತೋರಿಸೈ। ಚಂದದಿ ಗಂಧವ ತಳೆಯುವೆನು॥4॥ ಕುಂದ ಕುಸುಮಗಳ ಸುಂದರ ಮಾಲೆಯ। ಸುಂದರ ನಿನಗೆ ನಾ ಹಾಕುವೆನು॥5॥ ಮೇಲೆನಿಸಿದ ಪೊಸ ವೀಳ್ಯವ ನೀಡುವೆ। ಲೀಲೆಯೊಳನುಪಮ ಶೀಲನೆ ಮುದದಿ॥6॥

ಕರುಣಾಕರ ನಿಮ್ಮ ಉರುಟಣೆಗೀಗಾ **ರಾಗ:ಶ್ರೀ**

ಕರುಣಾಕರ ನಿಮ್ಮ ಉರುಟಣೆಗೀಗಾ। ನೆರೆ ಕರೆಯುವೆನು ಹರುಷದಿ ಬಾ॥ಪ॥ ಪರಮಾದರದಲಿ ಉರುಗಶಯನನಿಮ್ಮ। ನೆರೆ ಬೇಡುವೆನು ದಯೆ ತೋರೈ॥ಅ.ಪ॥ ಗರಳ ಕಂಠನ ಮಿತ್ರ ಗರುಡಗಮನ। ಹರೆ ಸರಸಿಜಾಕ್ಷಿಯ ಸಂಭ್ರಮದೀ। ವರ ಅರಿಶಿನವನೂ ಪರಮಾದರದಲಿ ತೊಡೆಯುವೆ ನೀಗಾ॥ ದಯೆ ತೋರೈ॥1॥ ಭೀಮಾರ್ಜುನನುತ ಕಾಮಕೋಟಿ ತೇಜ। ಕಾಮಿಸಿ ಕುಂಕುಮ ವಿಡಲಿರುವೆ। ಭಾಮೆ ನಾನೀಗ ಪ್ರೇಮದಿ ಬೇಡುವೆ।ಫಣೆಯನು ತೋರೈ ಕರುಣಾಸಾಗರಾ॥2॥ ಕಂದರ್ಪನ ಪಿತ ಗಂಧವ ಹಚ್ಚುವೆ ಕಂದರ ತೋರೈ ಸುಂದರನೇ। ಮಂದರಧರ ಗೋವಿಂದ ಜನಾರ್ಧನ। ಸುಂದರ ಕಂಠಕೆ ತೊಡೆಯುವೆನೀಗಾ॥3॥ ಕಮಲಾಸನ ಪಿತ ಸುಮಹಾರವನು ಕೊರಳೊಳು ಅರ್ಪಿಪೆ। ಮುರಹರನೇ ಭಾಮೆ ರುಕ್ಮಿಣಿಪ್ರಿಯ ದಾಮೋದರ ಹರೇ। ಬಲರಾಮನ ಅನುಜ ನಿಮಗೀಗಾ॥4॥ ನಿಗಮ ಗೋಚರ ಕೃಷ್ಣ ನಗಧರ ಮುರಹರ। ಮಿಗೆ ಹರುಷದಿ ನಾ ತಾಂಬೂಲವ। ಖಗವಾಹನ ಪ್ರಿಯ ಜಗದ್ದೋದ್ಧಾರಕ ಕೊಡುವೆನು ನಾನು ಸ್ವೀಕರಿಸೈ॥5॥

ಕರ್ಪೂರ ವೀಳ್ಯವ ಅರ್ಪಿಸುವೆನಾ **ರಾಗ:ಮಾಂಡ್**

ಕರ್ಪೂರ ವೀಳ್ಯವ ಅರ್ಪಿಸುವೆನಾ। ಕಾಮಜನಕ ನೀಕರ ನೀಡೈ॥ಪ॥ ಅರ್ತಿಯಿಂದಲಿ ಆನಂದವ ತೋರುತ। ಚಿತ್ತಜನಯ್ಯ ನಿಮಗೀಗಾ। ಉತ್ತಮವಾಗಿಹ ಅಡಿಕೆಪುಡಿ ಎಲೆ ಮುತ್ತಿನ ಸುಣ್ಣವ ಮುದದಿಂದ॥1॥ ತಾಟಕಿಯನು ಕೊಂದ ತಾಮರಾಕ್ಷನೆ। ತಾಮಸ ಮಾಡದೆ ತಂದಿರುವೇ। ತಾರಕನಾಮಗೆ ತರುಣಿಯ ಪೊರೆದಿಹ ತಾಪಸ ವಂದ್ಯ ತರಳನಿಗೇ॥2॥ ಧರೆಯೊಳು ನೆಲಸಿಹ ದಕ್ಷಿಣ ಕಾಶಿಯ ಪುರವನು ಪೊರೆಯುವ ನರಹರಿಗೇ॥3॥

ಕಸ್ತೂರಿ ಕೇಸರೀ ಗಂಧದಾತ್ಯೆಲವೋ **ರಾಗ: ಶಿವರಂಜಿನಿ**

ಕಸ್ತೂರಿ ಕೇಸರೀ। ಗಂಧದಾತ್ಯೆಲವೋ। ಪಚ್ಚಕರ್ಪೂರಯೇನು ಪುನಗುಯೇನೂ। ಮೈಸೂರು ಬೆಂಗ್ಳೂರು ಮೇಲೆ ತಂಜಾವೂರು। ಅನಂತಶಯನದಾಗಂಧವನ್ನೂ। ಇಷ್ಟು ದೇಶದಾ। ಗಂಧವನ್ನುನಿನಗಾಗಿತಂದೆನೋ ನೀರಜಾಕ್ಷಾ। ಕೊರಳು ತೋರಿರೈ ಗಂಧಹಚ್ಚುವೆನು। ಕೋಮಲಾಂಗಾ॥

ಕಮಲೇಶ ಬೇಡುವೆನೂ **ರಾಗ: ಜುಂಜೂಟಿ**

ಕಮಲೇಶ ಬೇಡುವೆನೂ। ಕಮಲಾಪಾದತೋರೈ। ಮನಸೀನ ಬೇಡುವೇ॥ಪ॥ ಕಮಲಾದರ ಸಾಪರಿಮಳದಾ। ಅರಿಶಿಣ ಹಚ್ಚುವೇ ಬಾ ಬಾ ಬಾ ಸರಸಿಜನಾಭನೆ ನಿಮಗೆ ಕುಂಕುಮದಾ ತಿಲುಕವನು ಬಿಂಕದಿನಾ। ತಿದ್ದುವೆನೂ॥1॥ ನಂದನಕಂದಾ ಬೇಗಾ ಗಂಧವ ಹಚ್ಚುವೆ ಧೀರಾ ಕಂದರವಾ। ತೋರೈ ಶೂರಾ ಸುಂದರನೇ। ಛಂದದಿಂದಾ। ವಂದಿಸುತಾ। ಹಾರವನೂ॥2॥ ಅಂಬೂಜಾಸನಪಿತಾ। ಅಂಬೂನಂದನ ಹೀತಾ। ತಾಂಬೂಲವ ಕೊಡುವೆನು। ಬಾರೈ ನಂಬಿರುವೇ ಶಂಭುರಿತಾ ಸಂಭ್ರಮದೀ ಶಂಭುಪಿತಾ॥3॥

ಪ್ರಿಯ ಬಾರೋ ನೀ ಉರುಟಣೆಗೆ **ರಾಗ: ಬೇಹಾಗ್, ಏಕತಾಳ**

ಪ್ರಿಯ ಬಾರೋ ನೀ। ಉರುಟಣೆಗೆ ಎನ್ನ ದೊರೆ ಬಾರೋ ನೀ॥ಪ॥ ಅರಸಾರೆ ನಿಮ್ಮ ಕರಚರಣಕ್ಕೆ ಅರಿಶೀನವನ್ನು ವಿರಚಿಸುವೆನು॥ಅ.ಪ॥ ಪಂಕಜಾಕ್ಷ ನಿನ್ನ ಫಣೆಯಾ ತೋರೈ ಬೇಗ ನಾ ಕುಂಕುಮವ ಇಡುವೆನು। ಶಂಖು ಚಕ್ರಧಾರಿ।

ಇಂದಿರೇಶ ನಿಮ್ಮ ಸುಂದರವಾದಂತ ಕಂಧರಕ್ಕೆ ನಾ ಗಂಧವ ಹಚ್ಚುವೆನು॥1॥ ಪಚ್ಚ ಕರ್ಪೂರದಿಂ ಸುತ್ತಿ ವೀಳ್ಯಾಯಾವ ಸಚ್ಚರಿತನೇ ನಿಮಗೆ ಮೆಚ್ಚಿ ಕೊಡುವೆನೊ। ಮರುಗ ಮಲ್ಲಿಗೆಯೂ ಸುರಗಿ ಸಂಪಿಗೆಯೂ। ಧೀರ ನಿಮಗೆ ನಾ ಹಾರ ಹಾಕುವೇನು॥2॥

ನವರತುನಾದ ತಟ್ಟೆಯೊಳೀಗ **ರಾಗ: ಮಧ್ಯಮಾವತಿ**

ನವರತುನಾದ ತಟ್ಟೆಯೊಳೀಗ। ವೀಳ್ಯವನು ಬೇಗ। ಪ್ರಿಯ ಕೊಡುವೇನು। ಸ್ವೀಕರಿಸೀಗಾ॥ಪ॥ ಮುತ್ತಿನ ತಟ್ಟೆಯೊಳ್। ಸುತ್ತುವೀಳ್ಯವನೂ। ಅರ್ಥಿಯೋಳ್ ತಂದಿಹೆನಾನೂ। ಶ್ರೀಕರ ರೂಪಾ ಏತಕೆ ಕೋಪ। ಪಾಲಿಸು ಕುಲಮಣಿದೀಪ॥1॥ ಪರಿಪರಿ ಪರಿಮಳ। ಬೆರಸಿದ ವೀಳಯ ಸರಸವ ಬೀರುತಲೀಗಾ ನೀಡುವೆ ನೀದಯ ಮಾಡಿ ಸ್ವೀಕರಿಸೈ। ಬೇಡುವೆ ಪ್ರಾಣಕಾಂತ॥2॥ ಪಾಡಿಪೊಗಳುವೆನು। ವಿನೋದಿಂದ ಪರಮಾನಂದದಿಂದಾ। ಬಿಳಿ ಎಲೆ ಅಡಿಕೆಯು ಕೆನೆ ಸುಣ್ಣವನೂ ಕರುಣದಿ ನೀಡುವೆ ನಾನೂ॥3॥

ಪ್ರಾಣಕಾಂತಾ ಉರುಟಣೆಯನ್ನು **ರಾಗ: ದರ್ಭಾರಿ ಕಾನಡಾ**

ಪ್ರಾಣಕಾಂತಾ ಉರುಟಣೆಯನ್ನು ಮಾಡುವೆನು ನಾ॥ಪ॥ ಮಾನಿನಿಯಳೂ ನಾನು। ಶ್ರೀನಾಥ ನಿಮ್ಮೆದುರು। ಮೌನವನು ತ್ಯಜಿಸಿ। ಪರಮಾನಂದದಿಂದ॥1॥ ಗಂಧವನು ಪೂಸುವೆನು। ಮಂದರಧರ ನಿಮಗೆ। ಸುಂದರ ಹೃದಯಕ್ಕೆ ಅರವಿಂದ ಲೋಚನೆ ನಾ॥2॥ ಪಂಕಜನಾಭನಿಗೆ। ಕುಂಕುಮವ ಹಚ್ಚುವೆನು। ವೆಂಕಟಗಿರಿ ಪತಿಗೆ। ಪಂಕಜಾಕ್ಷಿ ನಾ॥3॥ ಕೋಮಲಾಂಗನ ಕೊರಳ್ಗೆ। ಪೂ ಮಾಲೆ ಹಾಕುವೆನು। ಕಾಮಕೋಟೀರೂಪ ಸ್ವಾಮಿಗೆ ನಾನು॥4॥ ಮಂಗಳ ರೂಪನಿಗೆ। ಅಂಗನೆಯಳೂ ನಾನು। ಪ್ರತಿಭಾಂಕುರಗೆ ನಮಿಸಿ। ವಿರಮಿಸುವೆನು ನಾ॥5॥

ಪಾಲಿಸು ರಮಣನೆ ಲಾಲಿಸು ಬಿನ್ನಪ (ವೀಳ್ಯಕೊಡುವುದು) **ರಾಗ:ಆರಭಿ**

ಪಾಲಿಸು ರಮಣನೆ ಲಾಲಿಸು ಬಿನ್ನಪ ಬಾಲೆಯು ನಾನಿಂತು ಪೇಳುವೆನು॥ಪ॥ ಕೋಮಲವಾದಂಥ ನಾಗವಲ್ಲಿಯಲಿ ಬಾಲೆ ಇತ್ತ ಮೆಣಸು ಬಾದಾಮಿಗಳು, ಏಲಕ್ಕಿ, ಲವಂಗ ಬೆರಸಿದ ತಾಂಬೂಲ ಪ್ರಾಣದೊಲ್ಲಭನೇ ಸ್ವೀಕರಿಸು॥1॥ ಗಟ್ಟಿಯಾಗಿ ಹಸೆಮಣೆ ತಟ್ಟೆಯೋಳ್ ಪಿಡಿದೆನ್ನ ರಟ್ಟೆಗಳು ನೋಯ್ದವು ಸಿಟ್ಟೇಕೆ ಭಕ್ತಿಯಿಂದಲಿ ನಿಮ್ಮ ಆಜ್ಞೆಯೊಳ್ ಇರುವೆನು ಚಿತ್ತದೊಲ್ಲಭನೆ ಸ್ವೀಕರಿಸೈ ॥2॥ ವಿದ್ಯಾದಿ ಬಹುಶೂರಾ ಬುದ್ಧಿಲಿ ಗಂಭೀರಾ ಧರೆಗೆಲ್ಲ ಬಹು ಶೂರಾ... ಮಾತಾ ಪಿತೃಗೆಲ್ಲಾ ಪ್ರಿಯನಾದ, ಕೋಮಲವಾದಂಥಾ ರಾಜ್ಯಕೆ ನೀನೇ ಅಧಿಕಾರಿ॥3॥

ಬಾಲ ಸುಂದರ ಮೂರ್ತಿ

ಬಾಲ ಸುಂದರ ಮೂರ್ತಿ। ವೀಳ್ಯವ ಕೊಡುವೆನೂ॥ಪ॥ ಬಾಲೆಯು ನಾನಿಂತು ಬಹಳ ಹೊತ್ತಾಯಿತೂ। ಕೋಪವೇತಕ್ಕೋ ರಮಣಾ। ಕೋದಂಡರಾಮ॥1॥ ಚಿನ್ನದ ತಟ್ಟೆಯಲ್ಲಿ ಚಿಗುರೆಲೆ ಅಡಕೆಯು। ಚಿನ್ಮಯ ಕೃಷ್ಣನಿಮಗೇ। ನಗುತ ಮಡಿಸಿಕೊಡುವೆ॥2॥ ಮೈಸೂರು ವಿಳೇದೆಲೆ। ಮದರಾಸಿನಾಡಿಕೆಯು ಚೆನ್ನಪಟ್ಟಣದ ಸುಣ್ಣ। ಮಡಿಸಿಕೊಡುವೆ ನಿಮಗೆ॥3॥

ಮನ್ನಿಸಿ ಬಾರೈ ಬೇಗ

ಮನ್ನಿಸಿ ಬಾರೈ ಬೇಗ। ಮಾಡುವೆನುರುಟಣೆ॥ಪ॥ ಅರೀಶಿನಹಚ್ಚುವೆ। ಸರಸದಿಂದಾಲೀ ನಾನೂ। ಚಂದದ ಫಣೆಗೆ। ಕುಂಕುಮವಿಡುವೆನೂ। ಚೆಂದದಿಂದಾ॥1॥ ಕಸ್ತೂರಿ ಕೇಸರೀ। ಪಚ್ಚಕರ್ಪೂರಸಹಿತಾ। ಬೆರಸಿದ ಗಂಧವನ್ನೂ ಹಚ್ಚುವೆ। ಪ್ರಾಣಕಾಂತ ಕಂಠಕೀಗಾ॥2॥ ಮರುಗ ಮಲ್ಲಿಗೆ ಜಾಜಿ। ಸುರಗಿ ಸಂಪೀಗೇರೋಜಾ। ಹಾರಗಳ ಕಟ್ಟಿ ನಾ ಹಾಕುವೆ ಕೊರಳಿಗೆ। ಹರುಷದಿಂದಾ॥3॥ ಒಳ್ಳೆ ವೀಳ್ಳೇದೆಲೆ। ಪತ್ತಲವಂಗಾಸಹಿತಾ। ವಿಳ್ಯವ ತಂದಿಹೆನೂ। ಸ್ವೀಕರಿಸೈ ಕಾಂತ। ತಾಂಬೂಲವಾ॥4॥

ಮುಡುಪುಲು ಗೈ ಕೊನುವೇರಾ **ರಾಗ:ಸುರುಟ-ಆದಿತಾಳ**

ಮುಡುಪುಲು ಗೈ ಕೊನುವೇರಾ। ರಾವೇರ॥ಪ॥ ಮುದಮುತ ಮುಂದು ನಿಲಪಡವೇಡ। ಹೃದಯಮು ಕರಗದ ನೀಕಿದೇಮರೆ॥ಅ.ಪ॥ ತೆಲ್ಲನಿ ಯಾಕಲೊಕ್ಕಲ ತೋಡ। ಮೆಲ್ಲನಿ ನೀದರಿ ಚೇರ। ಸಲ್ಲಲಿತಾಂಗಲು ಪಾಟಲು ಪಾಡಿ ಉಲ್ಲ ಸಮುತೋನೇ ವೇಡಾ॥1॥ ಪಚ್ಚ ಕರ್ಪೂರ ಪರಿಮಳ ಮುಲತೊ। ದೆಚ್ಚು ಸುವಾಸನ ಮಲತೋ। ತೆಚ್ಚಿತಿನೇನಕಿ ಉತ್ಸಾಹಮುತೋ। ಸಚ್ಚರಿತ ನೀವು ದಯತೋ॥2॥

ಶ್ಯಾಮಸುಂದರ ಮೂರ್ತಿ ವೀಳ್ಯವನ್ನು **ರಾಗ: ಹಿಂದೋಳ**

ಶ್ಯಾಮಸುಂದರ ಮೂರ್ತಿ। ವೀಳ್ಯವನ್ನು ಕೊಡುವೇ॥ಪ॥ ಬಾಲೇಯುನಾನೀಗ। ಬೇಡಿ ಕೊಂಬೇನೂ ನಿಮ್ಮಾ। ಒಳ್ಳೆಯ ವೀಳ್ಯವಾ। ಸ್ವೀಕರಿಸೈ ಕಾಂತ॥1॥ ಮಿರೂಗುವ ತಟ್ಟೆಯೊಳು। ಪರಿಮಳಾದಡಿಕೇ ಎಲೆಯೂ। ಶ್ಯಾಮಸುಂದರನಿವಗೇ। ನಗುತನಾಮಡಿಸಿಕೊಡುವೇ॥2॥ ಚಿನ್ನದ ತಟ್ಟೆಯೊಳು ಬಣ್ಣದಡಿಕೆಎಲೆಯೂ। ರಾಮಚಂದ್ರರ ಕೈಗೇ ನಗುತನಾ ಮಡಿಸೀಕೊಡುವೇ॥3॥

ಚೆಂಡಾಟ

ಆಡೋಣ ಚೆಂಡನಾಡೋಣ **ರಾಗ: ಹಂಸಧ್ವನಿ, ಏಕತಾಳ**

ಆಡೋಣ ಚೆಂಡನಾಡೋಣ ಆಡೋಣ ಬಾರೋ ಪ್ರಿಯಾ॥ ಫುಟ್ ಬಾಲ್ ಆಡೋತರವಲ್ಲ ನೆಟ್ಟನು ಬಿಗಿಯುವ ಕಷ್ಟವಿಲ್ಲ। ಗಗನಕೆ ಹೋಗಿ ಬೆದರಿಸೊದಿಲ್ಲ। ಹರುಷಕೆ ಆಡುವುದೀ ಚೆಂಡು॥1॥ ಕ್ಯಾಚ್‌ಗಳ ಹಿಡಿಯುವ ಕಷ್ಟವಿಲ್ಲ। ಬಹು ಆತುರ ಪಡುವುದು ಬೇಕಿಲ್ಲ। ಓಡುವುದಂತು ಇಲ್ಲವೆ ಇಲ್ಲ। ಸರಸಕೆ ಆಡುವುದೀ ಚೆಂಡು॥2॥

ಆಡೋಣ ಚೆಂಡಾಡೋಣ **ರಾಗ:ಹಂಸಧ್ವನಿ**

ಆಡೋಣ ಚೆಂಡಾಡೋಣ। ಆಡೋಣ ನೀ ಬಾರೆ ಪ್ರಿಯೆ॥ಪ॥ ಕಾಲೇಜಿಗ್ಹೋಗುವ ಪರಿಯಿಲ್ಲ। ಕಾಲಲ್ಲಿ ನೂಕುವ ಶ್ರಮವಿಲ್ಲ। ವೇಳೆಯು ಸಾಗಿತು ಎನ್ನೊಲ್ಲ॥ ಜಾಲಕೆ ಆಡುವುದೀ ಚೆಂಡು॥1॥ ಜಗಳವ ಕಾಯುವ ಪರಿಯಿಲ್ಲ। ಹಗರಣ ಮಾಡಲು ತಡವಲ್ಲ। ಗಗನವ ನೋಡಿ ಬೆದರುವುದಿಲ್ಲ। ಲಘುವಿಲ್ಲ ಆಡುವುದೀ ಚೆಂಡು॥2॥ ಎಸ್ ಸ್ಟಡಿ ಎನ್ನುವ ಪರಿಯಿಲ್ಲ। ನೆಕ್ ಟೈಬಿಚ್ಚುವ ಹಾಗಿಲ್ಲ। ಬಿಸಿಲು ಬಾಯಾರಿಕೆಗಳು ಇಲ್ಲ। ಹಸನಕೆ ಆಡುವುದೀ ಚೆಂಡು॥3॥

ಆಡೋಣ ಬಾರೋ ಪ್ರಿಯಾ **ರಾಗ: ಮಾಂಡ್**

ಆಡೋಣ ಬಾರೋ ಪ್ರಿಯಾ ಚೆಂಡನಾಡೋಣ ಬಾರೋ ಪ್ರಿಯಾ॥ಪ॥ ಅಶ್ವಾವನೇರೂತ್ತ ಅರ್ತಿಯಿಂದಲೇ ನೀನು। ಪ್ರತ್ಯಕ್ಷನಾಗದೆ ಪೋದಂತ ಸ್ವಾಮಿಯೇ॥1॥ ನಿನ್ನ ನಂಬಿರುವ ಸುಗುಣೀ ಸಂಪನ್ನೆಯ। ಚೆನ್ನಾಗಿರುವಂಥ ಮಲ್ಲೀಗೆ ಚೆಂಡನ್ನು॥2॥ ಎನ್ನಾ ಮೊರೆಯನ್ನು ಲಾಲಿಸಿ ಬಂದಂತ। ಶ್ರೀಮನ್ನಾರಾಯಣ ಸಂಪೀಗೆ ಚೆಂಡನ್ನು॥3॥

ಚಂಡನಾಡೋಣ ಬಾರೋ ಪ್ರಿಯಾ **ರಾಗ: ಹಂಸಧ್ವನಿ**

ಚಂಡನಾಡೋಣ ಬಾರೋ ಪ್ರಿಯಾ। ಚಂಡನಾಡೋಣ ಬಾರೋ ಪ್ರಾಣಕಾಂತನೆ ಕೇಗ್ಗುಣವಂತನೆ ಪಂಥಾದಿಂದಾಡೋಣ॥ಪ॥ ಮಲ್ಲೀಗೆ ವನದಲ್ಲಿ ನಲ್ಲೇರು ನಾವೆಲ್ಲಾ। ಮಲ್ಲಿಗೇ ಹೂವ ಕೊಯ್ದು ಚಂಡು ಕಟ್ಟಾಡೋಣ॥1॥ ಸಂಪೀಗೆ ವನದಲ್ಲಿ ಸಂಪನ್ನೇರು ನಾವೆಲ್ಲಾ। ಸಂಪೀಗೆ ಹೂವಾ ಕೊಯ್ದು ಚೆಂಡು ಕಟ್ಟಾಡೋಣ॥2॥ ಜಾಜೀಯ ವನದಲ್ಲಿ। ಜಾಣೇರು ನಾವೆಲ್ಲಾ। ಜಾಜೀಯ ಹೂವ ಕೊಯ್ದು ಚೆಂಡು ಕಟ್ಟಾಡೋಣ॥3॥ಗುಲಾಬಿ ಬನದಲ್ಲಿ ಗುಂಪಾಗಿ ನಾವೆಲ್ಲ ಗುಲಾಬಿ ಹೂವ ಕೊಯ್ದು ಚೆಂಡು ಕಟ್ಟಾಡೋಣ॥4॥ ಸುರಗೀಯ ಬನದಲ್ಲಿ ಸುರರನ್ನೆರ್ ನಾವೆಲ್ಲ। ಸುರಗೀಯ ಹೂವ ಕೊಯ್ದು ಚೆಂಡು ಕಟ್ಟಾಡೋಣ॥5॥

ಚಂಡಾಡಿನಾರೇ ಸಿಟ್ರಿಡ (ತಮಿಳು) **ರಾಗ:ಕಾಮಾಚ್**

ಚಂಡಾಡಿನಾರೇ।।ಪ।। ಸಿಟ್ರಿಡ ಮಂಗೆಯರ್ ಸುಟ್ರಿವರ। ಕೊಂಡಾಡಿಚ್ಚಿಲ ಕಣ್ಣಾಡಿಡ ಉಯರ್ ಕುಂಜರಿಯುಂ ಉಗನುಂ ಸರಿಯಾ।।1।। ನಿಂಡ್ರಾ ಎಳುಂದಾ ವೀರನ್ನೈ ದಿಂಡಿಡುಂ ಶೂರನುಂ ನಮ್ ತಿಂಡಾಡಿಯ। ಉಯಿರ್ ಉಂಡಾಡಿಯ ಪುಗಳ್ ವಿಂದೋದೀಶ್ವರ್ ಕೊಂಡಾಡ।।2।। ಮಣಿಗಳ್ ಫಲಫಲೆನಾ ಮಾರಡಿ ಗೋಪುರಂ ಶಲಶಲೆನ। ಎಳನದಿ ಮುದಲಿನ್ ವಲಮಿಕಿ ತಿಲಕಂ ಥಳಥಳನೆ ಕುಳ್ಳೈನೆ ಫಳಫಳನೆ।।3।।

ಜೋಕಾದ ಸೀರೆನುಟ್ಟು

ಜೋಕಾದ ಸೀರೆನುಟ್ಟು। ಜಾಕೀಟು ಹಾಕಿಕೊಂಡು। ಮೋಟಾರ್ ಸೈಕಲ್ ಮೇಲೆ ಬಾಬಾಬಾ।।ಪ।। ವೋಳ್ಳೆ ವೊಳ್ಳೆ ಶೂ, ಸಾಕ್ಸ್ ಬೂಡ್ಸ್, ಕಾಲರ್ ಕಟ್ಟಿ। ವೊಳ್ಳೆ ಕಾಲರ್ ಕಟ್ಟೀಕೊಂಡು ಮೋಟಾರ್ ಸೈಕಲ್‌ಯೇರಿಕೊಂಡು ಟಾಟಾ ಬಿಲ್ಡಿಂಗ್‌ಗೆ ಬಾಬಾಬಾ।।1।। ಸಂಡೇ ಮಾರ್ಣಿಂಗಿನಲ್ಲಿ। ಕ್ರಿಕೆಟ್ ಬಾಲಾಡೋಣ। ಕ್ರಿಕೆಟ್ ಬಾಲಾಡೋಣ। ಬಾಬಾಬಾ।।2।। ಮ್ಯಾಚುಫುಟ್ಬಾಲ್ ಆಟವನ್ನೂ ಆಟಾವನ್ನೂ ಆಡಾಲೀಗಾ। ಮೋಟರಲ್ಲಿ ನೀನು ಬೇಗ ಮತ್ತೆ ಬಳಿಗೆ ಬಾಬಾಬಾ।।3।। ಉತ್ತುಮಕುಳಶಿರೋಮಣೀ। ಚಿತ್ತಕ್ಕಿದಯಮಾಡಿ। ಮುತ್ತಿನ ಚೆಂಡು ಕಟ್ಟೀ ಟಾಟಾಬಿಲ್ಡಿಂಗ್‌ಗೆ ಬಾಬಾಬಾ।।4।।

ಪ್ರಾಣಕಾಂತನೆ ಕೇಳು **ರಾಗ: ಕದನಕುತೂಹಲ**

ಪ್ರಾಣಕಾಂತನೆ ಕೇಳು ಗುಣವಂತಾನೆ। ಚೆಂಡುಗಳ ಪಂಥದಿಂದಾಡೋಣ ಬಾ ಬಾ।।ಬಾ।।ಪ।। ತೋರ ಮುತ್ತಿನ ಚೆಂಡುಗಳ ದಿವ್ಯಹಾರಾದಿ ಕಟ್ಟಿದ ವೀರನೇ। ವಯ್ಯಾರದಿಂದಸೇಯುವೆ ಬಾಬಾಬಾ।।1।। ಗಂಧ ಪರಿಮಳದೊಳಗದ್ದುತ। ದಿವ್ಯಗಂಧ ಪರಿಮಳದೊಳಗದ್ದುತ। ಸುಂದಾರ ಕೃಷ್ಣನಾನಂದಾದಿಸ್ಮರಿಸುತ। ಆನಂದದೊಳಗಾಡೋಣ ಬಾಬಾಬಾ।।2।। ಹ್ಯಾಟು ಬೂಟ್ಸುಗಳ ಕಾಲರ ಕಟ್ಟಿ। ಜೋಕಾದ ಅಂಗಿ ಹಾಕಿ। ಪೇಟಾವನ್ನೇ ಕಟ್ಟಿ ಮೋಟಾರ್ ಸೈಕಲ್ ಮೇಲೆ ಬಾಬಾಬಾ।।3।।

ನಲಂಗು

ನಲಂಗಿಡ ವರವೇಣುಂ ನಾದನೆ (ತಮಿಳು) **ರಾಗ: ದರ್ಬಾರಿ ಕಾನಡ**

ನಲಂಗಿಡ ವರವೇಣುಂ ನಾದನೆ ಜಗದೀಶನೆ। ಪ್ರಾಣೇಶನೇ ಎನದು ನೇಶನೆ।।ಪ।। ಆಸೆಯುಡನೇ ಅಡಿ ಪಣಿಂದೇನೇ। ಅನ್‌ಬುಡನ್ ಅಳಕಿರೇನ್ ಅರುಳ್ ತರವೇಣುಂ। ವರುಂದಿ ನಲಂಗಿಡ ವಾರುಂ ಅರುಳ್ ಕೂರುಂ ಆಸ್ಯೆತಾರುಂ ಕಣ್ಣಾಳನೇ।।ನಲಂಗಿಡವೆ ನಲಂಗಿಡವೆ ನಳಿನಲೋಚನ ತಾಂಬೂಲಕೊಳ್ಳ ವೇಗಮೇ ವಾರಿರ್।।

ನಲುಂಗಿಡುವೇ ವಾ ನಳಿನದಯಾಕ್ಷಿ (ತಮಿಳು)

ನಲುಂಗಿಡುವೇ ವಾ ನಳಿನದಯಾಕ್ಷಿ। ಕಣಿತ ವಿಲೋಚನಿಯೆ ಕರುಣ್ಯೆ ಕಟಾಕ್ಷಿ।।ಪ।। ಜಗಂಪುಗಳ್ ವೆಳ್ಳೀ ಅಂಡ ತಿಗಳ್ ವೆಳ್ಳಿ ಕಿಣ್ಣ ಮುಂಡು। ಡೇಕುಸ ತೂಕುಸೆಟ್ಟಿ ಇವೈಗಳುಕ್ಕೆನ್ನ ಕುರೈ।। (2ನೇ ಕಾಲ) ಸೊಂಬು ಕುಡಂಗಳ ಐಂಬತ್ತುರಂಡು ಇಣಂಗಿಲ್ ಅಡಂಗಿಯ ಚಿತ್ರವಿಚಿತ್ರ ಕುತ್ತು ವಿಳಕ್ಕು। ಪೆಟ್ಟಿ ಅಡಕ್ಕು। ಸಿಂಗಾರಲಂಕಾರ ತಂಗತ್ತಿನಾಲ್ ತಟ್ಟು ಆಡಿಯುಡನ್ ದೀಪಾವಳಿ ನೋಂಬುಡನೆ ಪೊಂಗಲ್। ತೃಪ್ತಿ ಎನ್ನುಡೆಯ ಒರುತ್ತಿಎನ್ನುಡೆಯ ಮಾಂಪೂಜ್ಯೆ ಅನೇಗಂ ಕಾಣಲಾಂ।।1।। ಮೈಸೂರ್ ಮಾಂಬಳಂ ಮಲೈವಾಳೈ ಪಳಂಗಳುಂ। ಡೇಕುಸ ತೂಕುಸೆಟ್ಟಿ ಇವೈಗಳುಕ್ಕೆನ್ನ ಕುರೈ। (2ನೇ ಕಾಲ) ಆಪಿಲ್ ಆರಂಜಿ ತೋಪಿಲ್ ಅನಾಸಿ ಕೊಯ್ಯಾ ನಾತ್ತೈ ಕೊಡಿಮಿಂದಿರಿಯುಂ। ಅತ್ತರ್ ಪುನುಗು ವಾಲ್‌ಮಿಳಗುಂ ಪಚ್ಚೈಕರ್ಪೂರಂ ಪರಿಮಳ ಗಂಧಂ। ಕಟ್ಟಿಲ್ ಮೆತ್ತೈ ಕುರುಚ್ಚಿಟೇಬಲ್ ನಿಲೈಕನ್ನಾಡಿಯುಂ ಕೂಡನಾಲು ದಾದಿಗಳುಂ।।2।।

ನಲುಂಗಿಡುರೇನ್ ವಾಡಿ (ತಮಿಳು)

ನಲುಂಗಿಡುರೇನ್ ವಾಡಿ ಎನ್ನ ನಳಿನದಯಾಕ್ಷಿ॥ಪ॥ ಕೋಚುವಂಡಿಮೇಲೆ ಏರಿ ಕುಸುಲಿ ಕಡ್ಡೈಕ್ಕು ಪೋಯಿರಂಗಿ ಉನ್ ಕೊಂಡೈಕೇತ್ತ ಕೂಡಾಮಲ್ಲಿಗ್ಗೈ ವಾಂಗಿತ್ತರೇನ್ ವಾಡೀ॥1॥ ಧರ್ಮಪುರಂ ಸೇಲೈವಾಂಗಿ ಧಾರಾಳಮಾಯ್ ತರೇನ್‌ವಾಡಿ ಕಣ್ಮಣಿಯೆ ಕಿಟ್ಟೇವಾಡಿ। ಕಲಂದ ಸಂದಣಂ ಪೂಸಿಕೋಡಿ॥2॥

ನಲುಂಗಿಡವರ ವೇಗಮೆ (ತಮಿಳು) **ರಾಗ:ಅಭೇರಿ**

ನಂಲುಗಿಡವರ ವೇಗಮೆ। ನಾಗರೀಕಮುಳ್ಳ ನೇಸರೆ। ನಾಗರೀಕಮುಳ್ಳ ನೇಸರೆ॥ಪ॥ ವೆಗುನಾಳ ಉಮ್ಮೈ। ವಿರುಂಬಿರುಂದೇನ್। ಫ್ರೆಂಡ್ಸ್‌ಗಳಿಡತ್ತಿಲೆ ಸೊಲ್ಲಿರುಂದೇನ್। ಎಲ್ಲೋರುಂ ವಾಯ್ಕೂಡಿ ಕನ್ಸಲ್ಟ್‌ಗಳ್ ಸೈದು। ಮ್ಯಾರೇಜ್ ಮುಡಿತ್ತುವಿಟ್ಟೋಂ॥1॥ ಟೌನಿಲೆ ಮಾಡಿವೀಡು ವಾಂಗಾ ವೇಂಡುಂ। ಮುಳುದುಂ ಎಲೆಕ್ಟ್ರಿಕ್ ಲೈಟ್ ಪೋಡಾವೇಂಡುಂ। ಹಾಲಿಲ್ ಸೋಫಾ ಸ್ಪ್ರಿಂಗ್ ಕಟಿಲ್‌ಗಳುಡನ್ನೈ। ಮಿನಿಯಾ ಟೇಬಲ್ ವೇಣುಂ॥2॥ ಹಿಂದು ಡೈಲಿ ಎಕ್ಸ್‌ಪ್ರೆಸ್ ಪೇಪರ್‌ವಾಂಗ ವೇಣುಂ। ನಾವಲ್ಸ್‌ಗಳ್ ನಾಂಮ್‌ವಾಂಗಿ ಬಾಲ್ಕನಿಯಲ್ ಪಡಿಕ್ಕವೇಂಡುಂ॥3॥ ಎಲ್ಲೋರು ನಮ್ಮೈ ಪಟ್ರಿ। ಒನ್ರುಂ ಸೊಲ್ಲಾದ ಉಂಗಳ್ ಫಾದರ್ ಮದರ್ ಇರುಕ್ಕವೇಂಡುಂ। ನಾಳಿಗೈ ಆಚ್ಚುದು ಪಾದಂ ತಾರುಂ ಮೈಡಿಯರ್ ಪ್ರಾಣನೇಸರೆ॥2॥

ನಲುಂಗಿಡ ವಾರುಂ ರಾಜಾ (ತಮಿಳು) **ರಾಗ: ಮಾಂಡ್**

ನಲುಂಗಿಡ ವಾರುಂ ರಾಜಾ। ನಾಣಯಮುಳ್ಳ ದೊರೆಯ್ಯೆ ॥ಪ॥ ಮುತ್ತುವೈತ್ತ ಪಂದಲಿಲೆ ರತ್ನಗೋಪಾಮಾಟ್ಟಿರುಕ್ಕು। ವಂದ ಜನಂ ಕಾತ್ತಿರುಕ್ಕ ವಾರುಮಯ್ಯ ನಲಂಗಿಡವೆ॥1॥ ಪಟ್ಟು ಜಮಕಾಳಂ ಮೆತ್ತೈ ಪಂದಲಿಲೆ ವಿರುಚ್ಚಿರುಕ್ಕು। ನಾಲು ವಿಧ ವಾದ್ಯಂಗಳುಂ ನಾಗರೀಕಮಾಯ್ ಒಲಿಕ್ಕ॥2॥ ಎಂದ ಊರು ಎಂದ ದೇಶಂ ಎಂಗಿರುಂದು ಇಂಗುವಂದಾಯ್। ಮೋಹನಪುರತ್ತಿನಿಲೆ ಮೋಹನೆಯ್ಯೆ ಕಾಣವಂದೇನ್ ॥3॥

ನಲಂಗಿಡ ವಾಡಿ ಪೆಣ್ಣೆ (ತಮಿಳು) **ರಾಗ:ಅಭೇರಿ**

ನಲಂಗಿಡ ವಾಡಿ ಪೆಣ್ಣೆ ನಾಗರೀಕಮಾನ ಕಣ್ಣೇ। ನಳಿನ ಮೀನಲೋಚನೀಯೆ ಕೇಳಡಿ। ಇಪ್ಪೊನಾಲುಮಣಿ ಆಚ್ಚುದಡಿ ಪಾರಡಿ॥1॥ ಮುತ್ತಳ್ಳೆಡ ಬಂಗಲಾವಿಲ್ ಮೂನ್ರಾವದು ಮಾಡಿಮೇಲೆ। ಮೋಹನಾಂಗಿ ನಲಗಿಂಡುರೇನ್ ಪಾರಡಿ॥12॥ ಆಫ್ರಿಕಾ ಇಂಡಿಯ ಲಂಡನ್ ಎಂಗೆಂಗಿಲುಂ ತೇಡಿವಂದೇನ್ ಉನ್ನೈಪೋಲೆ ಪೆಣ್ಮಣಿಯೇ ಕಾಣೇಂಡೀ ಎನ್ನೈ ಕಾದಲಾಯ್ ಕಣ್‌ಪಾರ ಮೋಹಿನಿ॥3॥

ನಲಂಗಿಡುರಾಳ್ ಮೀನಲೋಚನಿ (ತಮಿಳು) **ರಾಗ: ಆನಂದಭೈರವಿ**

ನಲಂಗಿಡುರಾಳ್ ಮೀನಲೋಚನಿ ತಾದರುಡಲ್ ಕೂಡಿ । ನಾರದರುಂ ವಂದು ಗಾನಂಗಳೈ ಪಾಡ। ನಾನಾವಿಧ ತಾಳಂಗಳ್ ಪೋಡ॥ಪ॥ ಸ್ವರ್ಣ ತಾಂಬಾಳತ್ತೈ ಜೋತಿಯಾಯ್ ಎಡುತ್ತು। ಸುಂದರೇಶರ್ ಕೈಯಿಲ್ ಕುಡುತ್ತು। ಭೂಪತಿ ಪಾದತ್ತಿಲ್ ವಿಳಂದು। ಪುಷ್ಪಮಾಲೈಗಳೈ ಅನ್ಬುಡನ್ ಶಾತ್ತಿ ॥1॥ ಸ್ವರ್ಣಪನ್ನೀರ್ ಶೊಂಬೈ ಜ್ಯೋತಿಯಾಯ್ ಎಡುತ್ತಾಳ್। ಸುಂದರೇಶರ್ ಮೇಲ್ ತೆಳಿತ್ತಾಳ್। ವಾಸನೈ ಗಂಧಂ ಪರಿಮಳಂ ಪೂಸಿನಾಳ್। ವಣಂಗಿ ಚಾಮರಂ ವೀಸಿನಾಳ್ ॥2॥

ನೀರಜದಳ ನಯನೀ ನಿತ್ಯ (ತಮಿಳು) **ರಾಗ:ಕಾಂಬೋಧಿ**

ನೀರಜದಳ ನಯನೀ ನಿತ್ಯ ಮಂಗಳ ಕಲ್ಯಾಣಿ॥ಪ॥ ಪಾರ್ದನ್ನಿಲ್ ವಂದುದಿತ್ತ ಪತ್ತಿನಿಯೆ ಉತ್ತಮಿಯೆ॥ಅ.ಪ॥ ಕಾರಣಿಯೆ ಪೂರಣಿಯೆ ಕಣ್ಮಣಿಯೆ ನಾನುನಕ್ಕು। ಕಾದಲಾಯ್ ನಲಂಗಿಡುರೇಂ ಪಾದಮಲರ್ ತರವೇಂಡುಂ॥1॥ ಸಂದಣ ಪೂಸಿನಿನ್ರೇನ್ ಜಾನಕಿ ಉನಕ್ಕಳಗಾಯ್ ಸಂಪಂಗಿ ಮಲ್ಲಿಗೆ ಮಲರ್ ಸೂಟ್ಟುರೇನ್। ಅನ್ನನಡೈ ಪಿನ್ನಲಿಡೈ

ಸೊನ್ನ ಪೋದೆ ವಂದಿಡುವಾಯ್॥2॥

ಶ್ರೀಕೃಷ್ಣಪಾದಮೆ ತಂದರುಳ್ (ತಮಿಳು) **ರಾಗ:ಅಮೃತವರ್ಷಿಣಿ**

ಶ್ರೀಕೃಷ್ಣಪಾದಮೆ ತಂದರುಳ್ ಸೈಗುವೀರ್। ಸೀರಾಯ್ ನಲಂಗಿಡುವೇಂ॥ಪ॥ ನೀರಜಭವಾರ್ಚಿತ ನಿರುಪಮ ಸುಂದರ। ನೇರ್ತಿಯಾಯ್ ನಲಂಗಿಡುರೇನ್। ನಿತ್ಯ ಕಲ್ಯಾಣನೇ॥1॥ ಪಚ್ಚೈಮಂಜುಳ್ ಪೂಸುವೇಂ। ಪಾಂಗುಡನ್ ನಾನುಮೇ। ಕಚ್ಚಿದ ಮಾಗವೇ ಕಾದಲಾಲ್ ನಲಂಗಿಡುರೇನು॥2॥

ಒನ್ನಾಮಲ್ಯೆ ತೋಟತ್ತಿಲೆ (ತಮಿಳು-ಕುಮ್ಮಿಹೊಡೆಯುವುದು) **ರಾಗ:ಶಂಕರಾಭರಣನೋಟ್ಸ್**

ಒನ್ನಾಮಲ್ಯೆ ತೋಟತ್ತಿಲೆ ಪೂಪರಿಕ್ಯರ ಗೋವಿಂದ ಪೂಪರಿಕ್ಕಿರ ಸ್ವಾಮಿ। ಪೂಪರಿಕ್ಕಿರ ರಾಜಾವೆ ಒರು ಕೂಡೈ ಪೂವು ತರೇನ್ ಓಡಿ ವಾ ಗೋವಿಂದ॥1॥ ರಂಡಾಮಲ್ಯೆ ತೋಟತ್ತಿಲೆ ಪೂಪರಿಕ್ಕಿರ ಗೋವಿಂದ। ರಂಡುಕೂಡೈ ಪೂವು ತರೇನ್ ಓಡಿ ವಾ ಗೋವಿಂದ॥2॥ ಮೂನಾಮಲ್ಯೆ ತೋಟತ್ತಿಲೆ ಪೂಪರಿಕ್ಕಿರ ಗೋವಿಂದ। ಮೂನು ಕೂಡೈ ಪೂವು ತರೇನ್ ಓಡಿ ವಾ ಗೋವಿಂದ॥3॥ ನಾಲಾಂಮಲ್ಯೆ ತೋಟತ್ತಿಲೆ ಪೂಪರಿಕ್ಕಿರ ಗೋವಿಂದ॥ ನಾಲು ಕೂಡೈ ಪೂವು ತರೇನ್ ಓಡಿ ವಾ ಗೋವಿಂದ॥4॥ ಐಂದಾಂಮಲ್ಯೆ ತೋಟ್ಟತ್ತಿಲೆ ಪೂಪರಿಕ್ಕಿರ ಗೋವಿಂದ। ಐಂದು ಕೂಡೈ ಪೂವು ತರೇನ್ ಓಡಿ ವಾ ಗೋವಿಂದ॥5॥ ಆರಾಂ ಮಲ್ಯೆ ತೊಟ್ಟತ್ತಿಲೆ ಪೂಪರಿಕ್ಕಿರ ಗೋವಿಂದ। ಆರು ಕೂಡೈ ಪೂವು ತರೇನ್ ಓಡಿ ವಾ ಗೋವಿಂದ॥6॥ ಏಳಾಂ ಮಲ್ಯೆ ತೋಟ್ಟತ್ತಿಲೆ ಪೂಪರಿಕ್ಕಿರ ಗೋವಿಂದ। ಏಳು ಕೂಡೈ ಪೂವು ತರೇನ್ ಓಡಿ ವಾ ಗೋವಿಂದ॥7॥ (2ನೇ ಕಾಲದಲ್ಲಿ ಪೂರ್ತಿ ಹಾಡುವುದು॥)

ಸೋಬಲಕ್ಕಿ

ಉಡಿಯ ತುಂಬಿರೆ ಬೇಗ **ರಾಗ:ರವಿಚಂದ್ರಿಕೆ**

ಉಡಿಯ ತುಂಬಿರೆ ಬೇಗ ಉಡುರಾಜ ವದನೆಗೆ॥ಪ॥ ಮಡದಿ ಮಹಲಕ್ಷ್ಮಿಗೆ। ಬಿಡಿದ್ರಾಕ್ಷಿ, ಕಲ್ಲುಸಕ್ಕರೆ ಖರ್ಜೂರವ ಕಡಲೆಕೊಬ್ಬರಿ ಬೆಲ್ಲ। ಕಮಲನಯನೆಗೆ॥1॥ ಕಿತ್ತಳೆ ದ್ರಾಕ್ಷಿ ಅಂಜೂರ ನೇರಳೆಫಲ ಕಸ್ತೂರಿ ಮಾಗಿಮಾವು। ಉತ್ತಮ ಹಲಸುಮಾದಳ ಚಕೋತ್ತವು ಅರ್ಥಿಯಿಂದಲಿ ಮುತ್ತೈದೆಯರೆಲ್ಲರು ಕೂಡಿ॥2॥ ರಂಗನ್ನ ಮಡದಿ ರುಕ್ಮಿಣಿ ದೇವಿಗೆ. ಒಳ್ಳೆ ಬಂಗಾರದ ದಬರಿಲಿ। ಮಂಗಳಕರ ನಾರಿಕೇಳಿ ಕದಳಿ ಫಲ। ಅಂಗನೆ ಸೀತೆಗೆ ಅಂಗನೆ ಮಣಿಯರು॥3॥ ಕರಿಮಣಿ ಕಾಡಿಗೆ ಬಿಚ್ಚೋಲೆ ಕನ್ನಡಿ ಕರಿಬಳೆ ಬಾಚಣಿಗೆ। ಗರುಡಗಮನ ನಾಗೇಶ ಶಯನನ ಸತಿಗೆ ಹರುಷದಿ ಉಡಿ ತುಂಬಿ ವರಗಳ ಬೇಡಿರೆ॥4॥

ಉಡಿಯನೆ ತುಂಬಿರೆ ಮಡದಿಯರೆಲ್ಲರೂ **ರಾಗ: ಮಾಂಡ್**

ಉಡಿಯನೆ ತುಂಬಿರೆ ಮಡದಿಯರೆಲ್ಲರೂ। ಉಡುಪತಿ ವದನೆಗೆ ಸಡಗರದಿಂದಲಿ॥ಪ॥ ದಾಳಿಂಬೆ ನೇರಳೆಯು ಕದಳಿ ಖರ್ಜೂರದ ಹಣ್ಣು ಮನೋಹರದಂಜುರಿ ಹಣ್ಣು ಮುದದಿ ತಾಂಬೂಲ ಸಹಿತ॥1॥ ಅರಿಸಿನ ಕೊನೆಗಳು ಕೊರೆದ ಕೊಬ್ಬರಿ ಗಿಟಕು ಸೆರಗಂಚಿನ ಕುಪ್ಪಸ ಮುದದಿ ತಾಂಬೂಲ ಸಹಿತ॥2॥ ಮಾವು ಮಾದಳದ ಹಣ್ಣು। ಬಿಳಿಯ ಚಕ್ಕೋತದ್ಹಣ್ಣು ತೆಂಗು ರಸಪುರಿ ಕೆಂಪಿನ ಸೇಬಿನ ಹಣ್ಣು ಸಹಿತ॥3॥

ಕಮಲಾಕ್ಷಿ ಕೋಮಲಾಂಗಿಗೀಗ **ರಾಗ: ಮಾಡ್-ಆದಿತಾಳ**

ಕಮಲಾಕ್ಷಿ ಕೋಮಲಾಂಗಿಗೀಗ ವಿಮಲ ಮುಖಿಯರು। ಫಲಭಕ್ಷ್ಯ ವಸ್ತುಗಳಿಂದ ಮಡಿಲ ತುಂಬಿರೆ॥ಪ॥ ಜಂಬು ನೇರಳೆಯ ಫಲ ತೆಂಗಿನಾ ಫಲ ರಂಗನಾ ರಾಣಿಗೀಗ ಮಡಿಲ (ಉಡಿಯ)ತುಂಬಿರೆ। ಮಾವು ಮಾದಳದ ಫಲ ಬಾಳೆಯ ಫಲ। ಮಾಧವನಾ ಮಡದಿಗೀಗ ಉಡಿಯ ತುಂಬಿರೆ ಮಾಧವನಾ ಮಡದಿಗೀಗ ಮಡಿಲ ತುಂಬಿರೆ॥1॥ ರಸದ ದ್ರಾಕ್ಷಿ

ಕೊಬ್ಬರಿ ಗಿಟಕು ಅರಿಶಿನ ಕೊನೆಗಳು ಕಿತ್ತಲೆ ಹಣ್ಣು ಚಕ್ಕೋತ ಸಹಿತ ಮಡಿಲ ತುಂಬಿರೆ। ಅಂದವಾದ ಸೀರೆಕುಬುಸ ಪುಷ್ಪ ಪರಿಪರಿ ವಸ್ತುವು। ಅಕ್ಕಿ ಬೆಲ್ಲ ವೀಳ್ಯ ಸಹಿತ ಮಡಿಲ ತುಂಬಿರೆ ಅಕ್ಕಿ ಬೆಲ್ಲ ವೀಳ್ಯ ಸಹಿತ ಉಡಿಯ ತುಂಬಿರೆ॥2॥

ಕರಿಮುಖನ ಗಣಪನ ಚರಣಕ್ಕೆ **ರಾಗ: ಆನಂದಭೈರವಿ**

ಕರಿಮುಖನ ಗಣಪನ ಚರಣಕ್ಕೆ ಎರಗಿ। ವರಕವಿಗಳ ಪಾದಾ ಪದುಮಕ್ಕೆ ವಂದಿಸಿ। ಹರನರಸಿಗೆ ಮಡಿಲ ತುಂಬುವ ಪದವಾ। ಹರುಷದಲಿ ಕೇಳೀ ಜನರೆಲ್ಲಾ॥ಪ॥ ಶಶಿಮುಖಿ ಪಾರ್ವತಿ ಹಸುರು ಸೀರೆಯಲಿ ಎಸೆದು ನಾನಾ ಬಂಧುಗಳೆಲ್ಲ ಕೂಡಿ। ಹೊಸ ಪಟ್ಟೆನ್ನಾಸಿ ಜ್ಯೋತಿಗಳ ಬೆಳಗಿರಿಸಿ ದೆಸೆಗೆ। ಪ್ರಜ್ವಲಿಸುವ ಆಭರಣವ ತೊಡಿಸಿ। ಕುಶಲದೀ ತುಂಬೀದಾರೇ ಮಡೀಲನೂ॥1॥ ಕದಳಿ ದಾಡಿಂಬ ಜಂಬೀರ ದ್ರಾಕ್ಷಿಗಳು। ನವ ಖಂಡ ಸಕ್ಕರೆ ನೇರಳೇ ಫಲವು। ನವ ಯೌವನೆಯರೆಲ್ಲ ಇರಿಸಿ ಸಂಭ್ರಮದಿ। ನವವಿಧ ಭಕ್ತೀಲಿ ಪಾರ್ವತೀ ದೇವಿಗೆ। ವಿನಯದಿ ತುಂಬಿದಾರೇ ಮಡಿಲನೂ॥2॥ ಚಕ್ಕುಲಿ ಕರಂಜಿಗೆ ಕಾಯಿ ತೇಂಗೊಳಲು। ಮುಚ್ಚೋರೆ ಮನೋಹರ ದುಂಡೆಗಳು ಕೊಬ್ಬರಿಯುಂಡೆ। ಎಳ್ಳುಂಡೆ ಕಡಲುಂಡೆ ಕುಟ್ಟಿದ ಅವಲಕ್ಕಿ ಉಂಡೆ। ಅರಳುಂಡೆಗಳ ಮಿತ್ರೆಗೆ ತುಂಬ್ಯಾರು (ತುಂಬಿದಾರು) ಮಡೀಲಾಗು॥3॥ ಕುಂಬಳ ಬೀಜವ ಸುಲಿದು ಉಂಡೆಗಳು ಸಂಭ್ರಮದಿ। ನೆಲಗಡಲೆ ಉಂಡೆಗಳು ಚೆನ್ನಾಗಿ ಗೋಪುರವಮಾಡಿ। ಗಿಣಿ ಇಟ್ಟು ಸುಂದರಿ ಪಾರ್ವತಿಗೆ ಅಂಗನೇಯರು। ಬೇಗ ತಂದೂ ತುಂಬಿದಾರೇ ಮಡಿಲಾನು॥4॥ ಎಳ್ಹೆಸರು ಬೆರಸಿದ ಹುರಿಗಾಳೂ ಪುಳ್ಳಂಗಾಯುಂಡೆ ಪರಿಪರಿ ಫಲವೂ। ಬಗೆಬಗೆ ಫಲ ಪುಷ್ಪಂಗಳ ತರಿಸಿ ಹರಸಿ। ಕುಂಕಮವಿಟ್ಟು ಪಾರ್ವತಿದೇವಿಗೆ ಹರುಷದಿ ತುಂಬಿದಾರೇ ಮಡಿಲಾನು॥5॥

ಚಾರು ಚಂದ್ರಮುಖಿಯರು **ರಾಗ: ಮಾಂಡ್**

ಚಾರು ಚಂದ್ರ ಮುಖಿಯರು ವಾರಿಜಾಕ್ಷಿಗೆ। ಸೇರಿದ ಫಲ ಪುಷ್ಪ ಸಹಿತ ಮಡಿಲ ತುಂಬಿರೆ॥ಪ॥ ಮೊಲ್ಲೆ ಮಲ್ಲಿಗೆ ಜಾಜಿ ಕೆಂಡಸಂಪಿಗೆ। ಮುತ್ತೈದೆಯರೆಲ್ಲ ಸೇರಿ ಮಡಿಲ ತುಂಬಿರೆ॥1॥ ಕದಳಿ ಖರ್ಜೂರ ನಿಂಬೆ ನಾರಿಕೇಳವು। ಪಲಸು ದಾಳಿಂಬೆ ಸಹಿತ ಮಡಿಲ ತುಂಬಿರೆ ಚಾರು ಚಂದ್ರಮುಖಿಯರು॥2॥ ಅಂದವಾದ ನೇರಳೆ ಕಮಲ ಫಲಂಗಳು। ಚಂದದಿಂದ ಕಿತ್ತಲೆಯ ಹಲಸು ಜಂಬೀರ। ಚಾರು ಚಂದ್ರಮುಖಿಯರು॥3॥

ತುಂಬಿದರೀಗಲೆ ಸಂಭ್ರಮದಿಂದಲಿ **ರಾಗ:ಬೇಹಾಗ್**

ತುಂಬಿದರೀಗಲೆ ಸಂಭ್ರಮದಿಂದಲಿ। ಅಂಬುಜನೇತ್ರೆಗೆ ಆನಂದದಲಿ॥ಪ॥ ಕಂಬುಕಂಠಿಯರೆಲ್ಲರು ಕೂಡುತಲಿ। ಜಂಬೂದಾಳಿಂಬ್ರಗಳನು ತರಿಸುತಲಿ॥ಕುಂಬಿಣಿ ಸತಿಯರು ಹಾಡುತಲಿ। ತುಂಬಿದರುಡಿಯನು ಚೆಂದದಲಿ॥1॥ ಮುತ್ತಿನ ತಟ್ಟೆಯ ಪಿಡಿಯುತಲಿ। ಉತ್ತಮ ಫಲಗಳ ಇರಿಸುತಲಿ। ಅರ್ತಿಯಿಂದಲಿ ಅಲಂಕರಿಸುತಲಿ। ಭಕ್ತರು ದೇವರ ಸ್ತುತಿಸುತಲಿ॥2॥

ತುಂಬಿದರುಡಿಯನು ಇಂದಿರ ದೇವಿಗೆ **ರಾಗ:ಸಾರಂಗ**

ತುಂಬಿದರುಡಿಯನು ಇಂದ್ರರ ದೇವಿಗೆ। ಅಂಬುಜ ವದನೆಯರು॥ಪ॥ ಸತಿಯರೆಲ್ಲರೂ ಒಂದಾಗಿ ಕೂಡುತಲಿ। ಶಶಿಬಿಂಬ ವದನೆಗೆ ಸಂಭ್ರಮದೀ॥1॥ ಕದಳಿಯು ಕಿತ್ತಳೆ ದ್ರಾಕ್ಷಿಯು ನೇರಳೆ। ತೆಂಗಿನ ಫಲಗಳ ತಂದಿರಿಸಿ॥2॥ ಸದತಿಯರೆಲ್ಲರು ಸಡಗರದಿಂದಲಿ। ಮದಗಜಗಮನೆಗೆ ಆದರದೀ॥3॥ ಮಾರಜನನಿಗೆ ಮೋಹಿನಿ ರೂಪೆಗೆ। ಮಾನುನಿ ಮಣಿಯರು ಮೋದದಲೀ॥4॥ ಸಾಮಜ ಗಮನೆಗೆ ಶ್ಯಾಮಲ ವರ್ಣೆಗೆ। ಕಾಮಿನಿ ಮಣಿಯರು ಪ್ರೇಮದಲೀ॥5॥

ನೀರೇಯರೆಲ್ಲರು ಸೇರುತ್ತ ಬೇಗನೆ **ರಾಗ: ಶಂಕರಾಭರಣ**

ನೀರೇಯರೆಲ್ಲರು ಸೇರುತ್ತ ಬೇಗನೆ ವಾರಿಜಮುಖಿ ಮಡಿಲತುಂಬಿದರು। ಅರಿಶಿನ ಕುಂಕುಮ ಅರಳುಮಲ್ಲಿಗೆ ಜಾಜಿ। ಸುರಗಿ ಸೇವಂತಿಗೆ ಅಕ್ಷತೆ ತಳೆದ್ದರಸುತಲಿ।। ದಾಳಿಂಬ ದ್ರಾಕ್ಷಿಯು ಜಂಬೂನೇರಳೆಫಲ। ಕದಳಿ ಖರ್ಜೂರ ನಿಂಬೆ ರಸಬಾಳೆ। ಹಣ್ಣಿನಿಂದ ಈಗಲೇ। ಕಂಚಿ ಸವರನ್ ಸೀರೆಯಿಂ ಸರಿಗೆ ಸಿಲ್ಕಿನ ಕುಬುಸ ಹೆರೆದ ಕೊಬ್ಬರಿ ಇಟ್ಟು। ಕಸಿಯ ಮಾವಿನಣ್ಣಿನಿಂದ ಈಗಲೇ।। ಭಾಮೆ ವರಲಕ್ಷ್ಮಿ ದೇವಿಗೆ। ಬಂಧು ಬಳಗ ಎಲ್ಲರು ಬೊಂಬಾಯ್ ಬನಾರಸ್ ಕಾಶ್ಮೀರ ದೇಶದ ಕಣಗಾಳ ತಂದು ಮಡಿ ತುಂಬಿದರು।।

ಬಂದು ಕುಳಿತಿಹಳು ಶ್ರೀ ಮಹಾಲಕ್ಷ್ಮೀ **ರಾಗ:ಕಾಂಭೋಜಿ- ಆದಿತಾಳ**

ಬಂದು ಕುಳಿತಿಹಳು ಶ್ರೀ ಮಹಾಲಕ್ಷ್ಮೀ। ಪೀತಾಂಬರ ಉಟ್ಟು ಪಟ್ಟೆ ಕುಪ್ಪಸವ ತೊಟ್ಟು ।।ಪ।। ಹರಿವಾಣದಿ ಅಕ್ಕಿ ಫಲತುಂಬಿ ಮಂಗಳ ದ್ರವ್ಯಗಳಿಂದ ಸೀರೆ ಕುಪ್ಪಸ ಎಲೆಅಡಿಕೆ ಬೊಂಬೆಗಳನಿಟ್ಟು। ಮುತ್ತೈದೇರು ಮಹಾಲಕ್ಷ್ಮೀ ಸೆರಗನ್ನೇ ಪಿಡಿದು। ತುಂಬಿದ ಹರಿವಾಣ ಪಿಡಿದು। ಉಡಿಯನು ತುಂಬುವರು।।1।। ಐದು ಜನ ಮುತ್ತೈದೇರು ಮಹಾಲಕ್ಷ್ಮಿಗುಡಿತುಂಬಿ ಬೆಳ್ಳಿಯ ತಟ್ಟೆಯಲಿ ಆರುತಿಯನ್ನೇ ತಂದು। ಹಾಡುತ ಪಾಡುತ ಆರುತಿಯ ಮಾಡುತ। ಆಶೀರ್ವಾದವ ಮಾಡಿ ಹರಸುತಲಿರುವರು।।2।।

ಮಡಿಲ ತುಂಬುವೆ ಶ್ರೀಗೌರಿ **ರಾಗ: ಕಲಾವತಿ-ಆದಿತಾಳ**

ಮಡಿಲ ತುಂಬುವೆ ಶ್ರೀಗೌರಿ ದೇವಿಗೆ। ನುಡಿಸುವೆ ಗೀತೆಯ ಸುಧೆಯ ಮಲ್ಲಿಗೆ।।ಪ।। ಸಾವಿರ ಹೊನ್ನು ತವರಿನ ಈ ಕೊಡುಗೆ। ಅಕ್ಷಯವಾಗಲಿ ಬಾಳಿನ ದಾರಿಗೆ। ಹುಟ್ಟಿದ ಮನೆಗೂ ಮೆಟ್ಟಿದ ಮನೆಗೂ ಕೀರ್ತಿಯ ತಂದು ಬಾಳಮ್ಮ।।1।। ಪತಿಗೆ ನೆರಳಾಗು ಇತರರಿಗೆ ನೆರವಾಗು। ಸುತರಿಗೆ ಬೆಳಕಾಗು ನೀ ಕೇಳಮ್ಮ। ಗುರುಹಿರಿಯರಲಿ ಶ್ರೀಹರಿ ಪದದಲಿ। ಭಯಭಕುತಿಯಲಿ ನಡೆಯಮ್ಮ।।2।। ಅಕ್ಕಿ ಕೊಬ್ಬರಿ ಬೆಲ್ಲದ ಸವಿಯೊಳು। ದಯೆ ಕ್ಷಮೆ ಪ್ರೇಮದ ಸಿರಿ ನಿನಗಮ್ಮ। ಎನ್ನ ಶುಭ ಹಾರೈಕೆ ಎಂದೆಂದಿಗಿರಲಮ್ಮ। ಈ ಅನುಬಂಧ ಸ್ಥಿರವಿರಲಮ್ಮ।।3।। ಅರಿಶಿನ ಕುಂಕುಮ ಶೋಭಿತಳಾಗಿ। ಸುಖವೆ ಬರಲಿ ದುಃಖವೆ ಬರಲಿ। ಎಂದೆಂದಿಗಾನಂದ ನಿನಗಿರಲಮ್ಮ। ದೀರ್ಘಸುಮಂಗಲಿಯಾಗಿ ಬಾಳಮ್ಮ।।4।।

ಮಡಿಲನು ತುಂಬಿದರು **ರಾಗ: ಕಾಮಾಚ್, ಆದಿತಾಳ**

ಮಡಿಲನು ತುಂಬಿದರು। ಮಡದಿ ರನ್ನೆಗೆ ಬೇಗ।।ಪ।। ಅರಿಶಿನ ಕೊನೆಗಳು ಹೆರೆದ ಕೊಬ್ಬರಿ ಗಿಟಕು। ಅಂದವಾದ ತಟ್ಟೆಯಲ್ಲಿ ತೆಂಗಿನ ಫಲವ ನಿರಿಸಿ।।1।। ಬಿಳಿಯ ಚಕ್ಕೋತದಹಣ್ಣು। ಬೆಳೆದ ಮಾದಳದ್ದಣ್ಣು। ಕಳಿತ ಕದಳಿ ಹಣ್ಣು। ಎಳೆಯ ವೀಳ್ಯವ ನಿರಿಸಿ।।2।। ಹಸಿ ಹಲಸಿನ ಹಣ್ಣು। ರಸದ ದ್ರಾಕ್ಷಿಯ ಹಣ್ಣು। ರಸಪುರಿ ಮಾವಿನ್ಹಣ್ಣು। ಕಸಿಯ ಸೀಬೆಯ ಹಣ್ಣು।।3।।

ಬುದ್ಧಿವಾದ

ಅತ್ತೆಮಾವರ ಪಾದ **ರಾಗ: ಸಾವೇರಿ**

ಅತ್ತೆಮಾವರ ಪಾದ ತಂದೆ ತಾಯರ ಪಾದ। ಮತ್ತೆ ಗಂಡನ ಶ್ರೀಪಾದ ನೆನದಾರೆ ನಿನ್ನ ಬೆನ್ನ ಹಿಂದಿದೆ ಕೈಲಾಸ।। ನೆರೆಮನೆ ಸಿರಿದೇವಿ ನೀನಾಗೆ ನನ ಮಗಳೆ। ಮನೆಯೊಳು ಬೇಧ ಬಗಿಬೇಡ। ಕಂದವ್ವ ತುಂಬಿದ ಮನೆಯ ಒಡಿಬೇಡ।।1।। ಬಾಳುವೆ ಮಾಡಿದರೆ ಬಾರವ್ವ ಅಂದಾರು। ಬಾಳುವೆಗೆಟ್ಟು ಮತಿಗೆಟ್ಟು ಬಾಳಿದರೆ ಹಡೆದವರ ಕುಲಕೆ ಹಗೆಯಾದೆ।।2।। ಮಾತ್ನಾರ್ತಿ ಮಗಳಲ್ಲ ತಾಟ್ಗಿತ್ತಿ ಸೊಸೆಯಲ್ಲ। ತೂಪರದ ಚಿಕ್ಕೆ ಒಲೆಗಲ್ಲ। ಎಳೆಗರು ಎತ್ತಲ್ಲ ದಳವಾಯಿ ದೊರೆಯಲ್ಲ ಮನೆಗೆ ಬಂದಳಿಯ ಮಗನಲ್ಲ। ತೌರೀಗೆ ಮಾತ ತಂದೋಳು ಮಗಳಲ್ಲ।।3।। ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು। ಹೊತ್ತಾಗಿ ಇಕ್ಕಿದರು ಉಣಬೇಕು। ತೌರೀಗೆ ಒಳ್ಳೆಯ ಹೆಸರ ತರಬೇಕು।।4।। ಆಲಕ್ಕೆ ಹೂವಿಲ್ಲ ಸಾಲಕ್ಕೆ

ಕೊನೆಯಿಲ್ಲ। ಜಾಲೀಯ ಮರವು ನೆರಳಲ್ಲ। ಹೆಣ್ಣಿಗೆ ತಾಯಿಯ ಮನೆಯು ಸ್ಥಿರವಲ್ಲ।।5।। ಕನ್ನಡಿಯು ಕೈತಪ್ಪಿ ಹನ್ನೆರಡು ಚೂರಾಗಿ ಹೆಣ್ಣಿನ ಮನಸು ಎರಡಾಗಿ। ದಾಳಿಂಬೆ ಹಣ್ಣಾದರೇನು ಸುಖವಿಲ್ಲ।।6।। ಅತ್ತೆಮಾವರಿಗಂಜಿ ಸುತ್ತೇಳು ನೆರೆಗಂಜಿ ಮತ್ತೆ ಆಳುವ ದೊರೆಗಂಜಿ ಅತ್ತೆ ಮನೆಯಾಗೆ ಬಾಳಮ್ಮ ।।7।।

ಕಳವಳ ಪಡಬ್ಯಾಡ ಮಗಳೆ **ರಾಗ: ಪುನ್ನಾಗವರಾಳಿ**

ಕಳವಳ ಪಡಬ್ಯಾಡ ಮಗಳೆ।।ಪ।। ಹದಿನಾರು ವರುಷ ನಾನಿನ್ನ ಸಲಹಿದೆ ಮುದದಿ ಪೋಗಿ ಬಾ ಗಂಡನ ಮನೆಗೆ ಬಿದಿರಿನಂತಿರುವ ಕಬ್ಬಿನ ಸಿಪ್ಪೆ ಕಠಿಣವಹುದು ರಸ ಸಿಹಿಮಗಳೆ।।1।। ಬರಿಯ ತಲೆಯ ಮೇಲೆ ತಪ್ಪಲೆ ಹೊತ್ತು ನೀರಿಗೆ ಹೋಗಿ ನೀ ನುರಿತಿಲ್ಲ। ನೀರಿನ ತಪ್ಪಲೆಹೊತ್ತು ತಿರುಗಿ ನೋಡದಿರು ಜಾರಿಉಳುಕೀತು ನಿನ್ನಕುತ್ತಿಗೆ।।2। ಅಟ್ಟುಂಡು ಒಲೆಮುಂದೆ ಮಾಡಿ ನೋಡಿಲ್ಲ ಸುಟ್ಟೀತು ಬೆಂಕಿ ಎಲೆಮಗಳೇ। ಸಿಟ್ಟುಮಾಡಬ್ಯಾಡ ಕೆಟ್ಟೀತು ಅಡಿಗೆ ಬಲು ಜೋಕೆ ಮಗಳೆ ಜೋಕೆ।।3।। ಸಂಜೆಗತ್ತಲಲ್ಲಿ ಮನೆ ಬಿಡಬ್ಯಾಡ ಕೆಂಜೇಳು ಅಡಗೈತೆ ಹೊಸಲಾಡಿ। ಎಡವೀಯ ಜೋಕೆ ಮನೆ ಹೊಸಿಲ।।4।। ಜರಿಬೇಡ ನಾವ್ ಬರಲಿಲ್ಲವೆಂದು ದೊರೆಯಂ ತಿರುವನು ನನ್ನ ಅಳಿಯ। ನಿನ್ನ ಗಂಡನ ಕೂಡಿ ಮೆರೆದು ಬಾ ಮನಬಂದಾಗ।।5।। ಹರಸಿ ಕಳುಹುವೆವು ಹೋಗಿ ಬಾ ಮಗಳೆ ಹರಿಸಿದ ತೌರ ಮರಿಬೇಡ। ಹರುಷದಿ ಬಾಳಾ ತೋರಿ ಬಾ ಮಗಳೆ।।6।।

ಜಾಣೆ ಪೆಣ್ಮಣಿ ಕುಲನಾರಿ ಕಣ್ಮಣಿ **ರಾಗ: ದೇಶ್**

ಜಾಣೆ ಪೆಣ್ಮಣಿ ಕುಲನಾರಿ ಕಣ್ಮಣಿ। ತಾಯ್ನುಡಿಯ ಜೇನುಸವಿದು ಬದುಕುವಳ್ಯಾರೋ।।ಪ।। ಅವಳೆ... ಉದಯ ಕಾಲ ಕೊಂಬು ಕೋಳಿ ಕೂಗುವ ಮುನ್ನ। ಮೈ ಕೊಳೆಯ ತೊಳೆದು ಮಡಿಯನುಟ್ಟು ಬಾಳ್ವಳೆ ಹೆಣ್ಣು। ಓದು ಬರಹ ಕಲಿಯ ಬೇಕು ಶಾಲೆಗೆ ಹೋಗಿ। ಒಳ್ಳೆ ಘನತೆ ನಡತೆ ನೀತಿ ಪಾಠ ಕಲಿತವಳ್ಯಾರೋ।।1।। ತಂದೆತಾಯಿ ಹೇಳಿದಂತೆ ಕೇಳುತಲಿರುತಾ। ತಾ ಕೇಳುತಲಿರುತಾ ಮನೆಯ ಕೆಲಸ ಚೊಕ್ಕವಾಗಿ ಕಲಿತಿರಬೇಕು। ಸಂಪ್ರದಾಯ ನಡತೆಗಳ ಸದಾಚಾರದಿ। ನಿಜಲಜ್ಜೆಯಿಂದ ಶೀಲವರಿತು ನಡೆಯುವಳ್ಯಾರೋ।।2।। ತವರ ಹಿರಿಮೆ ಅತ್ತೆ ಎದುರು ಪೊಗಳಬಾರದು। ತನ್ನ ಗಂಡನೊಡನೆ ವ್ಯರ್ಥಕದನ ಮಾಡಬಾರದು। ಹೀನರೆಂದು ನೆರೆಹೊರೆಯ ತೆಗಳಬಾರದು। ಸಿರಿವಂತೆ ಎಂಬ ಗರ್ವವಿರದೆ ನಡೆವಳು ಯಾರೊ।।3।। ರಂಗವಲ್ಲಿ ಚಿತ್ರವಿಡಲು ಬಂದಿರ ಬೇಕು। ಧರ್ಮವಚನ ನೃತ್ಯ ಗಾನ ಕಲಿತಿರಬೇಕು। ಕಷ್ಟದಲ್ಲಿ ನಷ್ಟದಲ್ಲಿ ತಾಳ್ಮೆಯಿಂದಲಿ। ತನ್ನ ಪತಿಯೆ ಸಕಲವೆಂದು ನಂಬುವಳ್ಯಾರೊ।।4।।

ತಂಗಿಗೆ ಹೇಳಿದ ಕೃಷ್ಣ **ರಾಗ: ಕಾಂಬೋದಿ**

ತಂಗಿಗೆ ಹೇಳಿದ ಕೃಷ್ಣ ಚೆಂದದಿಂದಲಿ ಬುದ್ಧಿ।।ಪ।। ಅತ್ತೆಯ ಮನೆಯಲ್ಲಿ ಇರುವಂಥ ಸುದ್ದಿ।। ಅ.ಪ।। ಯಾರೇನು ಅಂದರೂ ಮೋರೆಯನು ತಿರುಹದಿರು। ಮೋರೆ ಮೇಲೆ ಎತ್ತಿ ಬಲ್ಲಳೆಂದೆಣಿಸಿ। ವಾರಿಗೆಯವರಾ ಕೂಡಿ ನೀರನ್ನು ತರುವಾಗ। ವಾರೆಗಣ್ಣಿನಲ್ಲಿ ನೋಟ ನೋಡದಿರು ಕಂಡ್ಯ।।1।। ಪರರ ಒಡವೆಯ ಕಂಡು ದುರುಳ ಮಾತಾಡದಿರು। ನೆರೆಹೊರೆಯವರಿಗೆ ನೀನು ತಲೆಬಾಗಿ ನಡೆಯೆ। ಪರರ ಮಾತುಗಳಿಂದ ದುರುಳಳೆಂದೆ ಎನಿಸಬೇಡ। ನೆರೆಹೊರೆಯವರ ಕಂಡು ನೀ ಬದುಕು ಮಾಡಮ್ಮ ।।2।। ಬಂಗಾರದ ಪೇಟೆಯೊಳು ಅಂಗಡಿಗೆ ಹೋಗದಿರು। ಅಂಗನೇರಿಗೆ ಮಾನಭಂಗಾಗಿ ನಡೆಯೆ। ಅಂಗನೇರಿಗೆ ನಿನ್ನಂತರಂಗವ ಹೇಳದಿರು। ಬಂಗಾರ ವಸ್ತುಗಳ ಮುಚ್ಚಿಕೊಳ್ಳಮ್ಮ ।।3।। ಹಾಕಿದ್ದು ನೀನುಂಡು ಬೇಕೆಂದು ಬೇಡದಿರು। ಸಾಕು ಸಾಕು ಎಂಬ ನಾಚಿಕೆಯ ಹಿಡಿಯೆ। ನಾಕು ಮಂದಿಯರೊಡನೆ ಕೋಕೆ ಮಾತಾಡದಿರು। ಲೋಕದೊಳಿವಳೊಬ್ಬ ಮೂಕಿಯೆಂದೆನಿಸೆ।।4।। ಇಷ್ಟರು ಅಂದರೂ ನಿಷ್ಠೂರವಾಡದಿರು। ಘಟ್ಟಿ ಮಾಡಮ್ಮ ನಿನ್ನ ಮನಸು। ಸೃಷ್ಟಿಯೊಳಗೆ ನಮ್ಮ ಪುರಂದರವಿಠಲನ್ನ। ಶ್ರೇಷ್ಠನಾದ ಕೃಷ್ಣನ್ನ ತಂಗಿಯೆಂದೆನಿಸೆ।।

ನನ್ನ ಕರುಳಿನ ಕುಡಿ ನೀನು — ರಾಗ: ಶಿವರಂಜನಿ

ನನ್ನ ಕರುಳಿನ ಕುಡಿ ನೀನು ಹಿಂಗೆ ಅಳಕಂತ ಕುಂತ್ಯಾಕೆ? ನಿನ್ನ ಕೈಯ ಹಿಡಿದೌನ ಮನೆಯನ್ನು ಸೇರಲ್ಯಾಕ॥ಪ॥ ಮಡಿಯಾಗ ಹುಟ್ಟಿದ ಬಳ್ಳಿ। ಮಡಿಯಾಗ ಬೆಳೆವುದೇನ। ಕುಡಿಬಿಟ್ಟು ಹೊರಗೆ ಬಂದು ಹೂ ಹಣ್ಣು ಕೊಡದು ಏನ। ಹಿಡಿ ಮನದಾಗ ನನ್ನವ್ವ ನಗುನಗುತಾ ನೀ ಹೋಗವ್ವ। ಎರಡು ದಿನಕವ್ವ ನಿನ್ನ ಗಂಡನ ಪಾಲವ್ವ॥1॥ ನಿನ್ನ ಗಂಡಾಗೆ ಇರುತಾರೆ ಚೆಂದ ಶ್ರೀಮಂತ ಗೆಳೆಯಾರು। ನಿನ್ನ ಚಲುವು ರೂಪ ನೋಡಿ। ಮೋಹಿಸಿ ಬಿಟ್ಟಾರ। ಗಟ್ಟಿ ಇರಲವ್ವ ನಿನ್ನ ಶೀಲ। ಗಂಡನೊಬ್ಬನಿಗೆ ಮೀಸಲಾ। ಹಿಂಗೆ ಬಾಳವ್ವ ನನ್ನ ಮಗಳೇ। ಹೆಚ್ಚು ಹೇಳ್ಯಾಕೆ ಏನಿಲ್ಲ॥2॥

ಪೋಗುವೆಯಾ ತಂಗಿ — ರಾಗ: ಸಿಂಧುಭೈರವಿ

ಪೋಗುವೆಯಾ ತಂಗಿ ಗಂಡನ ಮನೆಗೆ। ಪೋಗುವೆಯಾ ತಂಗೀ॥ಪ॥ ಮಾವನ ಮನೆಯಲಿ ಬೆಳಕನು ಬೀರಲು। ಮಾತೆಯ ಮನೆಯನು ಮರೆಯಮ್ಮಾ। ಅತ್ತೆ-ಮಾವರ ಸೇವೆಯ ಮಾಡುತ ಮುತ್ತೈದೆಯಾಗಿ ಬಾಳಮ್ಮ॥1॥ ಪಾಡಿ ಬಾಳನು ಹಸನು ಮಾಡುತ। ಕೂಡಿ ಬಾಳುವುದ ಕಲಿಯಮ್ಮ। ಮಾವನ ಮನೆತನ ಬೆಳಗುತ ನೀನು। ದೈವದೊಲುಮೆಯ ಬೇಡಮ್ಮ॥2॥ ಬಡತನದಿಂದ ಬಳಲದಿರಮ್ಮ। ಜಡತನವನ್ನು ತೊರೆಯಮ್ಮ। ಒಡೆಯನು ಕರೆವನು ಊರಿಗೆ ಪೋಗಲು। ನಡೆತಂಗಿ ನೀನು ರಥವೇರಿ॥3॥

ಬಲಗಾಲು ಮುಂದಾಗಿ ಪತಿಮನೆಗೆ

ಬಲಗಾಲು ಮುಂದಾಗಿ ಪತಿಮನೆಗೆ ನಡೆಮಗಳೇ। ಕುಲವೆರಡು ಒಂದಾಗಿ ಬದುಕಿ ಬಾಳಲಿಎನುತಾ। ಬೆಳೆದು ಬಾಳುವ ಮನೆಯು ಬೆಳೆದು ಬಾಳುವ ಮನೆಯು ಬೆಳಗಲೀ ರವಿಚಂದ್ರರಿರುವ ತನಕಾ॥1॥ ಒಬ್ಬಳೇ ಮಗಳಿವಳು। ನಮ್ಮ ಮನೆಯರಗಿಳಿಯು। ಅಬ್ಬರದ ನುಡಿಗಳಿಗೇ ಬೆದರುವಳು। ಸಜ್ಜನರೇ ಒಪ್ಪಿಸುವೆವೀ ಮಗಳ ಪ್ರೇಮದಲಿ ಪಾಲಿಸಿರಿ। ಅಬಭವ ಪಿತ। ನಮಗೇ ಕೊಡಲಿಸುಖ ಸೌಭಾಗ್ಯ॥2॥ ಜನನಿ ಜನಕರ ಸೇವೆ ಮಾಡಿ ಬಳಲಿದೆ ಮಗಳೇ। ಇನಿಯನನುಸರಿಸಿ ಸುಖಿಯಾಗು ತರಳೇ। ಮನೆತನದ ಗೌರವವ ಕಳೆಯದಂತಿರುತಾಯೇ। ಅನವರತ ಸಿರಿಪತಿಯ ನೆನೆಯುತಿರು ಮರೆಯದೆಯೇ॥3॥ ಹದಿಬದೆಯ ಧರ್ಮದಲಿ ಹಿರಿಯವಳುನೀನಾಗು। ಪದುಮನಾಭನ ದಯದಿ ಬಹುಪುತ್ರವತಿಯಾಗು। ಸುದತಿ ನಿನ್ನಯ ಸುತರು ಯಶವ ಗಳಿಸುವತನಕಾ। ಒದಗಿಸಲಿ ಸಹಕಾರಿ ಶೇಷದಾಯುಷ್ಯದಲಿ ನಿನಗೇ॥4॥ ಅತ್ತೆ ಮಾವರ ಸೇವೆ ಆಲಸದೇ ಮಾಡುತಿರು। ಅತ್ತಿಗೇ ಮೈದುನರ ಜೊತೆಗೂಡಿ ನಲಿದಾಡು। ಎತ್ತದಿರು ತೌರುಮನೆ ಹಿರಿಮೆಸಿರಿಮೆಗಳ ನಿನಿತೂ। ಒತ್ತಿ ಬಹ ತೊಡರುಗಳು ತೊಲಗಲೀ ನಿನಗಿನಿತೂ॥5॥ ಅಂಜಬೇಡೆಲೆ ಮಗಳೇ। ನಗುಮುಖವ ತೋರೆಮಗೇ। ಕಂಜನಾಭನು ಕಾಯ್ವ ಇದಕೆ ಸಂಶಯವಿಲ್ಲ। ನಂಜೆನಿಪ ಸುಖದುಃಖ ಸಮವೆಂದು ತಿಳಿ ಎನುತಾ। ನಂಜುಂಡ ನಾಯಕನು ಹರಸಿ ಬರೆದಿಹನಿದನೂ॥6॥

ಬಿಡಬೇಡ ಸದ್ಗುಣವ — ರಾಗ: ಕಲ್ಯಾಣಿ

ಬಿಡಬೇಡ ಸದ್ಗುಣವ ಬಾಳಿಗದು ಭೂಷಣವು। ಒಡವೆ ವಸ್ತ್ರಗಳೆಲ್ಲ ದೇಹ ಶೃಂಗಾರವಾದುದು ॥ಪ॥ ಸುಳ್ಳನಾಡಲು ಬೇಡ ಒಳ್ಳಿತನ ಬಿಡಬೇಡ। ಕಳ್ಳನೆನಿಸಲು ಬೇಡ ಯಾರಲ್ಲೂ ಹಗೆ ಬೇಡ। ಬಲ್ಲಿದವ ತಾನೆಂಬ ಹೆಮ್ಮೆಯೆಂದಿಗೂ ಬೇಡ। ಮಲ್ಲಿಗೆ ಹೂವಾಗು ಮಾಮರದ ಫಲವಾಗು॥1॥ ಬಿರುನುಡಿಯ ನುಡಿಬೇಡ ದೇವರೊಡವೆ ಕದಿಬೇಡ। ಮನವ ನೋಯಿಸಬೇಡ। ಮದ ಮತ್ಸರವು ಬೇಡ। ಹೆತ್ತಂಥ ತಾಯ್ತಂದೆ ಮನವ ನೋಯಿಸಬೇಡ। ಸ್ತ್ರೀಜನ್ಮ ಸಾರ್ಥಕದ ಚಿಂತನೆಯ ಬಿಡಬೇಡ॥2॥ ಸತ್ಯಧರ್ಮಗಳೆಂಬ ದೃಷ್ಟಿ ಕಣ್ಣೊಳಗಿರಲಿ। ಉತ್ತಮರ ಉಪದೇಶವಾಣಿ ಕಿವಿಯೊಳಗಿರಲಿ। ನಿತ್ಯದಲಿ ಸುವಿಚಾರ ಚಂದ್ರ ಮೂಡುತಲಿರಲಿ। ಜ್ಞಾನಜ್ಯೋತಿಯ ಬೆಳಕು ದಾರಿ ತೋರು ತಲಿರಲಿ ॥3॥

ಬುದ್ಧಿ ಮಾತು ಹೇಳಿದರೆ **ರಾಗ: ದೇಶ್, ಆದಿತಾಳ**

ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ। ಮಗಳೆ ಮನ ಶುದ್ಧಳಾಗಿ ಗಂಡನೊಡನೆ ಬಾಳ ಬೇಕಮ್ಮ।।ಪ।। ಅತ್ತೆಮಾವಗಂಜಿಕೊಂಡು ನಡೆಯಬೇಕಮ್ಮ ಮಗಳೆ। ಚಿತ್ತದೊಲ್ಲಭನ ಅಕ್ಕರೆಯನ್ನು ಪಡೆಯಬೇಕಮ್ಮಾ।। ಹೊತ್ತುಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ। ಮಗಳೇ। ಹತ್ತು ಮಂದಿ ಒಪ್ಪುವ ಹಾಗೆ ನುಡಿಯಬೇಕಮ್ಮ।।1।। ಕೊಟ್ಟು ಕೊಂಬುವ ನೆಂಟರೊಡನೆ ದ್ವೇಷ ಬೇಡಮ್ಮ। ಮಗಳೆ। ಅಟ್ಟು ಉಂಬುವ ಕಾಲದಲ್ಲಿ ಆಟ ಬೇಡಮ್ಮ। ಹಟ್ಟಿ ಬಾಗಿಲಲ್ಲಿ ಬಂದು ನಿಲ್ಲಬೇಡಮ್ಮ। ಮಗಳೆ। ಕಟ್ಟಿ ಆಳುವ ಗಂಡನೊಡನೆ ಸಿಟ್ಟು ಬೇಡಮ್ಮ।।2।। ನೆರೆಹೊರೆಯವರಿಗೆ ನ್ಯಾಯವನ್ನು ಹೇಳಬೇಡಮ್ಮ। ಮಗಳೆ। ಗರುವ ಕೋಪ ಮತ್ಸರವನು ಮಾಡಬೇಡಮ್ಮ। ಪರರ ನಿಂದಿಪ ಹೆಂಗಳೊಡನೆ ಸೇರಬೇಡಮ್ಮ। ಮಗಳೆ। ವರಪುರಂದರವಿಠಲನ ಸ್ಮರಣೆ ಮರೆಯಬೇಡಮ್ಮ।।3।।

ಹಣೆಗೆ ಕುಂಕುಮವಿಟ್ಟು ಕೈಯು **ರಾಗ:ಬಾಗೇಶ್ರೀ**

ಹಣೆಗೆ ಕುಂಕುಮವಿಟ್ಟು ಕೈಯು ನಡುಗುತಲಿತ್ತು। ಬೀಳುಕೊಂಡಳು ಅಮ್ಮ ನಿನ್ನ ಹೆತ್ತಮ್ಮ। ಪೋಗಿ ಬಾ ಎನ್ನಮ್ಮ ಪೋಗಿ ಬಾ ಚಿನ್ನಮ್ಮ ಬೆಳಗು ನೀ ಮನೆ ಎರಡು ಎಂದು ಹರಸುತ್ತ।।1।। ಗಂಡನಿಗೆ ನೀ ಎಂದು ಎದುರು ಹೇಳದಿರಮ್ಮ ಅತ್ತಿಗೆಗೆ ನಾದಿನಿಗೆ ಒತ್ತಾಗಿ ನೀ ಎಂದು। ಅತ್ತೆಯನು ಮಾವನನು ಸತ್ಕರಿಸು ನೀ ಚಿನ್ನ ಹೆತ್ತಮನೆ ಹೆಸರನ್ನು ಬೆಳಗು ನೀ ಎಂದು।।2।। ಹೆತ್ತವರ ಮುತ್ತು ನೀ ಹೊತ್ತು ಸಲಹಿದೆವಮ್ಮ। ಉತ್ತಮರ ಮಗು ನೀನು ಬಿತ್ತು ಸಿರಿ ಮುಗುಳ। ಅತ್ತತ್ತು ಕಣ್ಣೀರ ಹೃದಯದಾಳದಿ ಉಕ್ಕಿ ಹೆತ್ತವರ ಹೆಸರನ್ನು ಬೆಳಗು ನೀ ಎಂದು।।3।। ಹೊರಗೆ ಮಂಗಳ ವಾದ್ಯ ಒಳಗೆ ಮಳೆಕರೆದಿತ್ತು ಬಾನಿನಿಂದ ಭೂಮಿಎಡೆಗೆ ತೌರಿನಿಂದ ಅತ್ತೆ ಮನೆಗೆ। ಸೆರಗಿನಲಿ ಉಡಿಅಕ್ಕಿ ತಾಯಿ ಹರಸಿದ ಅಕ್ಕಿ। ಹೆತ್ತ ಮನೆ ಹೆಸರನ್ನು ಬೆಳಗು ನೀ ಎಂದು।।4।।

"ಮನೆತುಂಬಿಸಿ ಕೊಡುವುದು"

ಅರುಣ ಕಿರಣ ತರುಣ **ರಾಗ:ಹಂಸಧ್ವನಿ**

ಅರುಣ ಕಿರಣ ತರುಣ ಪಲ್ಲವಿ ಚರಣ ಚಂದ್ರಿಕೆ। ಚಾರು ಚಂಪಕಾಂಗಿ ಚತುರ ಸಾರಸಾಕ್ಷಿ ನಾರಿಮಣಿಯೆ ಬಾಗಿಲನ್ನು ತಗೆಯೆ ನೀನು ನಾಗವೇಣಿಯೆ।।1।। ಯಾರೋ ನೀನು ಚೋರನಲ್ಲವೆ ವೀತರಾಧೆಯೊಳ್ ಸಾರಿ ನೀ ಬರುವೆ। ಬಾಗಿಲನ್ನು ತೆಗೆಯೊಳಲ್ಲ ಹೋಗು ಸುಮ್ಮನೆ।।2।। ಬಾಗಿಲನ್ನು ತೆಗೆಯೆನೀನು ನಾಗವೇಣಿಯೆ।। ಕೋಟಿ ಕಳ್ಳರ ಶೌರ್ಯದ ಮಧುಕೈಟಭಾರ್ಯರ। ವೀಟಿ ಸೆಳೆದು ದೂರ್ತಿಸಿದ ನಿಶಾಚರರೊಳ್ ಕಾಡದಂತಕ।।3।। ಪಾಕಶಾಸನಾಗಿ ಕೈಯಿಲ್ ಲೋಕ ಜನರನು। ಜೋಕೆಯಿಂದ ಸಾಕಿಬಂದ ಭೂಪ ಮನುಕುಲ ದೀಪರಾಗ।।4।। ಬಾಗಿಲನ್ನು ತೆಗೆಯೆ ನೀನು ನಾಗವೇಣಿಯೆ। ಹರುಷದಿಂದ ಸರಸಿಜಾಕ್ಷಿ ತೆರೆದು ಕದವನು।।5।। ಕರವ ಮುಗಿದು ಚರಣಕೆರಗಿ ವರದ ವೆಂಕಟೇಶನ ಮನ್ನಿಸಿ। ಬಾಗಿಲನ್ನು ತೆಗೆದಳಾಗ ನಾಗವೇಣಿಯು।।6।।

ನಮ್ಮ ಮನೆಯಂಗಳದಿ **ರಾಗ: ಭೂಪಾಳಿ, ಖಂಡಏಕತಾಳ**

ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು। ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು। ನಿಮ್ಮ ಮನೆಯನು ತುಂಬಲೊಪ್ಪಿಸುವೆವು।।ಪ।। ಮರೆ ಮೋಸ ಕೊಂಕುಗಳನರಿಯಳಿವಳು। ಇನಿಸು ಅವಿಶ್ವಾಸವನು ಕಂಡರಿಯಳು। ಕಷ್ಟಗಳ ಸಹಿಸದೆಯೆ ಕಾಣದೆಯೆ ಬೆಳೆದವಳು ಸಲಹಿ ಕೊಳ್ಳಿರೀ ಮಗಳನೊಪ್ಪಿಸುವೆವು।।1।। ಕಠಿಣಗಳ ನೆಳಲ್ ಸುಳಿಯಲದುರಿ ಬಾಡುವಳು। ಹಿರಿಮಂಜು ಬಳಲಿಸಿದ ಹೂವಿನಂತೆ। ಸುಖದಲ್ಲಿ ದುಃಖದಲ್ಲಿ ಎಲ್ಲದೆಸೆಯಿರವಿನಲಿ। ನಿಮ್ಮ ಪಾಲಿಗೆ ನಿಲುವ ಕುವರಿಯಿವಳು।।2।। ನಿಮಗಿವಳು ನೀಡುತಿಹ ಹಾಲು ಹಣ್ಣುಗಳ ಸವಿ। ಎಂದೆಂದು ಅವಳ ನಡೆನುಡಿ ನಿಮ್ಮ ಪರವಾಗಿ। ನಮ್ಮ ಕುಲ ಮನೆಗಳಿಗೆ ಹೊರಗಾಗಿ

ಬಂದಿಹಳು। ನಿಮ್ಮ ಕುಲವನು ಬೆಳೆಸೆ ಬಂದಿರುವಳು॥3॥ ನಿಮ್ಮ ಮಡದಿಯ ಕೊಂಡು ಸುಖವಾಗಿರೌ ಮಗುವೆ। ನಿಮ್ಮ ಸೊಸೆ ಸೋದರಿಯು ಕೊಳ್ಳಿರಿವಳ। ನಿಮ್ಮ ಕೀರುತಿ ಬೆಳೆಯಲಿವಳ ಸೌಜನ್ಯದಲಿ ನಿಮ್ಮ ಕುಲ ಶೀಲಗಳು ಪರಿಮಳಿಸಲಿ॥4॥ ಹೆತ್ತವರ ಮನೆಗಿಂದು ಹೊರಗಾದೆ ನೀ ಮಗಳೆ। ಈ ಮನೆಯವರೆ ನಿನ್ನವರು ಮುಂದೆ। ಇವರೆ ತಾಯ್ಗಳು, ಸಖರು, ಭಾಗ್ಯವನು ಬೆಳೆಸುವರು ಇವರ ದೇವರುಗಳೆ ನಿನ್ನ ದೇವರುಗಳು॥5॥ ನಿನ್ನ ಕಣ್ಣೊರಿಸಿಕೊಳ್ಳು ನಿಲ್ಲುತಾಯ್ ಹೋಗುವೆವು ತಾಯಿರಾ ತಂದೆಯಿರಾ ಕೊಳ್ಳಿರಿವಳ। ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ ತುಂಬಿದಾಯುಷ್ಯದಲಿ ಬಾಳಿ ಬದುಕು॥6॥

ನಮ್ಮ ಮನೆ ಮಗಳನ್ನು — ರಾಗ:ಭೂಪಾಳಿ

ನಮ್ಮ ಮನೆ ಮಗಳನ್ನು ನಿಮ್ಮ ಮಗನ ಸತಿಯಾಗಿ। ನಿಮ್ಮ ಪ್ರೀತಿ ವಾತ್ಸಲ್ಯ ಅವಳದಾಗಿರಲಿ। ಹೆತ್ತವರ ಮನೆಯಿಂದ ಅತ್ತೆ ಮನೆಗೆ ಹೋಗಿ। ಎಲ್ಲರಲು ಒಂದಾಗಿ ಬಾಳಬೇಕಮ್ಮ । ಬಾಳಬೇಕಮ್ಮ ॥ಪ॥ ತಂದೆತಾಯಿ ಪ್ರೀತಿಯನು ಅತ್ತೆ ಮಾವರಲಿ ಗಳಿಸು। ಅವರ ಮುದ್ದು ಸೊಸೆಯಾಗಿ ಬಾಳಬೇಕಮ್ಮ । ಅವರ ಹಿತ ವಚನಗಳ ಅರ್ಥವನು ನೀ ತಿಳಿದು। ಅವರ ಮನಕೆ ಹರುಷ ನೀಡಬೇಕಮ್ಮ ನೀಡಬೇಕಮ್ಮ ॥1॥ ವಿದ್ಯಾವಂತಳು ಇವಳು ಎಲ್ಲವನು ಅರಿತವಳು। ಅವಳ ಅಭಿಲಾಷೆಗಳು ನೀವು ಅರಿತು। ಭಾರತಾಂಬೆ ಮಗಳಾಗಿ ದೇಶಸೇವೆ ಮಾಡುವಂಥ। ಧೈರ್ಯವನು ನೀವಿತ್ತು ಸಲಹಬೇಕಮ್ಮ ಸಲಹಬೇಕಮ್ಮ ॥2॥ ಪತಿಯ ಹಿತವನೆ ಕೋರಿ ಸಮನಾಗಿ ದುಡಿಯಮ್ಮ । ಪ್ರೀತಿವಾತ್ಸಲ್ಯದ ಮಕ್ಕಳೆರಡಿರಲಿ। ಚಿರಕಾಲವು ನಿಮ್ಮ ಮಕ್ಕಳ ಹಿತ ಬಯಸಿ। ವಿದ್ಯಾವಂತರಾಗಲೆದು ಹರಸಿ ಬೆಳಸಮ್ಮ ಬೆಳಸಮ್ಮ ॥3॥ ತಂದೆ ತಾಯಿಗಳೆ ನೀವೂ ಮಗಳ ಧಾರೆ ಎರೆದು। ವ್ಯಥೆ ಏಕೆ ತೋರುವಿರಿ ಮನೆಯನ್ನು ತುಂಬಿಸಲು। ಅವಳ ಹಿತವನೆ ಬಯಸಿ ಸುಖವಾಗಿ ಬಾಳೆಂದು। ಮಗಳನ್ನು ಹರಸುತ ನಿಮ್ಮ ದುಃಖವನು ಮರೆತು॥4॥ ತಂದೆತಾಯಿಗಳೆ ನೀವೂ ನಿಂತು ಕಣ್ ಒರೆಸಿಕೊಳ್ಳಿ। ನಿಮ್ಮ ಆದರಾಭಿಮಾನ ನನ್ನಲ್ಲಿ ನೆಲೆಸಿಹುದು। ಅತ್ತೆ ಮಾವರ ಒಲವೂ ನನಗೆ ಹಿತವಾಗಿಹುದು। ಎರಡು ಮನೆಗಳ ಕೀರ್ತಿ ಉಳಿಸಿ ಬೆಳಸುವೆನು॥5॥

ಪೋಗಿ ಬಾರಮ್ಮ ಮಗಳೆ — ರಾಗ: ಸಿಂಧುಭೈರವಿ

ಪೋಗಿ ಬಾರಮ್ಮ ಮಗಳೆ ಪೋಗಿ ಬಾರಮ್ಮ ॥ಪ॥ ಪೋಗಿ ಬಾರೆ ಸಾಗಿ ಬಾರೆ ನಾಗವೇಣಿಯೇ। ಆಗೆ ಮುತ್ತೈದಾಗು ಮಗಳೆ ಆಗೆ ಸಾವಿತ್ರಿ॥1॥ ಪತಿಸೇವೆಯ ಮಾಡುಮಗಳೆ ಪತಿವ್ರತಾಗಮ್ಮಾ । ಅತ್ತೆ ಮಾವರ ಸೇವೆ ಮಾಡುತ ನೀನು ಬಾಳಮ್ಮ ॥2॥ ಹತ್ತುಹಲವರಲಿ ನೀನು ಮುದ್ದು ಮಗಳಮ್ಮ । ಎತ್ತಿ ಇಳಿಸಿ ಆಡಿಸಿದೆನಾ ತುತ್ತು ಉಣಿಸಿದೆನೇ॥3॥ ಹುಟ್ಟಿದಂದಿನಿಂದ ಮನೆಗೆ ಹಚ್ಚಿಕೊಂಡಿರುವೆ। ಹೊಟ್ಟೆಯ ಕರುಳೆ ಬಿಟ್ಟಿರಲಾರೆ ಅಪ್ಪಿಕೊಳ್ಳುವ ತೆರದಿ ॥4॥ ತಮ್ಮ ಅಳುವ ತಂಗಿ ಅಳುವಳು ಸುಮ್ಮನಿರಹೇಳೇ । ಅಮ್ಮ ಬರುವವರೆಗೂ ಅಳಬೇಡೆಂದ್ಹೇಳೆ ಮಗಳೇ ॥5॥ ನವಮಾಸವನು ಹೊತ್ತು ಹಡೆದೆನು ಭಾರವಾಗಲಿಲ್ಲಾ । ನವಸುಕುಮಾರಿ ನಡೆದಿಹೆ ಗೌರಿ ಸುಮ್ಮನಾಗು ಕುವರೀ ॥6॥ ಕನ್ಯಾದಾನವ ಮಾಡಿ ಕೊಟ್ಟೆನು ಸಾಲಂಕೃತದಿಂದ । ಇನ್ನು ಅಳದಿರು ಮುದ್ದು ಮಗಳೆ ಎನ್ನೆದೆಯಾ ಮುಗುಳೆ ॥7॥ ಉಣಿಸಿ ತಣಿಸಿ ಉಡಿಸಿ ತೊಡಿಸಿ ಸಾಕಿ ಸಲಹಿದೆನೇ । ಕಳುಹಲಾರೆನಾ ಬಿಡಲಾರೆನಾ ಹಳಹಳಿಯಾಗುವುದು ॥8॥

ರಾಮನರಸಿಯನಿತ್ತ ಸೌಭಾಗ್ಯದೀ — ರಾಗ:ಬೃಂದಾವನಸಾರಂಗ

ರಾಮನರಸಿಯನಿತ್ತ ಸೌಭಾಗ್ಯದೀ ಹೆಣ್ಣು। ಧಾತ್ರಿಗಿಹ ಸಹನೆಯ ಬೆಳಕಿನಾ ಕಣ್ಣು। ಮಂಗಳೆಯ ಮಾಂಗಲ್ಯ ಸಾಕಾರ ರೂಪೆ॥ಪ॥ ಕುಲನಾರಿ ಕುವರಿ ಮನೆತನದ ಹಿರಿ ಕುಡಿಯು। ಮನೆಯವರ ಮನಮನದ ಪ್ರೀತಿ ನುಡಿಯು। ಕಾರ್ಯದಲಿ ಬಹುಕುಶಲಿ ಇಂಗಿತಜ್ಞಳು ಇವಳು। ಹಿತಮಿತದಿ ನುಡಿನಡೆವ ಶೀಲಸಂಪನ್ನೆ॥1॥ ಕೃಷ್ಣ ನಿನ್ನ ಅರ್ಧಾಂಗಿ ರಾಧೆಯನು ಸ್ವೀಕರಿಸು। ನಿತ್ಯ ಲಕ್ಷ್ಮೀರಮಣ ನೀನಾದೆ ಕೇಳು। ಸುಳ್ಳು ತಟವಟ ಮೋಸ ಕಪಟವರಿಯದ ಹೆಣ್ಣು। ಚೆನ್ನಾಗಿ ನೋಡಿಕೋ ನಿನಬಾಳಿಗಿದು ಕಣ್ಣು॥(ಹೊನ್ನು)॥2॥ ನಿನ್ನ ಹೃನ್ಮಂದಿರಕೆ ಒಪ್ಪಿಸಿಹೆವ್ ಈ ಹೆಣ್ಣು। ನಿಮ್ಮ

ಜೀವನ ಜ್ಯೋತಿ ಬೆಳಗೆ ಚೆನ್ನ। ಉಭಯಕುಲ ಸವಿಯಾಗಿ ಸಕಲ ಜನ ಸಖರಾಗಿ। ಬದುಕಿ ಬಾಳಿರಿ ನೀವು ಬಹುಕಾಲ ಸುಖವಾಗಿ।।3।।

ಬಾಗಿಲು ತಡೆದದ್ದು

ಅಂಗನಾಮಣಿ ರಂಗ ಬಂದನು **ರಾಗ: ಮೋಹನ - ಆದಿತಾಳ**

ಅಂಗನಾಮಣಿ ರಂಗ ಬಂದನು ತೆಗೆಯೆ ಕದವನು। ಭಂಗಪಡಿಸಲೇತಕೆ ಎನ್ನನು ಸುಮಂಗಲೀಯರೆ।।ಪ।। ಕ್ರೂರ ದೈತ್ಯರ ಕೊಂದು ಬಂದೆನು ಭಾರಿ ಕೋಪದಿ। ಸಾರಿ ಸೇರಿ ತೆಗೆಯೆ ಕದವ ವಾರಿಜಾಕ್ಷಿಯೇ।।1।। ದುಷ್ಟ ನಡತೆಗಳನೆ ಬಿಟ್ಟು ದಿಟ್ಟತನದಲಿ। ನಿಷ್ಠೆಯಿಂದಲಿ ತೆಗೆಯೆ ಕದವ ವಾರಿಜಾಕ್ಷಿಯೇ।।2।। ತರುಣಿ ನಿನ್ನೊಳು ತ್ವರಿತಮಾಗಿ ಮಾತನಾಡಲು। ತ್ವರಿತವಾಗಿ ಒದಗಿ ಬಂದೆನು ತೆಗೆಯೇ ಕದವನು।।3।।

ಬಲಗಾಲ ಮುಂದಿಟ್ಟು (ಹೊಸ್ತಿಲ ಪೂಜೆ ಮನೆತುಂಬಿಸಿಕೊಳ್ಳುವುದು) **ರಾಗ: ಸಾವೇರಿ**

ಬಲಗಾಲ ಮುಂದಿಟ್ಟು ಬಾಗುತ್ತ ಬಾರಮ್ಮ। ಬಾಗಿಲಿಗೆ ಕೈಯ ಮುಗಿದು ಬಹುಕಾಲ ಬಾಳು।।ಪ।। ಬೆಟ್ಟದ ಬುಡದಲ್ಲಿ ಹುಟ್ಟಿರುವ ನದಿ ತಾನು ಹುಟ್ಟೂರ ಮರೆತಂತೆ। ಕೊಟ್ಟಲ್ಲೆ ಬಾಳು।।1।। ಮರದಲ್ಲಿ ಹುಟ್ಟಿರುವ ಬಲತಾಯಿ ಬೇರನ್ನು। ಕಂಡಿಹರೇನೇ। ಕಣ್ಣೀರು ತರುವೆಯಾ।।2।। ಹೆಣ್ಣೀನ ಬಾಳುವೆ ಕಣ್ಣೀರ ಕಾಲುವೆ। ಕಣ್ಣೀರನೊರೆಸುತ ಹೋಗಮ್ಮ ಒಳಗೆ।।3।। ಹೆತ್ತವರ ಹೊತ್ತವರ ಬಹುದೂರ ತೌರನೆನೆದು। ತಂದವ ಜೊತೆಯಲ್ಲಿ ಬಹುಕಾಲ ಬಾಳು।।4।।

ಮನೆ ತುಂಬಿಸಿಕೊಳ್ಳುವುದು

ಬಾರಮ್ಮ ಮಗಳೆ ಬಾರಮ್ಮ **ರಾಗ: ಸಾವೇರಿ**

ಬಾರಮ್ಮ ಮಗಳೆ ಬಾರಮ್ಮ ಬಂಗಾರದ ಹೆಣ್ಣೆ ಬಾರಮ್ಮ।।ಪ।। ನೀ ನಿಂದು ನಗುತ ಬಂದೆ ಈ ಮನೆಯ ಬೆಳಗು ಎಂದು। ನೀ ಪಾದ ಸೇವೆ ಮಾಡಿ ಸತಿಯಾಗಿ ಬಾಳು ಮಗಳೆ।।1।। ಸರಿಯಾದ ಜೋಡಿ ನಿಮದು ಸೊಗಸಾದ ನಿನ್ನ ಪತಿಯು। ನೀ ಪಾದ ಸೇವೆ ಮಾಡಿ ಸತಿಯಾಗು ಬಾಳು ಮಗಳೆ।।2।। ತೌರಿಗೆ ಹೆಸರ ತರಬೇಕು ತೌರನು ನೀ ಮರೆಯದಿರಬೇಕು। ತೌರಿನ ನೆನಪಿಗಾಗಿ ಹೆಣ್ಣೊಂದು ಕಾಣಿಕೆ ನೀಡಬೇಕು।।3।।

ಬಾರಮ್ಮ ಭಾಗ್ಯಲಕ್ಷ್ಮೀ **ರಾಗ: ತೋಡಿ**

ಬಾರಮ್ಮ ಭಾಗ್ಯಲಕ್ಷ್ಮೀ ವಾರಿಜನಾಭರಾಣಿ। ಮಾರನ ಜನನಿ ನಿನ್ನ। ಸಾರಿ ಪೂಜಿಪೆ ಮುನ್ನ।।ಪ।। ವಾರೀಜಪಾಣಿ ನಿನ್ನಾ। ತೋರಮ್ಮ ಚರಣ ಕಮಲಾ। ವಾರಿ ಪನ್ನೀರಿನಿಂದಾ। ತಿರುಮಂಜಲಾವ ಗೈವೆ।।1।। ಕಂಜಾತೆ ಮಂಜುವಾಣೀ। ಅಂಜಾರೆಪುಷ್ಪವಿತ್ತು। ಕುಂಜಾರಗಮನೆ ಗಂಧಾನಿಜದಿಂದ ಅರ್ಪಿಸುವೆವು।।2।। ವರದೀಪಧೂಪದಿಂದ। ನೆರೆವಾದ ಭಕ್ಷಭೋಜ್ಯ ಪರಿಪರಿಯ ತಳಿಗೆ ನೀಡಿ। ಪರಿಮಾಳ ವೀಳ್ಯವಿತ್ತು।।3।। ಕನಕಾದ ತಟ್ಟೆಯಲ್ಲೀ। ಅನುರಾಗದಿಂ ಕರ್ಪೂರ। ಚಿನುಮಾಯಾನರಸೀಲಕ್ಷ್ಮೀ। ಅನುನಯದಿ ಮಾಡಿಪೇಳ್ವೇ।।4।। ಶೇಷಾದ್ರಿ ವಾಸನನ್ನು ತೋಷಾದಿಂಕೂಡಿ ನಮ್ಮಾ। ಪೋಷೀಸಿಭೀಷ್ಟವಿತ್ತು। ಪುಷ್ಪದಿ ಬಿಡದೆನಿಮ್ಮಾ।।5।।

ಬಾರೇ ಲಕ್ಷ್ಮೀ ಮನೆಗೆ ಬೇಗನೆ **ರಾಗ: ಭೈರವಿ**

ಬಾರೇ ಲಕ್ಷ್ಮೀ ಮನೆಗೆ ಬೇಗನೆ। ಮಾರನ ಜನನಿ॥ಪ॥ ಸುರರುನಾರದಾದಿಗಳು। ನೆರೆದು ಮೊರೆಯಿಡುತಲಿಹರು। ನೀರಜಾಕ್ಷಿ ನಿಮ್ಮ ದಾರಿ। ಸಾರಿನೋಡುತ್ತಿರುವರೆಲ್ಲರು॥1॥ ಫುಲ್ಲನಾಭನನ್ನು ಸೇರಿ। ಚಲ್ವಮುಗುಳು ನಗೆಯ ತೋರಿ। ಎಲ್ಲರಭಿಲಾಷೆಗಳನು ಸಲ್ಲೀಸುವತಾಯೇ। ಬೇಗನೆ॥2॥ ಶೇಷಗಿರಿ ವಾಸ ನಿಮ್ಮ ಶ್ರೀಶನರ್ಧಾಂಗಿಸಹಿತ। ಆಶೆ ಪೂರೈಸಿಸಲಹು। ಶ್ರೀಷಳೇಳೇ ನಿಮ್ಮ ಕರುಣದಿಂದಲಿ॥3॥

ಬಾರೇ ಶ್ರೀ ಲಕ್ಷ್ಮೀ ಹಸೆಗೆ **ರಾಗ: ಶಹನ**

ಬಾರೇ ಶ್ರೀ ಲಕ್ಷ್ಮೀ ಹಸೆಗೆ। ಬಲು ಬೇಗದಿಂದಲಿ॥ಪ॥ ಕ್ಷೀರಸಾಗರದಲ್ಲಿ ಉದಿಸಿದ। ಶ್ರೀಮಹಾವಿಷ್ಣುವಿಗೆ ಪ್ರಿಯಳಾದೆ॥ ಬಾರಿಬಾರಿಗೂ ಸ್ತುತೀಸಿ ಕರೆವೆನು। ಶ್ರೀರಂಗನಾಥನ ಪಟ್ಟದ ರಾಣಿಯೇ॥1॥ ಪಂಕಜಾನಾಭಾನ ಪ್ರೀಯೆ। ಸಂಕಟಂಗಳ ಪರಿಹರಿಸು ತಾಯೆ॥ ಬಿಂಕವೇನಿದೆ ಭಕ್ತರಾಮೇಲೆ। ವೆಂಕಟೇಶನ.. ಸತಿಯಳೆ॥2॥ ಮುತ್ತಿನಾ ಮಂಟಪದಲ್ಲಿ ಚಿತ್ರದ ಹಸೆಯು ಹಾಕಿ। ಸುತ್ತಲೂ ಜ್ಯೋತಿಯ ಹಚ್ಚಿ ಉತ್ಸಾಹದಿಂದ ಕರೆಯುವೇನು॥3॥ ಶ್ರಾವಣಶುಕ್ರವಾರದದಿನ ಸ್ತ್ರೀಯರೆಲ್ಲರೂ ಪೂಜಿಸಿ। ದೇವೀಪೂಜೆಗೊಂಡು ಪಾವನಾಂಗ್ರಿ ಪ್ರಾರ್ಥಿಸುವೆನು॥4॥ ಹಳಾದಿಕುಂಕುಮ ಗಂಧಪುಷ್ಪ ಧೂಪ ದೀಪಶಾಖ ಫಲಂಗಳು। ತಾಂಬೂಲ ಮಂತ್ರಾಕ್ಷತೆಯು। ಅರ್ಪಿಸಿ ಆರುತೀಯನೆತ್ತುವೇನು॥5॥

ಲಕ್ಷ್ಮೀಬಾರಮ್ಮ ಭಾಗ್ಯ ಲಕ್ಷ್ಮೀ ಬಾರಮ್ಮ **ರಾಗ:ಮಧ್ಯಮಾವತಿ**

ಲಕ್ಷ್ಮೀಬಾರಮ್ಮ। ಭಾಗ್ಯಲಕ್ಷ್ಮೀ ಬಾರಮ್ಮ। ಬೆಳಗಲು ಮನೆಯನ್ನು ಸಿರಿದೇವಿಯೆ॥ಪ॥ ಕಾಲಲಂದಿಗೆ ಗೆಜ್ಜೆ ಘಲು ಘಲು ಎಂದಾಗ। ಮನೆಯಲ್ಲಿ ನೂರುವೀಣೆನಾದ ಹೊಮ್ಮಿ ಚಿಮ್ಮುತಲಿ॥ ಅ.ಪ॥ ಅನುಗಾಲ ಜೊತೆಯಾಗಿ। ನಮ್ಮ ಹರಿಯನ್ನು ಸೇರಲು ಬಾರಮ್ಮ। ನಮ್ಮ ಸೊಸೆಯಾಗಿ ನರಹರಿ ಸತಿಯಾಗಿ। ಹೊಸ ಆನಂದ ತುಂಬುತಲಿ। ಪ್ರೀತಿಯ ತಾರಮ್ಮ ನಮ್ಮ ಭಾಗ್ಯದೇವತೆಯೇ॥1॥ ಹಿತವಾದ ಶ್ರುತಿಯಲ್ಲಿ। ನಮ್ಮ ಬುದುಕೆಂಬ ಗೀತೆಯ ಹಾಡಮ್ಮ। ಪ್ರೀತಿಯ ಸುಮವಾಗಿ ಜೇನಿನ ಹನಿಯಾಗಿ ಹೊಸ ಆನಂದ ತುಂಬುತಲಿ। ಸುಖವನು ತಾರಮ್ಮ ನಮ್ಮ ಭಾಗ್ಯದೇವತೆ॥2॥

ಹಾರೈಕೆ

ಮುದ್ದಾದ ತಂಗಿ ಹಾರೈಸುವೆ **ರಾಗ: ಬಾಗೇಶ್ರೀ**

ಮುದ್ದಾದ ತಂಗಿ ಹಾರೈಸುವೆ। ಈ ಮನೆಯ ದೀಪಾ ನೀನಾಗಿರೆ। ಬೇರೊಂದು ಮನೆಯ ಬೆಳಕಾಗುವೆ॥ಪ॥ ವಾತ್ಸಲ್ಯಲತೆಯು ನೀನಾಗೆ ತಂಗಿ। ಎಂದೆಂದು ನಗುತ ನೀಬಾಳು ತಂಗಿ॥ ಕಣ್ಣಾದೆ ಕರುಳಿನ ಮಮಕಾರವಮ್ಮ। ಇನ್ನಿಂಥ ಸಂಬಂಧ ಉಪಮಾನ ಕಾಣೆ॥1॥ ಆ ನಿನ್ನ ಗಂಡ ಬಲವಾಗಿ ಮೈಮರೆ। ಈ ನಿನ್ನ ಪೂಜೆಯ ಫಲವಾಗಿರೆ। ಆವಂಶ ಈವಂಶ ಕೊಂಡಾಡುವಂತೆ। ಯಶವಂತೆ ನೀನಾಗು ಇರದಂತೆ ಚಿಂತೆ॥2॥ ರಾಜಾಧಿರಾಜನ ಅರ್ಧಾಂಗಿ ನೀನು। ಅಸಮಾನ ವೈಭೋಗ ನಿನದಮ್ಮ ತಂಗಿ। ಆನಂದ ಬಾಷ್ಪವೆ ಬಹುಮಾನವಮ್ಮ। ಎಂದೆಂದು ಈ ಅಕ್ಕ ನೆನಪಾಗಲಮ್ಮ॥3॥

ನೀಲಿಮೆಯ ಆಗಸದಿ **ರಾಗ: ಅಭೋಗಿ**

ನೀಲಿಮೆಯ ಆಗಸದಿ ಹೊಳೆವ ತಾರೆಗಳಂತೆ। ಮಿಂಚಿ ಮಿನುಗಲಿ ನಿಮ್ಮ ಬಾಳ ಬಾನು। ಹುಣ್ಣಿಮೆಯ ಶಶಿತಾರೆಯಂದದಲಿ ಕೂಡಿರಲು। ನಿಮ್ಮ ಉಮೆಕೀರ್ತಿ ತಾನು(2ಸಾರಿ)॥1॥ ಹೆತ್ತವರ ಹೆಸರಾಗಿ ಜೀವನವು ಹಸಿರಾಗಿ ಹೊಳೆಯುತಿರಲೀ ಮುಗಿಲ ಮಿಂಚಿನಂತೆ। ಜೊನ್ನಮಳೆ ಸುರಿದಿರಲಿ ಹಿಮಮಣಿಯು ಕವಿದಿರಲಿ। ನಾಳಿನರುಣೋದಯಕೆ ಸಿಂಗರಿಸಿದಂತೆ॥2ಸಾರಿ॥2॥ ಸಪ್ತಪದಿಗಳ ನಡುವೆ ಬಾಳ್ವೆ ಜೊತೆಗೂಡಿರಲು ಒಂದೇ ಜೀವದ

ಎರಡು ಬಿಂಬಂಗಳಂತೆ। ನಿಮ್ಮ ಸುಖ ಜೀವನದ ಬಾಳ್ವೆ ಜೊತೆ ಗೂಡಿರಲು। ನಿಮ್ಮ ಬಯಕೆಯ ಬಳ್ಳಿ ಫಲಿಸುವಂತೆ।।2ಸಾರಿ।।3।। ತುಂಬಿ ತುಳುಕಲಿ ಬಾಳ ಮಧುವನಾ ನಲ್ನುಡಿಯು। ನಿಮ್ಮ ಜೀವನ ಬಾಳ ಬೃಂದಾವನ ದಲಿ। ಹರಿದು ಹೊಮ್ಮಲಿ ಮುರಳಿನಾದದಲೆ ತೂರೆಯು। ಪ್ರೇಮ ತ್ಯಾಗದಿ ನಿತ್ಯ ನಂದಗೋಕುಲ ದಲ್ಲಿ।।4।।

ಬಹುಮಾನ ನಿನಗೇನು ಕೊಡಲಮ್ಮ ರಾಗ:ವಲಚಿ

ಬಹುಮಾನ ನಿನಗೇನು ಕೊಡಲಮ್ಮ ತಂಗಿ। ಬಡ ಬಾಳನು ನೀನು ಬೈಯದಿರು ತಂಗಿ। ಸಹಚರನ ಒಲುಮೆಯಲಿ ಸುಖಕಾಣು ತಂಗಿ। ಸಂತಾನ ಭಾಗ್ಯವನು ಕಾಣಮ್ಮ ತಂಗಿ।।ಪ।। ಮುಡಿಗೊಂದು ಹೂವನ್ನು ಮುಡಿದಿರು ತಂಗಿ। ನಡತೆಯ ನೋಟದಲಿ ನೆಲೆಕಾಣು ತಂಗಿ। ಪತಿಯೂರ ಕುಲದಂತೆ ನೀನಾಗು ತಂಗಿ। ಬಲ್ಲಿದರ ಒಡನಾಟ ಸೇರುತಿರು ತಂಗಿ।।1।। ಪತಿಯೂರಲೀ ತೌರೂರ ಹೆಸರೆತ್ತು ತಂಗಿ। ಪರಿಮಳದ ಹೊನ್ನಂತೆ ಬಲಿಯಾಗು ತಂಗಿ। ಮಾಂಗಲ್ಯ ಪ್ರತಿನಿಧಿಗೆ ಸುಖ ನೀಡು ತಂಗಿ। ಮಹಮಾತೆ ಗದ್ದುಗೆಯ ಏರುತಿರು ತಂಗಿ।।2।। ಅಭಿಮಾನ ಸಹನೆಗೆ ಎದೆಗೊಡು ತಂಗಿ। ನಗುನಗುತ ತೌರಿಂದ ತೆರಳಿನ್ನು ತಂಗಿ। ನಿನ್ನೊಲುಮೆ ಸೋದರಿಯ ಮರೆಯದಿರು ತಂಗಿ। ನಿನ್ನ ಬಾಳು ಬಂಗಾರ ಆಗಲಮ್ಮ ತಂಗಿ।।3।।

ಮಂಗಳವು ಶುಭ ಮಂಗಳವು ರಾಗ:ಕಲ್ಯಾಣಿ

ಮಂಗಳವು ಶುಭ ಮಂಗಳವು ನವ ದಂಪತಿಗಳಿಗೆ। ಈ ಸಂತಸ ಈ ಸಂಭ್ರಮ ಸ್ಥಿರವಾಗಲಿ ನಿಮಗೆ।। ಹಿರಿಯರ ಹರಕೆ ಶುಭಹಾರೈಕೆ ಇಂದೊದಗಲಿ ನಿಮಗೆ। ಹಸಿರಾಗಲಿ ಪ್ರೀತಿಯ ತೋರಣ ಎದೆಬಾಗಿಲಿನೊಳಗೆ।।1।। ಅನ್ಯೋನ್ಯತೆ ಯಲಿ ಆ ಧನ್ಯತೆಯಲಿ ಸುಖವಾಗಿರಿಯೆಂದು। ಎಳೆಯರೆ ನಿಮಗೆ ಶುಭಕೋರುವೆ ಇಂದು।।2।। ಏರು ಇಳುವಿನಲಿ ಬಿಸಿಲು ನೆರಳಿನಲಿ ಜೊತೆಯಾಗಿರಿ ನೀವು। ನಿಮ್ಮ ಜೀವನದ ಹೂದೋಟದಲಿ ಹೂವಿರಲೆಂದೆಂದು।।3।।

ಸಂಭ್ರಮದ ಈ ಸುದಿನ ರಾಗ:ಆನಂದಭೈರವಿ

ಸಂಭ್ರಮದ ಈ ಸುದಿನ ಮದುವೆಯ ಈ ಬಂಧನ ಹಾಲುಜೇನಂತೆ ಈ ಸಂಬಂಧ ನೂರಾರು ವರುಷ ತರಲಿ ಹರುಷ ಹಾರೈಸುವ ಶುಭವ ಹಾರೈಸುವ।।1।। ಎಲ್ಲಿಯೋ ಹುಟ್ಟಿದ ಎಲ್ಲಿಯೋ ಬೆಳೆದ ಎರಡು ಜೀವದ ಈ ಸಂಗಮ ಅಂತು ಒಂದಾಗಿ ಬೆರೆತು ಹಾಯಾಗಿ ಸವಿಯೇ ಜೀವನ ಪ್ರೇಮ ಪೂರ್ಣಿಮಾ ಹಾರೈಸುವ ಶುಭವ ಹಾರೈಸುವ।।2।। ಸಿರಿಸಂಪದವಿರಲಿ ಕಷ್ಟವೇನೇ ಬರಲಿ ಬೇವುಬೆಲ್ಲದಂತೆ ಸಮನಾಗಿರಲಿ ನೋವು ನಲಿವಿನಲಿ ಕಾಣುವ ಆನಂದ ಅದುವೇ ಜೀವನದ ಅನುಬಂಧ ಹಾರೈಸುವ ಶುಭವ ಹಾರೈಸುವಾ।।3।। ಹೆಣ್ಣಿಗೆ ಗುಣವೇ ಚಿನ್ನದ ಮೆರುಗು ಪ್ರೀತಿಪ್ರೇಮವೇ ಬಾಳಿಗೆ ಬೆಳಕು ಆ ಬ್ರಹ್ಮ ಬೆಸೆದ ಈ ಬಾಳನಂಟು ಸುಖಸಂಸಾರದ ಸವಿಗುಟ್ಟು ಹಾರೈಸುವ ಶುಭವ ಹಾರೈಸುವಾ।।4।।

ಹುಟ್ಟಿ ಬೆಳೆದಿಹ ಮನೆಯ ಬಿಟ್ಟು ರಾಗ: ಕಲ್ಯಾಣಿ

ಹುಟ್ಟಿ ಬೆಳೆದಿಹ ಮನೆಯನ್ನು ಬಿಟ್ಟು ಹೊರಟೆನು ತಾಯೆ। ಪುಟ್ಟಮಲ್ಲಿಗೆ ಹೂವ ಮುಡಿಗೆ ಮುಡಿಸು।।ಪ।। ಮುನ್ನಕಾಣದ ಊರಲ್ ಎನ್ನ ಮನೆ ಇರುತಿಹುದು। ಹೊನ್ನಾಗು ಮನೆಗೆಂದು ಹರಸಿ ಕಳಿಸು।।1।। ಮುದ್ದಿನರಗಿಣಿಯಂತೆ ಮುದ್ದಾಗಿ ಸಲಹಿದಿರಿ। ಮೋಹಮಂದಾರವನು ಅರಳಿಸಿದಿರಿ।।2।। ಹೆತ್ತತಾಯ್ ತಂದೆಯರೆ ಎತ್ತೆನ್ನ ಸಲಹಿದಿರಿ। ನಿಮ್ಮ ಪಾದದಡಿಯಲ್ಲಿ ನಮಿಸುವೆನು ನಾನು।।3।। ಹೋಗಿ ಬರುವೆನು ತಾಯೆ ಅಣ್ಣ ಅತ್ತಿಗೆಯವರೆ। ಈ ಮನೆಯ ತಂಗಿಯನು ಮರೆಯಬೇಡಿ।।4।। ನಿಮ್ಮ ಮನೆ ಮಗಳಾಗಿ ಎನ್ನಮನೆ ಬೆಳಕಾಗಿ ಮುಂಬರುವ ಸುಖಕಾಗಿ ಹರಸಿರೆನ್ನ।।5।।

ಆರತಿ

ಗಂಡಿಗೆ

ಆರುತೀಚ್ಚದ ಆದರಮುಲತೋ

ಆರುತೀಚ್ಚದ ಆದರಮುಲತೋ। ಹರಿಹರರೂಪುಡನೇನೆ।। ಹರಿಹರರೂಪುಡನೇ।।ಪ।। ಆದರ ಮುಲತೋ ಆ ಮುನಿ ಶಾಪಮು। ಅಣಚಿನ ಧೀರುಡವನುಚೂ'ಿ। ಮೋದ ಮುಮೀರಗ ಶಿವುನಿ ಧನುವನು ವಿರಿಂಚಿನ ದೀರುಡವನ ಚೂ।।1।। ವಾಲಿನ ದೊಂಚಿನ ವಾಯುಸುತನಿತೋ। ವಾರುಧಿಗಟ್ಟಿನ ವಚನೊ। ವಾರಿಜಾಕ್ಷಿಕೈ, ಘೋರರಕ್ಕಸುನಿ। ಗೊಟ್ಟಿವಚ್ಚಿತಿವನಚು।।2।। ದಕ್ಷಿಣ ಕಾಸಿ ಕ್ಷೇತ್ರಮುಲೋಪುಲ ಭಕ್ತುಲ ಬ್ರೋಚಿತಿ ವನಚೊ। ಭಕ್ತುಲು ಕ ಮೀಮುಕ್ತುಲ ನಿಚ್ಚಿ। ಭಕ್ತಾಗ್ರೇಸುಡ ವನಚೊ।।3।।

ಆರತೀಯ ಬೆಳಗುವೆ ನರಗೇ — ರಾಗ:ಕಲ್ಯಾಣಿ

ಆರುತೀಯ ಬೆಳಗುವೆ ನರಗೇ ಪಾರ್ಥರಾಯಗೆ।।ಪ।। ಜೊಜಿನೊಳಗೆ ಪಗಡಿಯನಾಡಿ ಪಂಥದಿಂದ ಪಗಡಿಯನಾಡಿ।। ಅರಣ್ಯವಾಸವನ್ನೇ ಬೇಡಿ ಅಜ್ಞಾತವಾಸವನ್ನೇ ಜಯಿಸಿ ಬಂದ ಧೀರಗೆ।।1।। ಇಂದ್ರನೈರಾವತವಾ ಇಳೆಗೆ ತಂದು ಮಾತೆಗೊಪ್ಪಿಸಿದವಗೆ। ಆನಂದದಿಂದ ಪೂಜೆಯ ಮಾಡಿಸಿದಾ ದನಂಜಯನಿಗೆ।।2।। ಚಿತ್ರ ವಿಚಿತ್ರದ್ವಸೆಯೊ ಮೇಲೆ। ಚಿತ್ರಾಂಗನೆಯು ದ್ರೌಪದಿ ಸಹಿತ। ಪುತ್ರರಿಂದ ಕುಳಿತಿರುವವಗೆ। ಪಾರ್ಥರಾಯಗೆ।।3।।

ಆರುತೀಯ ಮಾಳ್ಪೆನಮ್ಮ — ರಾಗ:ಸುರುಟಿ

ಆರುತೀಯ ಮಾಳ್ಪೆನಮ್ಮ ಭಾರತೀಶನಯ್ಯಗೆ। ಶ್ರೀಲಕ್ಷ್ಮೀಪ್ರಿಯನಾದ ಹರಿಗೆ। ಧೀರಗೆ ಗಂಭೀರಗೆ।।ಪ।। ದೂರಧಿ ನಿಂದು ಮುರನ ಕೊಂದ ನರನಿಗೇ ಸುಖ ವರದಗೇ। ಅರಿಯ ಕೊಂದ ತರಳಗೊಲಿದು ದುರುಳರನ್ನು ತರಿದಗೇ।।1।। ಬಾಲನಾಗಿ ಬಾಲಕಿಯರ ಬಹಳ ಹಾಸ್ಯ ಗೈದಗೇ। ಆಲದೆಲೆಯ ಮೇಲೆ ಮಲಗಿದ ಬಾಲಗೆ ಗೋಪಾಲಗೆ।।2।। ಶಂಖುಚಕ್ರಧಾರಿಗೇ ಸುಕುಮಾರಗೇ ಧೀರಗೇ। ಪಂಕಜಗೇ ಗುಣಪೂರ್ಣಗೇ ರಣಧೀರ ಶ್ರೀಕೃಷ್ಣಗೆ।।3।।

"ದಂಪತಿಗಳಿಗೆ"

ಕುಂಕುಮದಾರತಿ ಪಂಕಜಮುಖಿಯರು — ರಾಗ:ಅಭೇರಿ

ಕುಂಕುಮದಾರತಿ ಪಂಕಜಮುಖಿಯರು। ದಂಪತಿಗಳಿಗೆ ಎತ್ತಿದರು।।ಪ।। ಸುರುಚಿರ ವದನೆಗೆ ಸುರವರನೇತ್ರೆಗೆ ಕರಿವರ ಗಮನೆಗೆ ವರಲಕ್ಷ್ಮೀಗೆ ಸುರರಾಪೊರೆವೋ ಹರಿಗೇ ಸಿರಿಗೇ ಸರಸೀಜಾಕ್ಷಿಯರು ನಸುನಗುತಾ।।1।। ಜನಕನ ಮನೆಯಲ್ಲಿ ಧನುವೆತ್ತಿದಾತಗೆ। ಜನಕಸುತೆಯ ಕರ ಪಿಡಿದವಗೆ। ವನಕೆ ತೆರಳಿ ಮುನಿಗಳ ಪಾಲಿಸಿ ದನುಜ ಕಬಂಧಕನ ಕೊಂದವಗೆ।।2।। ತರಳನ ಕಾಯ್ದಗೆ ದುರುಳನ ವೈರಿಗೆ ನರಹರಿರೂಪಗೆ ಹರಿಪ್ರಿಯೆಗೆ।। ತರಳನ ಮೊರೆಯ ಲಾಲಿಸಿ ಭರದಿಂ ಕಾಯ್ದು ದುರುಳನ ಗರ್ವವ ಮುರಿದವಗೇ।।3।।

ಓಂಕಾರ ರೂಪನಿಗೆ ಶಿವನುತ

ಓಂಕಾರ ರೂಪನಿಗೆ ಶಿವನುತ ಪಂಕಜದಳನೇತ್ರನಿಗೆ। ಪಂಕಜ ದಳನೇತ್ರ ಪಾವನ್ನ ಪುರುಷಗೆ ಹ್ರೀಂಕಾರೊಡೆಯ। ಸಾಂಬಶಿವನಿಗೆ ಪಾರ್ವತಾದೇವಿಗೆ ಕುಂಕುಮದಾರತಿಯ ಬೆಳಗಿರೆ।।1।। ಪಾಶುಪತಾಸ್ತ್ರವನು ಪಾರ್ಥಗೆ ಪಾಲಿಸಿ

ಕೊಟ್ಟವಗೆ। ಪಾಪಹಾರಕ ಶಿವಗೆ ಜ್ಯೋತಿರ್ಮಯ ರೂಪನಿಗೆ। ಮೋಕ್ಷದಾಯಕ ಸಾಂಬಶಿವನಿಗೆ ಪಾರ್ವತಾದೇವಿಗೆ ನೂತನದಾರತಿಯ ಬೆಳಗಿರೆ॥2॥

ಮುತ್ತಿನಾರುತಿ ಎತ್ತಿ ದಂಪತಿಗಳಿಗೆ **ರಾಗ: ಸಾರಂಗ**

ಮುತ್ತಿನಾರುತಿ ಎತ್ತಿ ದಂಪತಿಗಳಿಗೆ। ಹಚ್ಚುವೆ ತೈಲ ಶ್ರೀತ್ರಿಮೂರ್ತಿಯ ಶಿರಕೆ॥ಪ॥ ವಾಣಿ ಗಣೇಶನಿಗೊಂದನೆ ಮಾಡಿ। ಶ್ರೀವಿಷ್ಣು ಬ್ರಹ್ಮರುದ್ರರನು ಕೊಂಡಾಡಿ। ಹೇಮಪೀಠಕೆ। ಸತಿಸಹದಯಮಾಡಿ। ಗಂಧತೈಲಬಟ್ಟಲ್ಲಿ ಹದಮಾಡಿ॥1॥ ಗಂಧದಾತೈಲ ಶ್ರೀಗಂಗಾಧರಗೇ। ಸಂಪಿಗೆ ತೈಲ ವರಕಾತ್ಯಾಯಿನಿಗೆ। ಹಿಮಗಿರಿ ತೈಲ ಶ್ರೀರಂಗ ಲಕ್ಷ್ಮೀಗೆ। ಭೃಂಗಾಮಲಕ ತೈಲ ಶ್ರೀ ರಾಮಜಾನಕೀಗೆ॥2॥

ಶರದಿಂದುಮುಖಿಯರು ಒಟ್ಟಾಗಿ **ರಾಗ: ರೀತಿಗೌಳ**

ಶರದಿಂದುಮುಖಿಯರು ಒಟ್ಟಾಗಿ ಮಂಟಪದಿ ಸುಸ್ವರದಿ ಶೋಭಾನವೆನ್ನುತ। ಕರದಿ ಪಿಡಿದ ಮುತ್ತಿನಕ್ಷತೆಯನೆ। ವಧು ವರರ ಹಣೆಯೊಳಿಡುತ। ನೆರೆದು ವಾಸಿಪರೊಳು ಪ್ರೇಮ ಪುರುಷಗೆ। ತಕ್ಕ ತರುಣಿ ಶಹಬಾಶ್‌ಯೆನ್ನುತ್ತ। ವೀಳ್ಯವನು ಕೊಡುತ। ಸ್ಮರನುರತಿ ಸಹಿತವಾಗಿ ಬಂದಿಹ। ಧರಸಿದರು ಸಹಜ ವೇಷವನೆ। ಕರದೊಳಗೆ ದಮಯಂತಿ ನಳನಿಗೆ। ಧರೆಯೊಳಗೆ ಸರಿಕಾಣೆವೆನುತ ಹರಳಿನಾರಾತಿಯ ಬೆಳಗೀರೆ॥1॥ ಮಂದ ಹಾಸದೊಳರವಿಂದ। ಮಲ್ಲಿಗೆಯ ಹೂವೆಂದು ತೋರುವ ಚೆಲ್ವಿನಾ। ಕುಂದದ ಮೊಗ್ಗೆಯ ನೀಡಿಸು ವದನದ। ಇಂದು ಮುಖಿಯರ್ ಅವನ ಸುಂದರಾಂಗಿಯೆ ತಾನು। ಕಾಂತಿ ಕಾಂಚನ ಪ್ರಭೆ। ಅಂದವಾಗಿಹುದೆನ್ನುತ ಕುಂದು ಹೆಚ್ಚೇನು ಕಾಣೆ ಸತಿ ಪತಿಯರ್ ಆದರು ಸಂತೋಷದಲಿ। ಮಂದಹಾಸದೊಳರವಿಂದ ಮಧು ಮಕ್ಕಳನೆ ನೋಡುತ। ಕುಂದಣದಾರುತಿಯನು ಬೆಳಗೀರೆ॥2॥ ಬಾಲೆ ಗೋಪುರವ ಚೆಲ್ವ ರವಿ ಕಾಮಿನಿಯ ತಾಪೋಲ್ವ ಕಾಮನ ಕನ್ನಡಿ। ನೀಲ ಕುಂತಳದ ಬಣ್ಣವ ನೋಡಲಿನ್ನೇನು ಹೇಳಿ ನಾಚುವಳಾರತಿ। ಕಾಳ ಸರ್ಪಗೆ ಸಮವೇಣಿ ಕಟ್ಟಿದರೆ। ವಿಶಾಲ ಮಿತ್ರೆಯರ್ ಸೊಲ್ ಮುಡಿ। ಸತಿಯಾಗ ಬೇಡಿ। ಸಾಲದೆ ಬಿಗಿದಪ್ಪಿದರೆ। ನಳಿ ತೋಳಿನಲ್ಲಿ ಕೈ ಪಿಡಿದ ಪುರುಷಗೆ ಮೇಲೆ ವಿರಚಿಸಿ ಸ್ಥಿರಕಾಲ। ಸುಖದಲ್ಲಿ ಬಾಳಿರಿ ದಂಪತಿಗಳೆನ್ನುತ। ನೀಲದಾರತಿಯ ಬೆಳಗೀರೆ॥3॥

ಆಶೀರ್ವಾದ

ಆದರ್ಶ ದಂಪತಿಗಳಿಗೆ ಆಶೀರ್ವಚನವಿದು **ರಾಗ:ಮೋಹನ**

ಆದರ್ಶ ದಂಪತಿಗಳಿಗೆ ಆಶೀರ್ವಚನವಿದು। ಅಂದ ಚೆಂದದ ಬಾಳ್ವೆ ಇನ್ನು ಮುಂದು ಸಾಗಲಿ। ಗುರಿಹಿರಿಯರಾ ಪ್ರೇಮ ಎಂದೆಂದು ನಿಮಗಿರಲಿ। ಶ್ರೀಹರಿಯ ಕೃಪೆ ನಿಮಗೆ ಸ್ಥಿರವಾಗಿ ತಾನಿರಲಿ। ಆಯುರಾರೋಗ್ಯ ಸಂಪತ್ತು ತುಂಬಿರಲಿ॥1॥ ಶೃಂಗೇರಿ ಶಾರದೆಯ ಬೆಂಬಲ ನಿಮಗಿರಲಿ। ಬಂಧುಬಳಗವು ನಿಮಗೆ ಬಳ್ಳಿಯಂತೆ ಹರಡಲಿ। ಭವ್ಯವಾದ ವದನದೊಳ್ ಮಂದಹಾಸ ತುಂಬಿರಲಿ। ಶಾರದದಾಸಿ ವಂದಿತೆ ದೇವಿಯ ಪರಿಪೂರ್ಣ। ಕೃಪೆಯು ತಾ ಸತತವು ನಿಮಗಿರಲಿ॥2॥

ಆ ವನದಲಿ ಜಾನಕಿ ಇರಲು **ರಾಗ: ಭೂಪಾಲ್**

ಆ ವನದಲಿ ಜಾನಕಿ ಇರಲು। ಕಡುಪ್ರೇಮದಿ ಮುನಿಸತಿಯರು ನೆರೆದು। ಬಾಲನು ಲವ ರಣಧೀರ ಕುಶಗೂ। ಹೊಸ ಹೂವಿನಾರತಿ ಎತ್ತಿ ಬೆಳಗಿ ಆಶೀರ್ವಾದ ಮಾಡಿಸಿದ ಪದವಾ ರಚಿಸುವೆನು॥1॥ ಸತ್ಯದಿಂದಲೇ ನೀ ತುರುಗವ ಕಟ್ಟು। ಯುದ್ಧದಿ ರಘುರಾಮನ ಜೈಸೂ ದುರ್ಜನರೆದೆಯ ರಕ್ಕಸರದಲ್ಲಾಳನೆಂಬೊ। ಆಯೋಧ್ಯೆಯನಾಳುವ ಲವಕುಶರೀರ್ವರಾ। ಅರ್ಜುನನಾ ಜನನೀ ಹರಸಿದಳು॥2॥ ಸಮರದಿಂದಲೇ ನೀ ತುರುಗವ ಕಟ್ಟು. ನೀ ದೊರೆಗಳ

ಯುದ್ಧದಿಂದಲೆ ಜೈಸೂಖಳನ ಅನುಜನ ದಂತವ ನೀ ಛೇದಿಸಿ। ಉಯ್ಯಾಲೆಯನಾಡು। ಎನುತಲೆ ಲವಕುಶರೀರ್ವರ। ಕರಿವದನನ ಜನನೀ। ಹರಸಿದಳು।।3।। ಮಿಸುಣಿ ಅಂದುಗೆ ಗೆಜ್ಜೆಯನಿಟ್ಟು ಅತಿ ಕುಶಲವಾಗಿಹ ತೊಡಿಗೆಯ ತೊಟ್ಟು। ನಸುಲರಳೆಲೆಗಳು ದೆಸೆಗೆ ಪ್ರಜ್ವಲಿಸುತ। ದಶರಥರಾಮರ ತೊಡೆಯಲಿ ನಲಿದಾಡೆಂದು। ಕುಶಲವರ ಸೀತೆ ಹರಸಿದಳು।।4।। ಪಡೆದ ಮಾತೆಯ ವಾಕ್ಯವ ಕೇಳಿ ಮುನಿ ವಾಲ್ಮೀಕಿ ಮುನಿ ಕೃಪೆಯಿಂದಾ। ದೊರೆ ರಾಮಚಂದ್ರರಾ ದಯದಲಿ। ಕಂಡಯ್ಯ। ಆಳಿ ನೀವೇನುತಲೆ ಸುಖಿಯಾಗಿರು ಎಂದು ಜಮದಗ್ನಿ ಜನನೀ ಹರಸಿದಳು।।5।। ರಾಮಧ್ಯಾನವ ಪ್ರೇಮದಿ ಜಪಿಸು। ಸೀತರಾಮರಿಗೆ ನೀ ಅತಿ ಬಲವಾಗು ಪಾಲಿಸು ಬಡವರ ದಯದಲಿ ಕಂಡಯ್ಯ। ಆಳಿ ನೀವೆನುತಲಿ ಸುಖಿಯಾಗಿರು ಎಂದು ವಾಲ್ಮೀಕಿ ಮುನಿಯು ಹರಸಿದನೂ।।6।।

ನಿರುತಾನಂದದಿ ಬಾಳಲೀ

ನಿರುತಾನಂದದಿ ಬಾಳಲೀ ದಂಪತಿಗಳು ।।ಪ।। ನಿರುತಾನಂದದಿ ಬಾಳಿ ನಿರುಪಮ ವಿಭವದಿ। ವರಪುತ್ರರನು ಪೊಂದಿ ಪರಮೋತ್ಸಾಹದಿಂದ ।।1।। ಸುರುಚಿರ ತೇಜೋನಿಧಿ ಲೋಕವ ಬೆಳಗೆ। ವರಸೂರ್ಯದೇವನಂದದಿ ಮಿನುಗುತ ।।2।। ಸತಿಪತಿಯರು ಸರಸದಿ ನಲಿನಲಿಯುತ। ಪತಿತಪಾವನ ಮುದದಿ ಜಗವನು ಬೆಳಗುತ ।।3।।

ಸರ್ವಸೌಖ್ಯವಾಗಿ ಬಾಳಿ — ರಾಗ: ಚಕ್ರವಾಕ

ಸರ್ವಸೌಖ್ಯವಾಗಿ ಬಾಳಿ ಸುಗುಣ ಮಹಿಮರೇ। ಸರ್ವಶಕ್ತನಾಶೀರ್ವಚನದಿಂದ। ಬಾಳಿರಿ।।ಪ।। ಗುರುಹಿರಿಯರ ಕರುಣದಿಂದ ಭರದಿರಂಜಿಸಿ। ಪರಮಕೃಪಾಕರನ ಕರುಣದಿಂದ। ರಾಜಿಸಿ।।1।। ಬಾಲರನ್ನು ಪಡೆದು ಬಲು ವಿನೋದದಿಂದಲೇ। ಮೇಲಾಗಿರುವ ಶೀಲಸೌಭಾಗ್ಯದಿಂದಲಿ।।2।। ಕಾಮಿತಾರ್ಥಗಳನು ಕೊಡುವ ಕಮಲನಯನ ಶ್ರೀರಾಮನ ದಯದಿಂದ ಸುಖಿಸಿ ಕ್ಷೇಮದಿಂದಲೇ।।3।।

ದಂಪತಿಗಳು ಹಸೆಯ ಮೇಲ್ಕುಳ್ಳಿರಲು (ದಂಪತಿಗಳಿಗೆ-ಆಶೀರ್ವಾದ)

ದಂಪತಿಗಳು ಹಸೆಯ ಮೇಲ್ಕುಳ್ಳಿರಲು। ಸಂತೋಷದಲಿ ಸುರಮುನಿಗಳು ನೆರೆದು।।ಪ।। ಮಂತ್ರದಕ್ಷತೆಯನು ಕರದಲಿ ಪಿಡಿದು। ಮನ್ವಂತರ ಕಾಲಕು ಚಂದ್ರಸೂರ್ಯರಾಗಿರಿ। ಎಂದು ಮಂತ್ರದಿ ಮಸ್ತಕದಿ ತಳಿದಾರು। ಮಧುಮಕ್ಕಳ ಹಸೆಮೇಲೆ ಕುಳ್ಳಿರಿಸಿ। ಭರದಿ ಆಶೀರ್ವಾದದ ಪದನವ ಪೇಳುವೆನು। ಸುಜನರು ಕೇಳಿ ಕಿವಿಗೊಟ್ಟು।।1।। ಧನದಲ್ಲಿ ಕುಬೇರನ ಸರಿಯಾಗು। ಬಲದಲ್ಲಿ ಭೀಮ ಪರಾಕ್ರಮಿಯೆನಿಸು। ಗುಣದಲ್ಲಿ ಧರ್ಮರಾಯಗೆ ಮಿಗಿಲಾಗು। ಮನದೇವಿ ಅಖಿಲಾಂಡೇಶ್ವರಿಯ ಕೃಪೆಯಿಂದ ತನಯರನು ಪಡೆದು ಸುಖಿಯಾಗಿರಿ।।2।।

ಆಶೀರ್ವಾದ – ಗಂಡಿಗೆ

ಬಾಲ ಬಲ್ಲಿದನಾಗು

ಬಾಲ ಬಲ್ಲಿದನಾಗು। ಶೀಲ ಸದ್ಗುಣನಾಗು। ಬಾಲಕರಿಗೆ ಶಿರೋಮಣಿಯಾಗೂ। ಕೋದಂಡರಾಮರಾ ದಯಾದಿಂದ।। ಬಾಲಕರಿಗೆ ಶೀರೋಮಣಿಯಾಗು ತಮ್ಮಯ್ಯ। ಸೀತಾರಾಮರ ದಯದಿಂದ ಸುಖಿಯಾಗೂ।।1।। ವಿದ್ಯಾವಂತನಾಗು ಬುದ್ಧಿಶಾಲಿ ನೀನಾಗು। ಒಡೆಯನಾಗು ದಯಾದಿಂದ। ಸಾಧು ಸಜ್ಜನರಿಗೆ ಒಡೆಯನಾಗು ತಮ್ಮಯ್ಯ ಸೀತಾರಾಮರ ದಯದಿಂದಾ ಸುಖೀಯಾಗು।।2।। ದಂಡು ಹಿಂಡೆಂಬಚ್ಚಿಲ। ಮಂದಿ ಕೈ ಸೇರಲೀ। ಕಂಡರಸು ಕೈ ಯ್ಯಾ ಹಿಡಿಯಾಲಿ। ದಯಾದಿಂದ ಕಂಡರಸುಕೈಯ್ಯಾ ಹಿಡಿಯಾಲ್ ಮಂಚಾಲೆಯ ಗುರು ರಾಘವೇಂದ್ರರ ದಯದಿಂದಾ।। ಸುಖೀಯಾಗೂ।।3।।

ಬಲ್ಲ ಬಲ್ಲಿದನಾಗು ಶೀಲ ಸದ್ಗುಣನಾಗು **ರಾಗ:ಆನಂದಭೈರವಿ**

ಬಲ್ಲ ಬಲ್ಲಿದನಾಗು ಶೀಲ ಸದ್ಗುಣನಾಗು ಬಾಲಕರಿಗೆ ಶಿರೋಮಣಿಯಾಗು ಬಹುಕಾಲ। ಬಾಲಕರಿಗೆ ಶೀರೋಮಣಿಯಾಗು ಬಹುಕಾಲ ಕೋದಂಡರಾಮರ ರಾಯರಿಂದ ಸುಖವಿರು ॥1॥ ದುಷ್ಟ ಮರ್ದನನಾಗು ಶಿಷ್ಟಪಾಲಕನಾಗು। ಅಷ್ಟ ಐಶ್ವರ್ಯ ಭಾಗ್ಯದಿಂದ ಸುಖವಿರು। ಶ್ರೇಷ್ಠ ಶ್ರೀರಾಮರ ದಯದಿಂದ ಸುಖವಿರು॥2॥ ಮಾತೆಯ ಭಜಿಸುತ। ತಾತನ ಸ್ಮರಿಸುತ। ಭೂತಳಕ್ಕೆಲ್ಲ ನೀ ದೊರೆಯಾಗು। ಭೂತಳಕ್ಕೆಲ್ಲ ನೀ ದೊರೆಯಾಗು ಬಹುಕಾಲ। ಸೀತಾರಾಮರ ದಯದಿಂದ ಸುಖವಿರು॥3॥ ಊರಿಗುತ್ತಮನಾಗು। ಕೇರಿಯರಿಗೆ ಹಿತನಾಗು। ಸಾರಿ ಬಂದವರಿಗೊಳ್ಳೆಯವನಾಗು।ಸಾರಿ ಬಂದವರಿಗೊಳ್ಳೆಯವನಾಗು। ಬಹುಕಾಲ ಕೋದಂಡ ರಾಮರ ದಯದಿಂದ ಸುಖವಿರು॥4॥

ವೇದವೇದಂಗಳನೋದಿ **ರಾಗ: ತೋಡಿ**

ವೇದವೇದಂಗಳನೋದಿ ಪಂಡಿತನಾಗಿ ಮೇದಿನೀ ಪತಿ ನೀನು। ಆದರವನು ಪೊಂದಿಸುಖಿಸೈ। ಶ್ರೀಕರನಾಗಿ ಸುಖಿಸೈ॥ಪ॥ ಅಶ್ವತ್ಥಾಮಾದ್ರಿಯೋಳೆ ಅಶ್ವರಕ್ಷಣೆಗಾಗಿ। ಶಾಶ್ವತಮಾದಂಥಾ ಅಶ್ವಾರೋಹಣನಾಗಿ॥1॥ ಸರಸ್ವತಿ ಶ್ರೀಲಕ್ಷ್ಮಿ ಪಾದವ ಪೂಜಿಸುತಲೆ। ಗಿರಿಸುತೆ ದಯದಿಂದ ಚಿರಂಜೀವಿ ಎನಿಸುತ್ತ॥2॥

ವಿಜಯಿಸು ಸುಜನಾವನ ಹರಿಯೇ

ವಿಜಯಿಸು ಸುಜನಾವನ ಹರಿಯೇ। ಅಜಸುರ ಸೇವಿತನ ತಗಿರಿಯೇ। ಅಜಪಾಲಕತರಲಸ ಹರಿಯೇ॥ ತ್ರಿಜಗೋದ್ಧಾರಕ ಗುಣ ನಿಧಿಯೇ। ವಿಜಯಿಸು ವಿಜಯಿಸು….॥1॥ ಆಯುವೃದ್ಧಿ ನಿರಪಾಯಗಳೂ। ಮಾಯಾತೀತನ ತೋರಬಲು। ಈ ಅವನಿಯ ಪಾಲಿಸುತ ಬಲು। ಕಾಯಜಪಿತ ನೀ ನಲಿಯುತ ಬಾಳು॥ ವಿಜಯಿಸು ವಿಜಯಿಸು….॥2॥ ನಡೆಗುಣಯಾದೀ ಸತಿಯಳನೂ। ಶತಪತ್ರಾಂಗತ ಕೂಡಿನ್ನು। ಕ್ಷಿತಿಯೊಳಗತಿಶಯ ಸುಖವನ್ನೂ। ಪತಿತಾಪಾವನ ಪಡೆವುದು ನೀನು ವಿಜಯಿಸು….॥3॥

ಸುಕುಮಾರ ಸಂತೋಷವಾಗಿರ್ಪುದಂ

ಸುಕುಮಾರ ಸಂತೋಷವಾಗಿರ್ಪುದಂ॥ಪ॥ ಸುಖಿಯಾಗಿಸರ್ವಾರ್ಥವಂಪೊಂದುದು॥ ನೀ ಸುಖಿಯಾಗಿ ಸರ್ವಾರ್ಥವಂ ಪೊಂದೂ॥1॥ ಗಿರಿಜಾತೆ ಪಾದಬ್ಜವಂಪೂಜಿಸಿ। ಸಕ ಲಾಮನೋರಥವ ಸಂಪಾದಿಸಿ॥2॥ ತರುಣೀಯುನಾಂ ಪೇಳ್ವೆ ಕರುಣಾಕರ ಧರೆಯನ್ನು ಪಾಲೀಸು। ಭೂಪಾಲನೆ ನೀ॥3॥ ನಳ ಚಕ್ರವರ್ತಿಯೂ ನೀನಾಗುತೆ ಸಂತಾನ ಸೌಭಾಗ್ಯ ಆಯುಷ್ಯವಂ ಪಡೆದು॥3॥

ಸುಖಿಯಾಗಿ ಬಾಳು ಚಾಮರಾಜನೇ **ರಾಗ: ಮಾಂಡ್**

ಸುಖಿಯಾಗಿ ಬಾಳು ಚಾಮರಾಜನೇ। ಮೈಸೂರ ಮಹತೇಜ॥ಪ॥ ನರಸಿಂಹಪೀಠಾದಿ। ಸುರರ ಜನಾಂದಾದಿ। ಧರುಣಿಯಂ ಪಾಲಿತ। ವರಮುದ್ದು ಬಾಲರ ಸುರರಂತೆ ತೇಜಪ॥ ಕರದೂ ಸಂರಕ್ಷಿಪ। ರಾಜಿಪ ತೇಜಿಪ। ಮೂರ್ಜಗದರಸಾನೆ॥1॥ ದೇವಾದಿ ಚಾಮುಂಡಿ ಪ್ರತ್ಯಕ್ಷಕರತಾನೇ ಚಾಮಭೂಪಾಂಗನ। ಪ್ರೇಮದ ಪುತ್ರನೆ। ಆ ಮಹಾ ಮೈಸೂರು ಮಹರಾಷ್ಟ್ರದೊಳಿರುವಂಥ। ಸೀಮೆಯೊಳಿರುವಂಥ। ರಾಜಿಪ ತೇಜಿಪ॥2॥ ಪುತ್ರಸಂತಾನವ। ಉತ್ತುಮದಿಂದಲಿ। ಅರ್ಥಿಯೊಳಿರುವೋರು। ಪಿತೃಗಳೆಲ್ಲರು। ತಪ್ಪಾದೆ ಇರುವೋಳು। ವರಲಕ್ಷ್ಮೀ ಮನೆಯಲ್ಲಿ। ತಪ್ಪಾದೆ ಕೊಡುವೋಳು। ವರಾವಕೊಡುವಳಂಬ॥3॥

ಸುಖಿಯಾಗಿ ಬಾಳು ನಳರಾಜ **ರಾಗ: ಶ್ರೀರಾಗ**

ಸುಖಿಯಾಗಿ ಬಾಳು। ನಳರಾಜ ಸತಿಯೊಡನೆ ನಿಶಧ ದೇಶಾಧಿ ತೇಜನೆ।।ಪ।। ದೇವಾ ಕೃಷ್ಣಸ್ವಾಮಿ। ಪ್ರತ್ಯಕ್ಷಕರ್ತನೆ। ಸೀಮೆಯ ಪಾಲಿಪಾ। ಮೂರ್ಜಗದೊಡೆಯನೇ। ಆ ಮಹಾನಿಶಧ। ಮಹಾರಾಷ್ಟ್ರದಲ್ಲಿರುವಂಥ। ಸೀಮೆಯ ಪಾಲಿಪಾ। ಮೂರ್ಜಗದೊಡೆಯನೆ।।1।। ಪುತ್ರ ಸಂತಾನವೂ। ಉತ್ತಮದಿಂದಲೀ। ಅರ್ಥಿಯಿಂದಿರುವರು। ಪಿತೃಗಳೆಲ್ಲರೂ। ತಪ್ಪಾದೆ ಇರುವಳು। ವರಲಕ್ಷ್ಮೀ ಮನೆಯೊಳು। ಭೀಮೇಶಾ ಕೃಷ್ಣನೊ। ಕರುಣಾದಿಂ ಸಲಹುವ।।2।।

ಸುಖಿಯಾಗಿ ಬಾಳು ನೀ **ರಾಗ:ಷಣ್ಮುಖಪ್ರಿಯ**

ಸುಖಿಯಾಗಿ ಬಾಳು ನೀ ಸುಕುಮಾರನೆ। ಚಿರಕಾಲವು ನೀನು ಆಯುಷ್ಯವಂತನಾಗಿ।।ಪ।। ತಂದೆ ತಾಯಿಯರು ವಾತ್ಸಲ್ಯದಿ ನೀ ಬೆಳೆದೆ। ಅಣ್ಣತಮ್ಮಂದಿರ ಜೊತೆ ಪ್ರೀತಿಲಿ ನೀ ಮೆರೆದೆ। ಅಕ್ಕತಂಗಿಯರ ವಾತ್ಸಲ್ಯ ನೀ ಕಂಡೆ। ಆದಿನಾರಾಯಣನ ಆಶೀರ್ವಾದ ನಿನಗಿರಲಿ।।1।। ವಿದ್ಯಾವಂತನಾಗಿ ದೇಶಸೇವೆ ಮಾಡುತ। ಸತಿಸುತರನು ಪಡೆದು ಮತದ ಸಂತಾನದಿ। ತಂದೆತಾಯಿ ಸೇವೆಯೇ ನಿನಗೆ ಶ್ರೀರಕ್ಷೆಯಾಗಲಿ। ಸತಿಸುತರ ಅನುರಾಗ ಸದಾ ನಿನದಾಗಲಿ।।2।।

ಕ್ಷೇಮದೀ ನೀ ಬಾಳು ಬಾಲಕನೇ **ರಾಗ:ಜುಂಜೋಟಿ**

ಕ್ಷೇಮದೀ ನೀ ಬಾಳು ಬಾಲಕನೇ ಭೂಮಿಯನಾಳುವ ಧರ್ಮಜನೇ।।ಪ।। ಬ್ರಾಹ್ಮಣರಿಗೆ ಅನ್ನ ದಾನಗಳು। ಪ್ರೇಮದಿ ಪುಷ್ಪತಾಂಬೂಲಗಳು। ಬಾಲಕರಿಗೆ ಕೊಟ್ಟು ಶಾಲುಗಳು।।ಅ.ಪ।। ಮದುವೆ ಮುಂಜಿ ಶುಭಕಾರ್ಯಗಳು। ಮದುಮಕ್ಕಳು ಹಸೆಮೇಲೆ ಕುಳ್ಳಿರಲು। ಗುರುಗಳಿಗೆ ಶಿರಬಾಗುವರು। ಹಿರಿಯರ ಮಾತನ್ನು ನಡೆಸುವರು। ಇಂದುವದನೆ ಸಹಿತ ಇಂದು ನೀ ಸುಖದೊಳು ಇರು ಎನುತ। ಇಂದ್ರಾದಿ ಮುನಿಯ ಸಹಿತ ಶ್ರೀರಂಗ ಬಂದು ನಿನ್ನ ಹರಸಿದನು।।1।।

ಆಶೀರ್ವಾದ – ಹೆಣ್ಣಿಗೆ

ಅನುಸೂಯ ಆರತಿ ಎತ್ತಿ ಅರುಂಧತಿ

ಅನುಸೂಯ ಆರತಿ ಎತ್ತಿ ಅರುಂಧತಿ ಅಕ್ಷತೆ ತಳೆದು। ಮುತ್ತೆದೆತನ ಸ್ಥಿರವಾಗಿರಲೆಂದು। ಸುಖಿಯಾಗಿರು ಅನುಗಾಲಂ ಹೇ ಸಖಿ ನಿನ್ನ ಸಲಹಲಿ। ಲಕುಮಿಯ ಲೋಲ।।1।। ಗೌರಿ ಪೂಜೆಯ ಮಾಡಿ ಗುರುತರ ಭಕ್ತಿಯೋಳ್। ಪತಿಯ ಸೇವೆಯ ಮಾಡಿ ಅತಿಹಿತಳೆನಿಸೌ।।2।। ಹುಟ್ಟಿದ ಮನೆಗೆ ಉತ್ತುಮಳೆನಿಸೌ। ಕೊಟ್ಟಿರುವ ಮನೆಗೆ ಸಂತಾನವ ನಡೆಸೌ।।3।।

ಗುಣವಂತೆಯಾಗು ದಯಾಶೀಲೆಯಾಗು **ರಾಗ:ಹಂಸಧ್ವನಿ**

ಗುಣವಂತೆಯಾಗು ದಯಾಶೀಲೆಯಾಗು, ಗುಣಮಣಿ ಎನಿಸಿ ಸುಖವಾಗಿ ಬಾಳು। ಸುಂದರಾಂಗಿಯೇ ಸುಖವಾಗಿ ಬಾಳು ಸುಂದರಾಂಗಿಯೇ। ಪತಿ ಪಾದಸೇವೆ ಹಿತದಿಂದ ಮಾಡು, ಸುತರನ್ನು ಪಡೆದು ಸತಿಯಾಗಿ ಬಾಳು। ಗುರು ಹಿರಿಯರ ಮರೆಯದೆ ನೀನು ಹಿರಿಯರ ದಯದಿ ಸ್ಥಿರವಾಗಿ ಬಾಳು।।ಸುಂದರಾಂಗಿಯೇ।।

ಬಾಳೂ ಸಾಗರಾ ಕನ್ನಿಕೇ **ರಾಗ: ಅಭೇರಿ**

ಬಾಳೂ ಸಾಗರಾ ಕನ್ನಿಕೇ ಕಲ್ಯಾಣಿಯೇ।।ಪ।। ಹುಟ್ಟೀದಾ ಮನೇಗೇ ನೀನುತ್ತುಮಾಳೆನಿಸಿಯೆ ಸುಪುತ್ರರಾ ಪಡೆದೂ ನೀ ಬಾಳ್ವುದೈ।।1।। ಪತಿಯೇ ಗತೀ ಎಂದೂ ಮತಿಯೊಳು ತಿಳೀದೂ। ಸಂತಾಸಾದೀ ಪೋಷಿಸುವುದು ಉರ್ವಿಯೊಳ್।।2।। ಅರುಂಧತಿಯಂತೆ ನೀನತಿ ಭಕ್ತಿಯಿಂದಾ। ಪತಿಸೇವೆ ಗೈದು ನೀ ಬಾಳ್ವುದೈ।।3।।

ಮತಿಯುತರು ಪೇಳುವರು ಪುತ್ರಿ **ರಾಗ: ಪೂರ್ವಿಕಲ್ಯಾಣಿ**

ಮತಿಯುತರು ಪೇಳುವರು ಪುತ್ರಿ।।ಪ।। ಸ್ಮೃತಿಯೊಳಿಡು। ನಾ ಪೇಳುವುದನು ಸಾವಿತ್ರಿ ।।ಅ.ಪ।। ಕ್ಷಿತಿಯೊಳಗೆ। ಸದ್ವಂಶವನೂ। ತವಪತಿಯ ವಂಶವ ಉದ್ಧರಿಸಿ। ಸುಚರಿತಯುತೆ ಯೆನಿಸಿ ಬಾಳು। ಪತಿವ್ರತಾಚರಣೆಯೊಳು। ನೀನಿರತಳಾದವಳೆನಿಸಿ। ಸತತವು ಕೀರ್ತಿಯನು ಪಡೆಯೈ।।1।।

ವೃಷ್ಟಿಯನು ಕರೆಯಿರಿ ನೀವ್

ವೃಷ್ಟಿಯನು ಕರೆಯಿರಿ ನೀವ್ ರುಕ್ಮಿಣಿಯ ಪ್ರಿಯನ ಮೇಲ್ ವೃಷ್ಟಿಯನು ಕರೆಯಿರೆ ನೀವ್।। ನಾಕದಲ್ಲಿ ಪ್ರಕಾಶಿಪ ಪಾರಿಜಾತ ಪುಷ್ಪ ತಂದು ಕೋಕಿಲಗಾನೆಯರೆಲ್ಲ ಏಕಕಾಲದಲಿ ನಿಂದು।।1।। ಉಚ್ಚರಿಪ ವೇದವನು ಅಚ್ಚರಿಯಿಂದಲೆ ತಂದ ಅಚ್ಯುತನ ಮಕುಟಕೆ ಅಚ್ಚ ಮಲ್ಲಿಗೆಯ ಹೂವಿನ।।2।। ತಂದೆಯಾಜ್ಞೆಯಾಂತು ಪೋಗಿ ಇಂದುಮುಖಿ ಸೀತೆ ತಂದ ಚೆಂಡಿ ರಾವಣನ್ನಕೊಂದು ನಿಂದು ಬಳಲಿದ ರಾಮ।।3।। ವಾಮಭಾಗದಲ್ಲಿ ನಿಂದು ವಾಮಾಂಗಿಯನೊಡಗೊಂಡು ಕೋಮಲೆಯರೆತ್ತುವಂಥ ಆರತಿಯ ಸ್ವೀಕರಿಸೈ।।4।।

ಸರಸಿಜೋದ್ಭವನರಸಿ ಕರುಣದಿ **ರಾಗ:ವಸಂತ**

ಸರಸಿಜೋದ್ಭವನರಸಿ ಕರುಣದಿ ತರುಣಿ ನೀ ಸುಖಿಯಾಗಿರು। ಪಡೆದ ಜನನೀ ಜನಕರಿಗೆ ನೀ ಪಿಡಿದ ಕನ್ನಡಿಯಂತಿರು।।ಪ।। ಒಡನೆ ಅನುಜನ ಬಂಧು ಬಳಗಕೆ ಮಡದಿ ಮಾಣಿಕ್ಯವೆನ್ನಿಸು।।ಅ.ಪ।। ಅತ್ತೆ ಮಾವನ ಸೇವೆಯನು ಬಹು ಅರ್ಥಿಯಿಂದಲಿ ಮಾಡು ನೀ ಪುತ್ರರನು ಪಡೆ ಹತ್ತು ಮಂದಿಯ ಲಕ್ಷ್ಮೀ ದೇವಿಯ ದಯದಲೀ।।1।। ಪತಿಯ ಸೇವೆಯ ಹಿತದಿ ಮಾಡುತ ಸತತ ಸೌಖ್ಯವ ಹೊಂದು ನೀ। ಪೃಥ್ವಿ ಪಾಲಕನಾಗೆ ಜನರೊಳು ಮಡದಿ ಮಾಣಿಕ್ಯವೆನ್ನಿಸು।।2।।

ಸುಖಿಯಾಗಿರು ಅನುಗಾಲ ಹೇ ಸಖಿ **ರಾಗ:ಕಾಂಭೋದಿ**

ಸುಖಿಯಾಗಿರು ಅನುಗಾಲ ಹೇ ಸಖೀ। ನಿನ್ನ ಸಲಹಲೀ ಲಕುಮಿಯ ಲೋಲಾ।।ಪ।। ಅನುಸೂಯಾರತಿ ಎತ್ತಿ ಅರುಂಧತಿ। ಅಕ್ಷತೆ ತಳೆದು। ಮುತ್ತೈದೆತನ ಸ್ಥಿರವಾಗಲೆನ್ನುತಾ।।ಅ.ಪ।। ಗೌರಿಪೂಜೆಯ ಮಾಡಿ ಉರುತರ ಭಕ್ತಿಯೊಳೂ। ಪತಿಯ ಸೇವೆಗೆ ನೀನು ಅತಿ ಹಿತಳೆನಿಸುತಾ। ಹುಟ್ಟಿದ ಮನೆಗೆ ನೀ ಉತ್ತಮಳೆನಿಸುತಾ। ಕೊಟ್ಟ ಮನೆಗೆ ಸಂತಾನವ ಬೆಳೆಸುತಾ।।1।।

ಸಂತಸದಿ ನೀ ಸುಖಿಯಾಗಿರು **ರಾಗ: ರೀತಿಗೌಳ**

ಸಂತಸದಿ ನೀ ಸುಖಿಯಾಗಿರು। ಶಾಂತಳಾಗಿ ಸರ್ವಕಾಲ।।ಪ।। ಸರಸಿಜಾಕ್ಷಿ ಶಾರದೆಯ। ಪರಮಮಂಗಳೇ ಪಾರ್ವತಿಯು।। ಜನಕಾನಸುತೆ। ಜಾನಕೀಗಿಂತಧಿಕವಾದ। ಪದವಿಯೊಳು।।1।। ಭೂವಿಯೊಳ್ ಸತ್ಯವಾನನ ಸತಿಯು। ಮಾನವಂತೆ ದ್ರೌಪತೀಯು। ತಾರಾ, ಮಂಡೋದರೀ, ಮೈತ್ರಿ ದೇವೀರ್ಗಿಂತಧಿಕ। ಪದವಿಯೋಳ್।।2।। ಬಾಲರನ್ನು ಪಡೆದು। ಪತಿಯ ಸೇವೆಯನು ಮಾಡಿ। ನಿರುತ ಶೀಲವತಿಯಾಗೆಂದು। ಲಕ್ಷ್ಮೀ ಲೋಲನರಸಿ। ಕರುಣದಿಂದ।।3।।

ಸುಂದರಾಂಗಿಯೇ ಸುಖವಾಗಿ ಬಾಳು **ರಾಗ: ಮಾರ್ಗಹಿಂದೋಳ**

ಸುಂದರಾಂಗಿಯೇ ಸುಖವಾಗಿ ಬಾಳು।।ಪ।। ಗುಣವಂತೆಯಾಗು।ದಯಶೀಲೆಯಾಗು। ಗುಣಮಣಿಯೇನೀ। ಅನುರಾಗಪಡೆದು।।1।। ಪತಿಪಾದಸೇವೇ ಹಿತದಿಂದ ಮಾಡು। ಸುತರಾನುಪಡೆದೂ। ಸುಖವಾಗಿ ಬಾಳು।।2।। ಗುರುಹಿರಿಯಾರ। ಮರೆಯಾದೆ ನೀನು ಹಿರಿಯಾರ ದಯದೀ। ಸ್ಥಿರವಾಗಿ ಬಾಳು।।3।।

ಹರಸೀರೆ ನೀವೀಗ ಸರಸೀಜಾಕ್ಷಿಗೇ ರಾಗ: ಕಮಾಚ್

ಹರಸೀರೆ ನೀವೀಗ ಸರಸೀಜಾಕ್ಷಿಗೇ ಬೇಗಾ॥ಪ॥ ಮುತ್ತು ಮಾಣಿಕಾ ನವರತ್ನಾಗಳಿಟ್ಟೂ ಬೇಗಾ। ಅತ್ತೆ ಮಾವನಾಜ್ಞೆಯಾ ಮತ್ತೇ ಮೀರಾದಿರೂ॥1॥ ಗಂಧ ಕುಂಕುಮಾ ಪುಷ್ಪಾದಿಂದಾ ಲಂಕೃತಳಾಗೀ। ಕಂದಾರ ಪಡೆದೂ ಸುಖದಿಂದಾ ಬಾಳೆಂದೂ॥2॥ ಬಗೆ ಬಗೆಬಾಲೇರೂ ಭಾಗ್ಯಸಂಪನ್ನೇರೂ। ನಗುತಾ ಶ್ರೀಲಕ್ಷ್ಮೀಗೇ ಸುಖದಿಂದ ಇರು ಎಂದೂ॥3॥

ಹುಟ್ಟಿದ ಮನೆಗೇ ಮಾಣಿಕ್ಯವಾಗು ರಾಗ:ಮಾಯಾಮಾಳವಗೌಳ

ಹುಟ್ಟಿದ ಮನೆಗೇ ಮಾಣಿಕ್ಯವಾಗು। ಕೊಟ್ಟ ಮನೆಯ ಹೆಸರನು ನಡೆಸು। ಅಷ್ಟೈಶ್ವರ್ಯವು ಅನುದಿನ ನಡೆಸು। ಲಕ್ಷ್ಮೀದೇವಿಯ ಕಟಾಕ್ಷದಿ ಪೇಳುವೆ।ಮುತ್ತೈದೆಯಾಗಿ ಸುಖಿಯಾಗು॥1॥ ಮಾನಿನಿಯರ ಕುಲರತ್ನವೆಂದೆನಿಸಿ। ಮನೆವಾರ್ತೆಯಲಿ ಪ್ರಬುದ್ಧೆಯೆಂದೆನಿಸಿ। ದಾನ ಧರ್ಮದಿ ಪುಣ್ಯದ ಸತಿ ನೀ ಎನಿಸಿ। ಅರುಂಧತಿ ಸರಸ್ವತಿ ದಯದಲಿ। ಸಾವಿತ್ರಿಯಾಗು ಸುಖಿಯಾಗು॥2॥ ಪತಿವ್ರತೆಯರ ಕುಲರತ್ನವೆಂದೆನಿಸಿ। ಪತಿಯ ವಾಕ್ಯವ ನಡೆಸುವ ಸತಿ ಎನಿಸಿ। ಅತಿಥಿ ಸೇವೆಯ ಅಂಗನೇ ನೀ ನಡೆಸಿ। ಅತಿ ಹಿತದಿಂದ ಮತಿವಂತೆ ತಾಯಮ್ಮನೀ। ಸುತರನ್ನೇ ಪಡೆದು ಸುಖಿಯಾಗು॥3॥

ಹುಟ್ಟಿದ ಹಬ್ಬಕೆ ಒಲುಮೆಯ (ಹುಟ್ಟಿದ ಹಬ್ಬಕ್ಕೆ) ರಾಗ: ಕಾಂಭೋದಿ

ಹುಟ್ಟಿದ ಹಬ್ಬಕೆ ಒಲುಮೆಯ ಹರಕೆ। ಹರುಷದಿ ಬಾಳು ವರುಷ ನೂರು॥ಪ॥ ನವ ಚೈತನ್ಯದ ಚಿಲುಮೆ ನೀನಾಗು। ಆನಂದದ ಹಾಲಾದರೆ ನೀನಾಗು। ಶಾಂತಿ ಸಹನೆಗಳ ತವರೆ ನೀನಾಗು। ಆಗು ಸಕಲರಲೂ ಸವಿ ಜೇನಾಗು॥1॥ ಲೇಸನೆ ಕಾಣಲಿ ನಿನ್ನಯ ಕಣ್ಣುಗಳು। ಲೇಸನೆ ಕೇಳಲಿ ನಿನ್ನಯ ಕಿವಿಗಳು। ಲೇಸನೆ ನುಡಿಯಲಿ ನಿನ್ನಯ ನಾಲಿಗೆ। ಲೇಸುಲೇಸಾಗಿಯೇ ಬಾಳು ನೀ ಬಾಳು॥2॥

ಕ್ಷೇಮವಾಗಿ ಬಾಳು ನೀ

ಕ್ಷೇಮವಾಗಿ ಬಾಳು ನೀ ಶ್ಯಾಮಸುಂದರೀ। ಪ್ರೇಮದಿಂದ ಹರಸುವರು। ಕಾಮಿನೀಯರು॥ ಪ॥ ಬಾಲರನು ಪಡೆದು। ಭಾಗ್ಯವಂತಳಾಗುನೀ। ಭಾಮಾಮಣಿಯೆ ಸೌಖ್ಯವಂತಳಾಗುನೀ॥ ನೇಮ ನಿಯಮದಿಂದ। ಕೂಡಿ ಧನ್ಯಳಾಗುನೀ। ಪ್ರೇಮದಿಂದ ಪತಿಯ ಕೂಡೆ ಬಾಳು ನಡೆಸು ನೀ॥1॥ ನಿತ್ಯ ನೇಮದಿಂದ ನೀತಿ ವಂತಳಾಗುತಾ। ಸತ್ಯ ಶಾಂತಿ ಸಹನೆಯಿಂದ। ಕೂಡಿ ಬಾಳುತಾ॥ ಅರ್ತಿಯಿಂದ ಹಿರಿಯರನ್ನು ಆದರಿಸುತಾ। ಭಕ್ತಿಯಿಂದ ದೇವರನ್ನು ಮನದಿ ಭಜಿಸುತಾ॥2॥

'ಬೀಗರಿಗೆ ಆತಿಥ್ಯ'

ಪ್ರಾರ್ಥನೆ – ಗಂಡಿನವರು ಮತ್ತು ಹೆಣ್ಣಿನವರು ಒಟ್ಟಿಗೆ ವಿನಾಯಕನ ಪ್ರಾರ್ಥನೆ

ಸಿದ್ಧಿವಿನಾಯಕನೆ ಸಾಧ್ಯವನು

ಸಿದ್ಧಿವಿನಾಯಕನೆ ಸಾಧ್ಯವನು ಮಾಡಯ್ಯ। ಮುದ್ದು ಸರಸ್ವತಿ ನೀ ಎನಗೆ ವರಗಳನಿತ್ತು॥ ಭ್ರಷ್ಟ ಬೀಗರ ಮುಂದೆ-ಆಹಾ-ಉದ್ದಾರ ಮಾಡೆ ವಿದ್ಯಾಭಿಮಾನಿ ಪಾಲಿಸೆ ಶಾರದಾದೇವಿ॥ ಲಾಲಿಸು ಈ ಸಭೆಯಲಿ ಆಹಾ ಲಾಲಿಸೆ ಪಾಲಿಸೆ ಈ ದೀನ ಬೀಗರನ್ನೆಲ್ಲಾ। ಸೋಲಿಸೆ, ಎನಗೆ ನೀ ಜಾಣತನವನಿತ್ತು। ಪಾಲಿಸೆ ಎನ್ನ ಶಾರದ ದೇವಿ॥1॥ ಪಂಥಕೆ ಬೀಗರು ಬರಲಿ, ಅವರೆಂಥಾ ಗಟ್ಟಿಗರಾಗಿರಲಿ, ಅವರ ಸೇನೆಗಳೆಲ್ಲಾ ಬರಲಿ ಪಂಥದಿ ಸೋಲಿಸಿ ಎಂಥವರಾದರೂ ಸಂತೋಷಪಡಿಸು ಸರಸ್ವತಿ ದೇವಿ॥2॥ ರಕ್ಷಿಸೆ ಸಕಲ ಜಗದುದ್ಧಾರಿ ಎನ್ನ ರಕ್ಷಿಸೆ ಸಕಲ ಜನಕುಪಕಾರಿ। ರಕ್ಷಿಸೆ ಎನ್ನ ನೀ ಬೀಗರ ಮುಂದೆ, ರಕ್ಷಿಸು ಎನಗೆ ನೀ ಜಾಣತನವನಿತ್ತು॥3॥

ಹೆಣ್ಣಿನವರು ಬೀಗಿತ್ತಿಗೆ ಪರಾಕ್ ಹೇಳುವುದು

ಶ್ರೀಮದ್ ಜಂಭಗಾತಿ, ಜಗಳಕ್ಕೆ ನಿಂತರೆ, ಅತ್ತೆಗೆ ಹೆದರದೆ ಗಂಡಗೆ ಬಾಗದೆ ಇರೋ ಮಹಾ ಸತೀ ಪರಾಕ್ ಬಹು

ಪರಾಕ್।। ಭಾವಾಜಿಗಾಗೋ, ಶಿರೋಮಣಿ, ಮಂಡಗೂದಲು, ಉಬ್ಬಿದಗಲ್ಲ, ಸೊಟ್ಟ ಮೂಗು, ಪುಟ್ಟ ಹಣೆ, ಉದ್ದ ಕುತ್ತಿಗೆ, ದೊಡ್ಡ ಪಾದಗಳಿಂದ ರಾರಾಜಿಸುವ ಜಾಣೆ।।1।। ಮಂಡಿಗೆ ಮಹಾ ಉಷ್ಣ, ಚಕ್ಕುಲಿ ತಕ್ಕುದ್ದಲ್ಲ, ತುಪ್ಪ ಕೇಳೋದಿಲ್ಲ, ಶ್ಯಾವಿಗೆ ಸೇರೋದಿಲ್ಲ। ಮುಂಜಾನೆದ್ದು ತಂಗಳನ್ನ ತಿನ್ನೊ ಚಿಕ್ಕತ್ತಿ, ಪುಟ್ಟತ್ತಿ, ಬೀಗಿತ್ತಿ। ಪರಾಕ್ ಬಹು ಪರಾಕ್।।

ಪರಾಕ್ ಹೇಳಿ ಬೀಗಿತ್ತಿಯನ್ನು ಬರಮಾಡಿಕೊಳ್ಳುವುದು

ಬಾರೇ ಬಾರೇ ಬೀಗಿತ್ತಿ ಯಾಕ್ ಓರೆಗಣ್ಣಲ್ ನೋಡುತ್ತಿ(2ಸಲ)। ಕುಂಕುಮ ಹಚ್ತಿನ್ ಬಾರೆ ನಿನ್ನ ಉಬ್ಬು ಹಣೆಯನ್ ತೋರೆ। ಕುಂಕುಮ ಹಚ್ತೀನ್ ಹಚ್ತೀನಂದ್ರೆ ಎದ್ದು ಬಿದ್ದು ಓಡುತ್ತಿ। ನೀ ಎದ್ದು ಬಿದ್ದು ಓಡುತ್ತಿ।।1।। ಅರಿಸಿನ ಹಚ್ತೀನ್ ಬಾರೆ ನಿನ್ನ ಸೊಟ್ಟ ಕಾಲ್ಗಳನ್ನು ತೋರೆ। ಅರಿಶಿನ ಹಚ್ತೀನ್ ಹಚ್ತೀನಂದ್ರೆ ಹಾರಿ ಹಾರಿ ಹೋಗುತ್ತಿ ನೀ ಹಾರಿ ಹಾರಿ ಹೋಗುತ್ತೀ।।2।। ಗಂಧ ಹಚ್ತೀನ್ ಬಾರೆ ನಿನ್ನ ಒಂಟೆ ಕತ್ತನ್ ತೋರೆ। ಗಂಧ ಹಚ್ತೀನ್ ಹಚ್ತೀನಂದ್ರೆ ಓಡಿ ಓಡಿ ಹೋಗುತ್ತಿ ನೀ ಓಡಿ ಓಡಿ ಹೋಗುತ್ತಿ।।3।। ಹೂವು ಮುಡುಸ್ತೀನ್ ಬಾರೆ ನಿನ್ ತರಕಲ್ ತಲೆಯ ತೋರೆ। ಹೂವ ಮುಡುಸ್ತೀನಂದ್ರೆ ಎದ್ದು ಬಿದ್ದು ಓಡುತ್ತಿ ನೀ ಎದ್ದು ಬಿದ್ದು ಓಡುತ್ತಿ।।ಬಾರೆ।।4।।

ಹಳಿಯೋದು

ನಾವಿದನರಿಯಲಿಲ್ಲ ಈ ತರಳೆಯ

ನಾವಿದನರಿಯಲಿಲ್ಲ ಈ ತರಳೆಯ ದೇವರೆ ಬರೆದನಲ್ಲಾ ... ಈ ವಧುವನು ಕೂಡಿ ಯಾವ ಪರಿಯೊಳೆಮ್ಮಾ ಕೋವಿದ ಬಾಲಕ ಜೀವಿಸಿದಪನಿನ್ನು।।ಪ।। ಕಣ್ಣಿಗೆ ರೂಪವಿಲ್ಲಾ.. ಮೈಯೊಳಗೆಲ್ಲಾ ಮಣ್ಣು ಕುಂತಿರುವುದಲ್ಲಾ... ಸಣ್ಣವಳಲ್ಲಾ ಚಿಣ್ಣಗೆ ಸರಿಯಿಲ್ಲಾ... ಬಣ್ಣಿಸಲೆನ್ನಿಂತ ಹೆಣ್ಣು ದೊರಕಿತಲ್ಲಾ..।।1।। ವರುಷವೆಂಟಾದ ಬಾಲೆ ಉತ್ತಮಳನ್ನು ತೊರೆವುದು ಶಾಸ್ತ್ರಮೇರೆ, ವರುಷ ಚತುರ್ದಶ ಭರತವಾಗಿತು ಕಂಡ ಜನರೆಲ್ಲಾ ನಗುವಂತ ಪರಿಯಾಗಿತೆಮ್ಮನು।।2।। ಕೆಲಸವನರಿಯಳಂತೆ.. ಹೇಳಿದ ಮಾತು ತಿಳಿಯದಂತಿವಳು ಮತ್ತೆ ಅಲಸದೇ ನೆರೆಮನೆಗಳಲಿ ತಿರುಗಿ ದೊಡ್ಡ ಕಲಹವನನುದಿನ ಗಳಿಸಿಕೊಂಬವಳಂತೆ।।3।। ಭಯಭಕ್ತಿ ಮಾರ್ಗವಿಲ್ಲಾ.. ಕಂಡವರೊಳು ನಯನುಡಿಯೆಂಬುದಿಲ್ಲಾ... ಬಯಲಾಗ ಹಾಸ್ಯ ದುಃಖಿಯೊಳಿದ್ದ ವಧುಪರಿಣಯವಾದಳೀಶನ ಆಜ್ಞೆಯಳೆಮ್ಮ ಚೆಲುವಗೆ।।4।। ವೇದಶಾಸ್ತ್ರಂಗಳನೂ...ಪುರಾಣದ ಭೇದಾಭೇದಂಗಳನೂ...ಸಾಧು ಗಳೊಲವಿಂದ ರೋದಿ ಕಲಿತು ದಿಟನಾದ ಕುಮಾರನಿಗೆ ಧಾರೆಯಾಯಿತು।।5।। ಬಾಲಹುಟ್ಟಿದನೆನುತಾ... ನಮ್ಮನೆಯಲ್ಲಿ ಬಹಳ ಸಂತೋಷವ ತಾಳುತಾ...ಮೇಲಾದ ವಿದ್ಯೆ ವಿಶಾಲವ ಕಲಿತಿಹ ಶೀಲನಿಗಿಂತ ದುಶೀಲೆ ಸಿಕ್ಕಿದಳೆಂದು।।6।। ಅತುಳ ಬಲಾನ್ವಿತನು ನಮ್ಮಗನು ರತಿಪತಿ ಸಮರೂಪನೂ...ಕ್ಷಿತಿಯ ಜನರಿಗೊಂದು ರತುನವಾತನಿಗಿಂತ ಮತಿಯಿಲ್ಲದಂಗನೆ ಸತಿಯಾದಳೀದಿನ।।7।।

ಬೀಗರಹಾಡು - ಹೆಣ್ಣಿನವರು ರಾಗ : ಕಾಮಾಚ್, ಏಕತಾಳ

ಲಜ್ಜೆಯಿಲ್ಲವೇ ನಿನಗೆ ಬೀಗಿತ್ತಿಯೇ।।ಪ।। ಲಜ್ಜೆಯಿಲ್ಲವೆ ಹುಳಿ। ಗೊಜ್ಜು ಪಾಯಸ ಭಕ್ಷ್ಯ। ಮಜ್ಜಿಗೆ ಪಳದ್ಯಗಳ। ಬೊಜ್ಜು ಬೆಳೆವಂತೆ ತಿಂದು।।1।। ಲಾಡು ಚಿರೋಟಿಯ । ಗೂಡೆಗಳನು ಖಾಲಿ। ಮಾಡಿ ಮೇಯ್ದೆಯಲ್ಲೇ। ಖೋಡಿ ದೂಷಿಪೆಯಲ್ಲೇ।।2।। ನೀರಕುಡಿಯುವಂತೆ। ನೂರು ದೊನ್ನೆಯ ತುಂಬಾ। ಖೀರ ಕುಡಿದು ಮತ್ತೆ। ಹೋರಾಡುವೆಯ ಛೀ।।3।।

ಬೀಗರ ಹಾಡು-ಗಂಡಿನವರು ರಾಗ : ಮೋಹನ, ಏಕತಾಳ

ತಟುಕು ತಟುಕು ಬಡಿಸಿರೆಂದು। ಚಿಟಿಕೆ ಹಾಕಿ ನಡೆದಳು।।ಪ।। ಅನ್ನ ಬಡಿಸುವೋರ ಕಂಡು। ಸನ್ನೆ ಮಾಡಿ

ಕರೆದಳು।।ಪ।। ಸಣ್ಣದಾಗಿ ಕೈಯ ಮಾಡಿ। ಸಣ್ಣದಾಗಿ ಕೈಯ ಮಾಡಿ ಬಡಿಸಿರೆಂಬಳು।।1।। ತುಪ್ಪ ಬಡಿಸುವೋರ ಕಂಡು। ಚಪ್ಪಾಳಾಕಿ ಕರೆದಳು। ಒಪ್ಪವಾಗಿ ತುಪ್ಪವನ್ನು ಬಡಿಸಿರೆಂಬಳು।।2।। ಹಾಲು ಬಡಿಸು ವೋರ ಕಂಡು। ಮೇಳವೀಸಿ ಕರೆದಳು। ಹಾಲಿಗೆ ನೀರನ್ನು ಬೆರೆಸಿ ಬಡಿಸಿರೆಂಬಳು।।3।।

ಬೀಗರ ಹಾಡು – ಗಂಡಿನವರು **ರಾಗ: ಶಂಕರಾಭರಣ ನೋಟ್**

ನಾವೇನ್ ವರದಕ್ಷಿಣೆ ಕೇಳೋದಿಲ್ಲ। ನೀವೇನ್ ಸಾಲಮಾಡಿ ತರಬೇಕಿಲ್ಲ ।।2ಸಾರಿ।। ವರನುಪಚಾರ ಮಾತ್ರ ಮಾಡ್ಲೇಬೇಕು। ಮರೆಯದ ರೀತಿ ಕೇಳಿದ್ನ ಕೊಟ್ರೆ ಸಾಕೆ ಸಾಕು।। ಉಡಕ್ಕೊಂದು ಹಳದಿ ಮೊಗಟ, ಆಗಲೇ ಬೇಕು, ಅದರೊಳ್ಗೆ ಜರಿ ಅಂಚು ಇರ್ಲೇಬೇಕು।। ಹೊದಿಯಕ್ಕೊಂದು ಜರಿ ಮೊಗಟ ಕೊಡ್ಲೇಬೇಕು। ಅದರ ಜೊತೆಗೆ ಗಿಳಿಯ ಹಸಿರು ಶಾಲು ಇರ್ಲೇಬೇಕು।।ಪೂಜಾ ಸಂಧ್ಯಾವಂದನೆ ಮಾಡೋದಕ್ಕೆ, ತಾಜಾಬೆಳ್ಳಿ ತಟ್ಟೆ ಚೊಂಬು ಲೋಟ ಸಾಕು। ಚಿನ್ನದ ಉಂಗುರ ಬಲಗೈಗೆ ಆಗ್ಲೇಬೇಕು, ವಜ್ರದ ಹರಳು ಮಧ್ಯದಲ್ಲಿ ಇರ್ಲೇಬೇಕು।। ಹೆಂಡ್ತಿಜೊತೆ ಶಾಪಿಂಗ್ ಹೋಗ್ಲಿಕ್ ಕಾರೊಂದು ಬೇಕು, ಖಂಡಿತ ನೀವು ಮರೆಯದ ರೀತಿ ತರ್ಲೇಬೇಕು। ಆಫೀಸ್ ವರ್ಕಿಂಗ್ ಸೂಟುಗಳೆರಡು ಕೊಡ್ಲೇಬೇಕು, ಕಾಫಿಕಲರ್ ನಿಂದ ಅದು ಕೂಡಿರಬೇಕು।। ರಾತ್ರಿ ಮಲಗಕ್ಕೆ ಡನ್‌ಲಪ್ ಹಾಸಿಗೆ ಬೇಕೆ ಬೇಕು। ಅದಕ್ ತಕ್ಕ ಡಬಲ್ ಕಾಟ್ ಕೊಡ್ಲೆಬೇಕು।। ನಾವೇನೋ ಕೇಳೋದೇನೋ ಕೇಳೆ ಬಿಟ್ವಿ। ನೀವ್ ಮಾತ್ರ ಹಾಕೋ ನಾಮ ಹಾಕೆ ಬಿಟ್ರೆ।।

ಹೆಣ್ಣಿನವರು **ರಾಗ:ಶಂಕರಾಭರಣ**

ನಾವ್ ನಿಮ್ಮನ್ನು ಹೆಚ್ಚಿಗೆ ವಸ್ತು ಕೇಳೋದಿಲ್ಲ। ಮನಸ್ನಾಗೆ ಕೋಪವನ್ನು ಮಾಡಬೇಡಿ। ಕಾಲ್ಗೊಂದು ಗಟ್ಟಿಬಳೆ ಬೇಕೇ ಬೇಕು। ಅದಕ ತಕ್ಕ ಮುತ್ತಿನ ಚೈನು ಇರಲೇಬೇಕು। ತಲೆಗೊಂದು ಕೆಂಪಿನ ನಾಗರು ಹಾಕ್ಲೇಬೇಕು। ಜೊತೆಗೊಂದು ಚಿನ್ನದ ಕುಚ್ಚು ತರಲೇ ಬೇಕು। ಕಿವಿಗೊಂದು ವಜ್ರದ ಓಲೆ ಅಷ್ಟೇ ಸಾಕು। ಅದಕ್ಕೊಪ್ಪುವ ಕೆನ್ನೆ ಸರಪಣಿ ಬೇಕೇ ಬೇಕು। ಕೊರಳಿಗೊಂದು ಚೈನ್ ಅಡ್ಡಿಗೆ ಇರ್ಲೇಬೇಕು। ಜೊತೆಗೊಂದು ಲಾಂಗ್‌ಚೈನ್ ಕೊಡ್ಲೇಬೇಕು। ಕೈಗೊಂದು ಹರಳಿನ ಬಳೆ ಹಾಕ್ಲೇಬೇಕು। ಪಕ್ಕಕ್ಕೆರಡು ಬೊಂಬಾಯಿ ಬಳೆ ತೊಡಿಸ್ಲೇ ಬೇಕು। ಸೊಂಟಕ್ಕೊಂದು ಚಿನ್ನದ ಡಾಬು ಮಾಡಿಸ್ಲೇಬೇಕು। ಉಡೋಕ್ಕೊಂದು ಜರತಾರಿ ಟಿಷ್ಯು ಸೀರೆ ಕೊಡ್ಲೇಬೇಕು।। ಮದರಾ ಸಿಂದ ಮೋಟಾರ್ ಗಾಡಿ ತರಸ್ಲೇಬೇಕು। ನಾವು ನೀವು ಕೂತು ವಾಕಿಂಗ್ ಹೊರಡ್ಲೇ ಬೇಕು।।

ಗಂಡಿನವರು

ತಂದಾನ ತಾನ, ತಾನಿ ತಂದಾನ, ತಂದಾನಿ, ಹೋಯ್ ತಂದಾನ। ಕಂಡಿರಾ ನೀವು ಕಂಡಿರಾ।? ಕಂಡಿರಾ ಇಂಥ ಕಪ್ಪು ಬೀಗರನ್ನು ಕಂಡಿರಾ। ನೀವು ಕಂಡೀರಾ। ಕಸ್ತೂರಿಯನ್ ಹೋಲೋರು ಕಾಡಿಗೆಯ ಜರಿಯೋರು, ಕಾಡೆಮ್ಮೆ ಮರಿಯಂತೆ ಮಿಂಚೋರು। ಮದುವೆ ಮಂಟಪದಲ್ಲಿ ರಾರಾಜಿಸುತ್ತಿರುವೋರು। ಬಳಗಾವ ನೋಡಿದ್ರೆ ಭಯವಾಗ್ತುದು ಇವರ ಬಳಗಾವ ನೋಡಿದ್ರೆ ಭಯವಾಗ್ತುದು।।1।। ಸಾದನ್ನೇ ಹೋಲೋರು ಕರಿಮಣಿಯ ಓರಿಯೋರು, ಹರಳೆಣ್ಣೆ ಕೊಡದಂತೆ ಮಿಂಚೋರು। ಮದುವೆ ಮಂಟಪದಲ್ಲಿ ರಾರಾಜಿಸುತ್ತಿರುವೋರು। ಬಳಗಾವ ನೋಡಿದ್ರೆ ಭಯವಾಗ್ತುದು।।2।।

ಹೆಣ್ಣಿನವರು

ಎಲ್ಲಿಂದಾರಿಸಿ ತಂದೀರಿ ಇವನಾ ಜೋಲು ಬಾಯಿಯ ಈ ವರನನ್ನು ಮುಖವನ್ನು ನೋಡಿದ್ರೆ ಬಗೆಬಗೆ ಹುಳುಕು, ಮೈಯೆಲ್ಲಾ ನೋಡಿದ್ರೆ ಬರೀ ಕೊಳಕು। ಯಾರ ಪುಣ್ಯವೊ ಇದು ನಾ ಬೇರೆ ಕಾಣೆ।। ಎಷ್ಟೋ ಜಾತಕಗಳ ತರಿಸಿದ್ದಿರೇನು? ಎಷ್ಟೋ ವರಗಳ ಕರೆಸಿದ್ದಿರೇನು। ಒಪ್ಪಲಿಲ್ಲ ನೀವು ಕರೆತಂದ್ರಿ ಇವನಾ ಒಪ್ಪಲಿಲ್ಲ ನೀವು ಕರೆತಂದ್ರಿ

ಇವನಾ।।2।।ಬ್ರಹ್ಮ ಸೃಷ್ಟಿಲಿ ಚೋದ್ಯಾವ ನೆನೆಸಿದಾ ಇವನಾ ತಂದಿದ್ದೀರಿ ಒಪ್ಪುವುದ್ಹೇಗೆ ಚೆಂದುಳ್ಳಿ ಚೆಲುವೇ ನಮ್ಮನೇ ಹುಡುಗಿ, ಇವಳಿಗೆ ಇಂತಾ ವರನನ್ನು ತರುವುದೇ ಎಲ್ಲಿಂದಾರಿಸಿ।।3।।

ಬೀಗರೊಳ್ಳೆಯವರೆಂದು ನಾವು

ಹೆಣ್ಣಿನ ಕಡೆ:- ಬೀಗರೊಳ್ಳೆಯವರೆಂದು ನಾವು ಹೆಣ್ಣ ಕೊಟ್ಟೆವೂ। ಬೀಗರ ಚೆಂದವ ನೋಡಿ ನಾವು ಬೆಂದು ಹೋದೇವೂ(2) ಒಂದೊಂದು ಮಾತಿಗೂ ಜಗಳವ ತೆಗೆದರು ಈಗಲೇ ಈರೀತಿ ಮುಂದ್ಹೇಗೆ ಬಾಳೋದು ಈ ಮಂದಿ ಜತೆಯಲಿ ಆಯ್ತಲ್ಲ ಒಳ್ಳೆ ಫಜೀತಿ। ನಮ್ಗೆ ಆಯ್ತಲ್ಲ....।।

ಗಂಡಿನಕಡೆ:- ಬೀಗರೊಳ್ಳೆಯವರೆಂದು ನಾವು ಇಲ್ಲಿಗೆ ಬಂದೇವೂ। ಬೀಗರ ಚೆಂದವ ನೋಡಿ ನಾವೂ ಬೇಸರಗೊಂಡೇವೂ ನಾವೂ(2) ದೂರದ ಊರಿಂದ ಬಂದೆವು ನಾವು। ಬಸವಳಿದೂ ಬೆವರೀ ಕೇಳೋರೆ ಇಲ್ಲದ ಕಂಗಾಲಾದೆವು। ಏನಮ್ಮ ಬೀಗರು ಈ ಪರೀ ಇದು ಏನಮ್ಮ (2)

ಹೆಣ್ಣಿನ ಕಡೆ:- ರಾಮ ರಾಮ ರಾಮ ನಮ್ ಬೀಗಿತ್ತಿ ಜಾಣೆ ಬೀಗಿತ್ತಿ ಜಾಣೆ। ನಮ್ ಬೀಗಯ್ಯ ಕೋಣ ಬೀಗಿತ್ತಿ ಉಣ್ಣೋದು ಸಣ್ಣಕ್ಕಿ ಅನ್ನವಂತೆ। ಬೀಗಯ್ಯ ಉಣ್ಣೋದು ರಾಗಿಯ ಮುದ್ದೆ। ಬೀಗಿತ್ತಿ ಉಡೋದು ಪಟ್ಟೆಯ ಸೀರೇ। ಬೀಗಯ್ಯ ಉಡೋದು ಕಂಬ್ಳಿಯ ಬೊಂತೇ।।

ಗಂಡಿನ ಕಡೆ: – ರಾಮ ರಾಮ ರಾಮ ಈ ಬೀಗ್ರೇಂಥವ್ರಮ್ಮಾ। ಬೀಗ್ರೆಂಥವ್ರಮ್ಮಾ ನಮ್ಮ್ ಬೀಗ್ರೆಂಥವ್ರಮ್ಮಾ। ಅರಶಿನವು ಮುಖವೆಲ್ಲ। ಮೇಕಪ್ಪೆ ತಿಳಿದಿಲ್ಲ। ಹಳ್ಳಿ ಗುಗ್ಗುಗಳಂತೆ ಕಾಣ್ತಾರೆ ಇವರೆಲ್ಲಾ।।

ಹೆಣ್ಣಿನ ಕಡೆ:- ಬಂದಳಮ್ಮ ಬಂದಳಮ್ಮ ಬೀಗಿತ್ತಿ ಬಂದಳಮ್ಮ ಮಾತಿನಲ್ಲಿ ಬಲು ಘಾಟಿ ಇವಳು ಬಹಳ ಜಗಳಗಂಟಿ ಆನೆಯಂತೆ ದಂತ, ನಗಾರಿಯಂತೆ ಟೊಂಕ, ಬೆಳ್ಳುಳ್ಳಿ ತುರುಬೂ, ಕಣ್ಣಲೊಂದು ಐಬೂ.

ಗಂಡಿನ ಕಡೆ:- ಬಂದಳಮ್ಮ ಬಂದಳಮ್ಮ ಬೀಗಿತ್ತಿ ಬಂದಳಮ್ಮ। ಬಾತಿನಂತೆ ಕತ್ತೂ। ತೋರಿ ಒಣಗತ್ತು। ಮೈಲುದ್ದದ ಬಾಯಿ, ಜೋತುಬಿದ್ದ ಕಿವಿ। ಗೂಬೆಯಂತ ಕಣ್ಣು ಗೂನು ಬಿದ್ದ ಬೆನ್ನು।।

ಹೆಣ್ಣಿನ ಕಡೆ:- ನೂರು ಜನ ಅಂದ್ರಿ ನಾನೂರು ಜನ ಬಂದ್ರಿ। ಹೊಟ್ಟೆಗಿಲ್ದೋರ್ ತರ ಎಲ್ಲಾ ತನ್ನಿ ತನ್ನಿ ಅಂದ್ರೀ। ನಿಮಿಷದಲ್ ಖಾಲಿ ಮಾಡಿದ್ರಿ। ಕೇಳಿ ಕೇಳಿ ಕೇಳಿ ಇಲ್ಲಿ ಸ್ವಲ್ಪ ಕೇಳಿ। ಹೆಣ್ಣಿಗೊಂದು ಸೀರೆ ತರಲೇ ಇಲ್ಲ ಕೈಬೀಸ್ಕೊಂಡು ಬಂದ್ರು ಎಲ್ಲ ಕೇಳಿದ್ರೆ ಅಂದ್ರು। ಕೇಳಿದ್ರೆ ಅಂದ್ರು "ನಿಮ್ದೇ ಎಲ್ಲಾ" ಜಂಬಕ್ಕೇನೂ ಕೊರತೆ ಇಲ್ಲಾ।।

ಗಂಡಿನ ಕಡೆ:- ಈ ಕಾಪಿ ಕುಡಿದೋನ್ ಪಾಪೀ। ತಿಂಡಿಗ್ಹಾಕಿದಾರ್ ಟೋಪಿ.. ಮಲಗಲು ಕೊಟ್ಟಿದ್ ಹರಕಲ್ ಚಾಪೇ। ಬೆಡ್ ಷೀಟೆಲ್ಲಾ ತ್ಯಾಪೇ(2ಸಾರಿ) ನೋಡಿ ನೋಡಿ ನೋಡಿ ಸ್ವಲ್ಪ ನೋಡಿ ತೆಂಗಿನಕಾಯಿ ನಿಂಬೆಗಾತ್ರ, ಕೊಟ್ಟಿದ್ ಐದರ್ ಜನರಿಗ್ ಮಾತ್ರ। ಹುಡುಕೊಂಡ್ ಹೋದೇ ನಾಪತ್ತೇ ಕೇಳ್ದೋನಾದ ಪೆದ್ದಕತ್ತೆ।।

ಹೆಣ್ಣಿನ ಕಡೆ:- ಮದುವೆ ಊಟಕ್ಕೆಂದು ಬೀಗರೆಲ್ಲಾ ಬಂದೂ ಕೂತಿದಾರೆ ಇಲ್ಲೀ ಸ್ವಲ ನೋಡಬನ್ನಿ। ಫೇಣಿ ಲಾಡು, ಮಂಡ್ಗೆ, ಚಕ್ಲೀ, ಹಪ್ಪಳ ಸಂಡ್ಗೆ ಬಂಡಿ ಬಂಡಿ ತಿಂಡಿ ಒಂದು ಬಿಡದೆ ತಿಂದ್ರೂ, ಅನ್ನ ತುಪ್ಪ ಸಾರು ಶಾವ್ಗೆಪಾಯ್ಸ ಖೀರೂ। ಕೋಸಂಬ್ರಿ, ಚಟ್ನಿ ಪಲ್ಯಾ, ಜಾಮೂನ್, ಗೋಧಿಹಲ್ವಾ ಇದೆಲ್ಲಾ ಬೇಕು ಅಂದ್ರೂ ಹೊಟ್ಟೆಬಿರಿಯ ತಿಂದ್ರೂ। ಹ ಹ ಹ ಹ ಹ ಹಾ ಏನಮ್ಮ ಈ ಹೊಟ್ಟೆ ಇದು ಕನ್ನಂಬಾಡಿ ಕಟ್ಟೆ ಇದು (2 ಸಾರಿ)

ಗಂಡಿನ ಕಡೆ:- ಹಳೇ ಹುಣಸೇ ಹುಳೀ ಸಾರೂ ಬಡಿಸುತ ಬಂದಾರೂ। ಮಳೆನೀರಂಥಾ ಪಾಯ್ಸಾವಾ ಎಲೆಗೇ ಸುರಿದರೂ। ಸಿಹಿಯಾದ ಮಂಡಿಗೆ ಹೋಳಿಗೆ ಇಲ್ಲಾ, ರುಚಿಯಾದ ಹಪ್ಪಳ ಸಂಡಿಗೆ ಇಲ್ಲಾ, ಮಜ್ಜಿಗೆ ಎಂಬೋದು ತಿಳಿಗಂಜಿ ಅಲ್ವಾ। ಉಪ್ಪಿನ ಕಾಯಿ ಬಡಿಸಲೇ ಇಲ್ಲಾ (2ಸಾರಿ)

ಹೆಣ್ಣಿನ ಕಡೆ:- ಒಣಜಂಭ ತೋರಬೇಡ ಬೀಗಿತ್ತಿ, ಮನನೋಯೋ ಹಾಗೆ ಮಾಡಬೇಡ ಬೀಗಿತ್ತೀ।

ಗಂಡಿನ ಕಡೆ:- ಬಡಾಯಿ ಕೊಚ್ಚಬೇಡ ಬೀಗಿತ್ತಿ, ಬಿಡು ಇದು ತರವಲ್ಲ ಸುಳ್ಳುಗಾತೀ। ನೀ ಸುಳ್ಳುಗಾತೀ ನೀ ಬಲು ಘಾಟಿ ಯಾಕ್ವಲ್ಕರೀತೀ ಯಾಕ್ವೀಗ್ ಬೊಗ್ಳತೀ ನೀ ಬಲು ಘಾಟಿ ಘಟಾನು ಘಾಟೀ ಬೇರೆಯವರು:- ಸಾಕುಮಾಡಿ ನಿಮ್ಮ ದೂರನ್ನೂ ಇಲ್ಲಿ ಕೇಳಿ ಸ್ವಲ್ಪಾ ನಾವು ಹೇಳೋ ಒಳ್ಳೆಯ ಮಾತನ್ನೂ, ಉಳಿಸಲು ಬೇಕು ಬಂಧುತ್ವಾ, ಬೆಳೆಸಲು ಬೇಕು ಮಿತ್ರತ್ವಾ, ಗಂಡು ಹೆಣ್ಣಿನಾ ಈ ಮದುವೇ ಹೊಸ ಜೀವನಕೇ ನಾಂದಿ ಇದುವೇ।

ಗಂಡಿನವರು:- ಒಪ್ಪಿಕೊಂಡೆವು ನಿಮ್ಮ ಮಾತನ್ನೂ, ಸಪ್ಪೆ ಮೋರೆಯ ಬಿಟ್ಟು ಒಪ್ಪಿಕೊಂಡೆವು ನಿಮ್ಮ ಮಾತನ್ನೂ ಉಳಿಸಲು ಬೇಕು ಬಂಧುತ್ವಾ ಬೆಳೆಸಲು ಬೇಕು ಮಿತ್ರತ್ವಾ। ಹೆಣ್ಣು ಗಂಡಿನಾ ಈ ಮದುವೇ ಹೊಸ ಜೀವನಕ್ಕೇ ನಾಂದಿ ಇದುವೇ।

ಎಲ್ಲಾ ಒಟ್ಟಿಗೆ:- ನಾವು ನೀವೂ ಕೂಡಿ ಹಾಡೋಣ ಮದುಮಕ್ಕಳಿಗೆ ಸಂತೋಷದಿಂದ ಆರತಿ ಎತ್ತೋಣಾ ಚಂದದಿಂದ ಶುಭವನೆ ಹರಸೋಣಾ।।

ವರವ ನೀಡು ಗಣಾಧೀಶ **ರಾಗ: ನಾಟಕುರಂಜಿ**

ವರವ ನೀಡು ಗಣಾಧೀಶ। ವಿಘ್ನೇಶಾ।।ಪ।। ದುರಿತ ಗಣವಿನಾಶಾ। ಶರಣೆನುತ ಸರ್ವೇಶಾ ।।ಅ.ಪ.।। ಸನ್ನುತರಾದೆಮಗೆ ಮನ್ನಣೆಗೈಯ್ಯದ। ಕುನ್ನಿ ಬೀಗಿತಿಯಾ ಬನ್ನಿಗೊಳಿಸುವಂಥ।।1।। ಬಳ್ಳುಕೂಗ ಕೂಗಿ। ಸುಳ್ಳು ಮಾತನಾಡಿ। ಕಳ್ಳತನವ ತೋರ್ಪಾ। ಕುಳ್ಳಿಯ ಸೋಲಿಪ।।2।।

ಊಟ

ಗಂಡಿನವರು – ಬೀಗರ ಮನೆ ಊಟ

ಬೀಗರ ಮನೆಯ ಊಟವನ್ನು ಏನು ಹೇಳಲಿ, ಮಾಘಶುದ್ಧ ಚೌತಿ ದಿನ ಅಮೋಘ ದಿಂದಲಿ, ಅನ್ನ ಬಡಿಸಿ ಘಳಿಗೆ ಮೇಲೆ ಸಾರು ತರುವರು, ಸಾರು ಬಡಿಸಿ ಘಳಿಗೆ ಮೇಲೆ ತುಪ್ಪ ತರುವರು।। ಮುಗ್ಗಿದೆಣ್ಣೆ ಒಳಗೆಹಪ್ಪಳ ಹಾಕಿ ಕರಿವರು ಬಗ್ಗಿ ಬಗ್ಗಿ ನೋಡಿ ಹಪ್ಪಳ ಬಡಿಸುತ್ತಿರು ವರು।। ಹತ್ತು ಹೋಳಿಗೆ ತಂದು ಇಪ್ಪತ್ತು ಜನಕೆ ಬಡಿಪರು ನಾರಿಯರೆಲ್ಲಾ ಸೇರಿ ಅವರ ದೂರುತಿರುವರು।। ಗುಡ್ಡೆವಾಸನೆ ಮಜ್ಜಿಗೆ ತಂದು ಹಾಕುತಿರುವರು। ಇಷ್ಟವಿಲ್ಲದೆ ಅನ್ನವೆಲ್ಲಾ ಬಿಟ್ಟು ಇರುವರು।। ಎಷ್ಟು ಪೇಳಲಿ ಬೀಗರೂಟ ಕಷ್ಟ ಸಾಧ್ಯವು। ದುಷ್ಟತನವ ಮಾಡಿ ನಷ್ಟ ಗೊಂಡೆವು।।

ಹೆಣ್ಣಿನವರು

ಏನಮ್ಮ ಈ ಹೊಟ್ಟೆ ಎಲ್ಲಾದರುಂಟೆ ಮಾಡಿದ ಪೇಣಿಯ ಗೂಡೆಗಟ್ಲೆ ತಿಂದೆ। ಬಂಡಿ ಬಂಡಿ ಉಂಡೆ ಚಕ್ಕುಲಿಗಳನ್ನು ತಂಡ ತಂಡದಿ ಬಂದು ನೀ ತಿಂದೆ।। ಲಾಡು ಮಂಡಿಗೆಗಳು ಲೆಖ್ಖವಿಲ್ಲದಷ್ಟು ಕಾದ್ಯಾಡಿ ತರಿಸಿದೆ। ಕಂದಾನ ಮುಂದಿಟ್ಟು ಹಪ್ಪಳ ಸಂಡಿಗೆ ಚಪ್ಪರಿಸುತ್ತಾ ತಿಂದೆ। ಉಪ್ಪಿನಕಾಯನ್ನು ಒಂದುಳಿಸದೆ ತಿಂದೆ.ಶ್ಯಾವಿಗೆ ಪಾಯಸ ಹೋಳಿಗೆ ಹೂರಣ ಕಾಡಿ ಬೇಡಿ ತುಪ್ಪ ಇನ್ನು ಬೇಕೆಂದೆ. ಸಣ್ಣಕ್ಕಿ ಅನ್ನ ಪಲ್ಲಗಟ್ಟಲೆ ತಿಂದೆ। ಬೆಣ್ಣೆ ಕಾಸಿದ ತುಪ್ಪ ಇನ್ನು ಬೇಕೆಂದೆ।।ಏನು।। ನಾನಾ ಬಗೆಯ ಪಲ್ಯ ಮಜ್ಜಿಗೆ ಹುಳಿತೊವ್ವೆ। ಚಟ್ನಿ ಕೋಸಂಬ್ರಿಗಳ ಲೆಖ್ಖವಿಲ್ದೆ ತಿಂದೆ। ಇಷ್ಟು ತಿಂದರು ನಿನ್ನ ಹೊಟ್ಟೆ ಉಬ್ಬರಿಸದೇ। ಮತ್ತಿಷ್ಟು ಬೇಕೆಂಬಾಸೆ ಪಡ್ತೀಯಲ್ಲೆ।।

ಗಂಡಿನವರು

ಎಂಥಾ ಮದುವೆ ಮಾಡಿದೆ ಪಂಥಗಾತಿ ಹೌದೇನೆ... (2ಸಾರಿ) ಹೋಳಿಗೆಯನು ಮಾಡಿದ್ದೆ ನಿನ್ನ ಮೈದುನನ ಕಾವಲಿಟ್ಟೆ। ಹೋಳಿಗೆ ತಾರೆಂದರೆ ಕೋಲುಗಳನ್ನು ತೋರಿದೆ।। ಹಪ್ಪಳವ ಮಾಡಿದ್ದೆ।। ನಿನ್ನ ಅಪ್ಪನನ್ನ ಕಾವಲಿಟ್ಟೆ ಹಪ್ಪಳವ ತಾರೆಂದರೆ ಚಪ್ಪಾಳೆಯನ್ನು ತಟ್ಟಿದೆ।। ಮಂಡಿಗೆಯನ್ನು ಮಾಡಿದ್ದೆ ನಿನ್ನ ಗಂಡನನ್ನು ಕಾವಲಿಟ್ಟೆ। ಮಂಡಿಗೆ ತಾರೆಂದರೆ ಮಂಡಿ ಮುರಿದು ಕಳಿಸಿದೆ।।

ಹೆಣ್ಣಿನವರು

ಬೀಗರು ಒಳ್ಳೇವರೆಂದು ಹೆಣ್ಣುಕೊಟ್ಟೆವು ನಾವು। ಬೀಗರ್ ಚಂದವ ನೋಡಿ ನಾವು ಕೆಟ್ಟೆವು ಹಾಸಿಗೆ ಮೇಲೆದ್ದು (ಕುಳಿತು) ಕಾಫಿಯನ್ನು ಕುಡಿವೋರು। ಹೇಸಿಗೆ ಇಲ್ಲ ಇದೇ ನಮ್ಮ ರೀತಿ ಎಂಬೋರು।। ದೇವರ ಪೂಜೆಯನ್ನು ಎಂದೂ ಮಾಡಿ ಅರಿಯರು। ಬ್ರಾಹ್ಮಣರಿವರೆಂದು ನಂಬಲ್ ಹೇಗೆ ಸಾಧ್ಯವು।।ಬೀಗರು।।

ಗಂಡಿನವರು

ರಾಮರಾಮರಾಮ ಬೀಗಿತ್ತಿ ಜಾಣೆ ನಮ್ಮ ಬೀಗಯ್ಯ ಕೋಣ, ಬೀಗಿತ್ತಿ ಉಡೋದು ಪಟ್ಟೆಯ ಸೀರೆ। ನಮ್ಮ ಬೀಗಯ್ಯ ಉಡೋದು ಕಂಬ್ಳಿಯ ಹರಕು ಬಂತೆ, ಬೀಗಿತ್ತಿ ಉಣ್ಣೋದು ಸಣ್ಣಕ್ಕಿ ಅನ್ನ ನಮ್ಮ ಬೀಗಯ್ಯ ಉಣ್ಣೋದು ರಾಗಿಯ ಮುದ್ದೆ। ಬೀಗಿತ್ತಿ ಮಲಗೋದು ಪಟ್ಟೆಯ ಮಂಚ। ಬೀಗಯ್ಯ ಮಲಗೋದು ಬೀದಿಯ ಜಗುಲಿ। ಬೀಗಿತ್ತಿ ಕುಡಿಯೋದು ಕಾಫಿ, ಟೀ ಕೋಕೋ। ನಮ್ಮ ಬೀಗಯ್ಯ ಕುಡ್ಯೋದು ನೀರು ಮಜ್ಜಿಗೆ...।।ರಾಮ।।

ಬೀಗರ ಜರಿತ

ಆರೋಗಣೆಗೇಳು ಅತ್ತಿಗೆ

ಆರೋಗಣೆಗೇಳು ಅತ್ತಿಗೆ ಅವಗುಣಗಳ ಬಿಡು।।ಪ।। ಅನ್ನ ಸಾಲದೆಂದು ಮನದಲ್ಲಿ ಖಿನ್ನಳಾಗಬೇಡ। ಮಿರ್ಲೆಗೆ ಕಳಿಸುವೆ ಸಣ್ಣಕ್ಕಿ ತರಿಸುವೆ ಅನ್ನದ ರಾಶಿ ಎಲೆ ಮುಂದೆ ಸುರಿಸುವೆ।।1।। ತುಪ್ಪ ಸಾಲದೆಂದು ಮನದಲ್ಲಿ ತಪ್ಪು ತಿಳಿಯಬೇಡ। ಕೊಪ್ಪಕ್ಕೆ ಕಳಿಸುವೆ ತುಪ್ಪವ ತರಿಸುವೆ। ತುಪ್ಪದ ಕುಪ್ಪೆಯ ಎಲೆ ಮುಂದ್ದರಿಸುವೆ।।2।। ಹಾಲುಸಾಲದೆಂದು ನಿನ್ನ ನಾಲಿಗೆ ತೆಗಿಬೇಡ। ಹಳ್ಳೀಗೆ ಕಳಿಸುವೆ ಹಾಲನ್ನು ತರಿಸುವೆ। ಹಾಲಿನ ಹೊಳೆಯ ಎಲೆಮುಂದೆ ಸುರಿಸುವೆ।।3।।

ಊಟವೇನ ಮಾಡಿದೆಯೇ — ರಾಗ: ಶಂಕರಾಭರಣ

ಊಟವೇನ ಮಾಡಿದೆಯೇ ಕಪಟ ಬೀಗಿತ್ತೀ।।ಪ।। ವಿಪರೀತ ಮಾತನಾಡಲೆಮಗೆ ಭಯವೆಂದರಿಯೆಯಾ।।ಅ.ಪ।। ಬೀಗರೆಲ್ಲ ಬಂದರೆಂದು ಬಾಗಿಲೆಡೆಯೊಳು। ರಾಗದಿಂದ ಬಿಸಿಯ ನೀರನಿತ್ತೆಯೆನಿಸೀ।।1।। ಸುಳಿಯ ಬಾಳೆಯೆಲೆಯೊಳೆಮಗೆ ಉಣಬಡಿಸಿದೆಯಾ। ಕಳಿತ ಬಾಳೆಹಣ್ಣ ನೆಲೆಯ ತುದಿಯೊಳಿಟ್ಟೆಯಾ।।2।। ರತುನ ಪೀಠಗಳನು ಹಾಕಿ ಕುಳ್ಳಿರಿಸಿದೆಯಾ। ಸತತ ಮೆರೆವ ದೀಪಸ್ತಂಭವ ಇಡಿಸಿದೆಯಾ।।3।। ಅನ್ನ ಭಕ್ಷ್ಯದಿಂದ ನಾವು ತೃಪ್ತರಾದೆವೇ। ನಿನ್ನ ಮನೆಗೆ ಬಂದು ನಾವು ಮೋಸಹೋದೆವೇ।।4।।

ಎಪ್ಪಡಿ ನೀ ಕಪ್ಪಲೇರಿನಾಯ್ (ತಮಿಳು)

ಎಪ್ಪಡಿ ನೀ ಕಪ್ಪಲೇರಿನಾಯ್ ಸಂಮ್ಮಂದಿಯಮ್ಮ। ಇಚ್ಚೈತೀಂದು ಎಪ್ಪೊವರುವಾಯ್।। ಆತು ಪುರುಷನ್‌ವಿಟ್ಟು ಅರುಮೈ ಕುಳಂದೈವಿಟ್ಟು। ಕಪ್ಪಲೇರ ಪೋರೆನೆನ್ರ ವೆಕ್ಕಂಗೆಟ್ಟ ಸಂಮ್ಮಂದಿ।।1।।

ಏಕದಂತನೆ ವರವ — ರಾಗ: ಆನಂದ ಭೈರವಿ

ಏಕದಂತನೆ ವರವ ಕರುಣಿಸು। ಭೀಕರದ ಬೀಗಿತ್ತಿಯ।।ಪ।। ಏಕವಾಕ್ಯದೆ ಸೋಲಿಪದಂದದೆ। ನೀ ಕರುಣಿಸೈ ಗಣಪತೀ।।ಅ.ಪ।। ಸಂಡಿಗೇ ಕೋಸಂಬರಿಗಳನು ತಂಡ ತಂಡದೆ ತಿನ್ನುತ। ಭಂಡೆ ತಾನುಣಲಿಲ್ಲವೆಂಬುವಳು। ಚಂಡಿಯಂದದೆ ಘರ್ಜಿಸಿ।।1।। ಸಟೆಯ ನುಡಿದಳು ಪುರುಷರೆಡೆಯೊಳು। ದಿಟವನುಸಿರಿದ ಬೀಗಿತ್ತೀ। ವಲವಟಿದ್ದನಿ ಗೈಯ್ಯುತಿರ್ಪಳು। ಕುಟಿಲತೆಯ ತೋರಿಸುವಳು।।2।। ಹಿರಿಯರಿವರೆಂದೆನುವ ಗೌರವ। ವರಿಯದೇ ಹೋರಾಡುವಳು। ವರದ ಮಾಂಗಿಯರಸನಿಗೆ। ಶರಣರೆಂಬುದನರಿಯಳು।।3।।

ಚಿತ್ರಶಾಲೇಲಿ ಬೀಗರು ಬಂದು

ಚಿತ್ರಶಾಲೇಲಿ ಬೀಗರು ಬಂದು ಕುಳಿತರು। ಉಂಡಊಟಪೇಳ್ದಿ ಕೇಳಿ ಬಂದ ನೆಂಟರೂ॥ಪ॥ ಸೊಂಡಿಲಗಣನಾಥ ನಿಮಗೆ ವಂದನೆ ಮಾಡುವೇ। ಬಂದ ಬೀಗರ ಚರಿತ್ರೆಯನ್ನು ನಿಂದು ಪೇಳು॥ಅ.ಪ॥ ಚಂದದಿಂದ ಮಣೆಗಳಾಕಿ। ತಂದು ದೀವಿಗೇ। ಇರಿಸಿ ಚೌಕಕಟ್ಟಿ ಹಾಕಿ ಎಲೆಗಳ ಹರುಷದೀ॥1॥ ಪಟ್ಟೆ ಸೀರೆ ಮಗುಟುಗಳನು। ಕಟ್ಟಿನೆರಿಯನೂ॥ ಹೊಳೆವ ಮುತ್ತಿನಗಿಂಡಿಲಿ ಉದಕ। ತುಂಬಿ ಇಟ್ಟರೂ॥2॥ ಪಾತ್ರಭಿಗಾರಮಾಡಿ ಭಾಮೆಯಾರೆಲ್ಲಾ। ಈಪರೀಯ ಬಡಿಸಿದಾರೆ ಹರುಷಗೊಳುವರೂ॥3॥ ಉಪ್ಪಿನ ಕಾಯಿ ಚಿಟ್ನಿ। ಕೋಸುಂಬರಿ। ಗೊಜ್ಜು ಪಲ್ಯವೂ। ಕಡುಬು ಹೋಳಿಗೆ। ತೊವ್ವೆಪಾಯಿಸ। ಸಾರು ಪಳದ್ಯವೂ॥4॥ ಚಕ್ಕುಲಿ ಕರ್ಜಿಕಾಯಿ ಚಿರೋಟಿ ಸಕ್ಕರೆ ಮರುದೆಯೂ। ಹಪ್ಪಳಸಂಡಿಗೆ ಮಂಡಿಗೆ ಪೇಣಿಲಾಡುಗೀವರೂ॥5॥ ಬಾಸುಂದಿಗಾಳನೂ ಬಡಿಸುತಿದ್ದರೂ॥ ಈ ಪರೀಯ ಬಡಿಸಿದಾರೆ ಹರುಷಗೊಳುವರೂ॥6॥ ವಾಂಗಿಬಾತ್ ಕೇಸ್ರೀಬಾತ್ ಮೋಹನ ಬಾತನೂ ಬಕುಳಿಬಾತ್। ಬಡಿಸಿಬಾರೇ ಹರುಷಗೊಳುವರೂ ॥7॥ ಶಾಲ್ಯಾನ್ನ ಕ್ಷೀರನ್ನ। ಚಿತ್ರನ್ನಾನ ಕಲಸನ್ನ ತಂದು ಬಡಿಸಲೂಹೆಡಿಗೆಹೆಡಿಗೆ ಬಡಿಸಿದಾರೆ ಹರುಷಗೋಳುವರೂ॥8॥ ಮಡೀ ಸೀರೆಯಂತೆ ಮಂಡಿಗೇ। ತಂದು ಬಡಿಸಲೂ ಬಡಿದನೆ ಸಕ್ಕರೆ ಹಾಲು ತುಪ್ಪದೊಳ್। ಬಡಿಸುತಿದ್ದರೂ॥9॥ ಕರೆದ ಶಾವಿಗೆ ಪಾಯಿಸಕೊಡಾ।ಕೊಡದಲ್ಲಿ ಬಡಿಸಲೂ। ಬಿಡದಲೊಂದು। ಚಂಬಕುಡಿದು। ಜರಿಯುತಿದ್ದರೂ॥10॥ ಜುಂಡಗಕ್ಕಿ। ಹಂಡೆ ಅನ್ನ ಉಂಡುಜರಿವರೂ। ಒಂದು ಅಗಳು ಇಲ್ಲದೆ ಹಾಗೆ ಉಂಡು ದೂರ್ಪರೂ॥11॥ ಈ ಪರೀಯ ಊಟಗಳನು ಮಾಡಿಗೆದ್ದೆವೂ ಏಳಲಾರೆವು। ಊರಗೋಲಕೊಡಿರಿ ಎಂದರೂ॥12॥ ಮೈಸೂರು ಮಹಿಶನಂತೆ। ಮೆಲ್ಲನೆ ಬಂದೂ। ಪರಿಮಳಾದ ಉದುಕದಲ್ಲಿ। ಕರಗಳ। ತೊಳೆದರೂ॥13॥ ಲಾವಂಚದ ಬೀಸಣಿಗೇಲೀ ಬೀಸುತಿದ್ದರೂ। ಸೇವೆ ಮಾಳ್ಪ ಭಟರು ಅಲ್ಲಿ ಕಾದು ಇದ್ದರೂ॥14॥ ಬಿಳಿಯ ಎಲೆಯ ಪರಿಮಳಾದ ಬಿಳಿಯ ಅಡಕೆಯೂ। ಹೊಳೆವ ಮುತ್ತಿನ ಸುಣ್ಣಗಳನು ಕೊಡುತಲಿದ್ದರೂ॥15॥ ಪುನಗು ಕಸ್ತೂರಿ ಗಂಧಗಳನ್ನು ಹಚ್ಚುತಿದ್ದರೂ ಸಣ್ಣ ಮಲ್ಲಿಗೆ ಸರಗಳನ್ನು ಹಾಕುತಿದ್ದರೂ॥16॥ ಪನ್ನೀರು ಸ್ವಾನೆಗಳನು ಸುರಿಸುತಿದ್ದರೂ। ಮರುಗಮಲ್ಲಿಗೆ ಜಾಜಿ ಸಂಪಿಗೆದವನ ಮುಡಿಸರೂ॥17॥ ವೇಣುತಂಬೂರಿ ವೀಣೆಗಳನುಡಿಸು ತ್ತಿದ್ದರೂ। ಬೀಗಬೀಗರು ಕೂಡಿಸರಸ ವಾಡುತಿದ್ದರೂ॥18॥ ಗರಳ ಪುರೀಶನ ಕರುಣದೋಳೀಪರಿ। ಪದವಿ ಕಂಡೇವೂ। ಚಂದ್ರಮೌಳೀಶ ಶಾರದಾಂಬೆ।ಗುರುಗಳ ಕೃಪೆಯಿಂದಾಲಿ ॥9॥

ಬೇಡ ಬೇಡವೇ ಕಡುನುಡಿಗಳ — ರಾಗ: ಬೇಹಾಗ್

ಬೇಡ ಬೇಡವೇ ಕಡುನುಡಿಗಳ ಬಿಡು। ಬಡಾಯಿಗಳೇತಕೆ॥ಪ॥ ನೋಡಲಾರೆ ನಿನ್ನುದರ ಗಿರಿಯನಾ। ಗೂಡೆ ಗೂಡೆಯ ಲಾಡುಗಳನು ನೀ। ನೋಡಿ ನೋಡಿ ಚಪ್ಪರಿಸುತ ಗಂಟಲು ಹಿಡಿದಾಪರಿ ಮರತೆಯಾ॥1॥ ಬಿಟ್ಟಿ ಲಾಡು ಒಬ್ಬಿಟ್ಟುಗಳೆನ್ನುತ। ಬಿಟ್ಟಬಾಯಿಗೆ ಅಡಸಿದೆಯಲ್ಲವೇ। ಹೊಟ್ಟೆನೋವೆನಲ್ ಸೋಡಾವಾಟರ್ ಕೊಟ್ಟಾಪರಿ ಮರತೆಯಾ॥2॥ ನೀರಡಿಗೆಯೆಂದೆನ್ನುತ ಬಚ್ಚಲ। ನೀರಕುಡಿಯೆನೀನೈದಿದ ಕಾಲದಿ। ಖೀರನಿತ್ತ ಎನ್ನನು ಪರಿಪರಿಯೊಳು। ದೂರೀ ಮರುಳಾಗು॥3॥

ಮಾದಳಂ ಪೂವ್ವೈ ಪೋಲೆ (ತಮಿಳು) — ರಾಗ:ಕುರಂಜಿ

ಮಾದಳಂ ಪೂವ್ವೈ ಪೋಲೆ ಎಂಗಮ್ಮಾ। ಮಲ್ಲಿಗೈ ಪೂವ್ವೈ ಪೋಲೆ ಎನ್ನೈಪೆಟ್ರಾಲ್। ನಾಡೇಲ್ಲಾಂ ಸುತ್ತಿವಂದು ನಲ್ಲಪಿಳ್ಳೈ ಇಲ್ಲೈ ಎನ್ರು ಇಂದ ಗುಣಂಗೆಟ್ಟ ಪಿಳ್ಳೈಕ್ಕು ಕೊಂಡುಕುಡುತ್ತಾಳೆ॥ ॥ಶೋಭಾನೆ॥ ಅತ್ತಾನ್ ಅಮ್ಮಾಂಜಿ ಕೂಟತ್ತಿಲೆ ಆಯಿರಂ ಪೇರಿರುಕ್ಕಾರ್ ವಾಕಾವಳಿಯ ಸಂಬಂಧಂ ಪಣ್ಣಿವಾಂಗಿಕೊಳ್ಳಾಮಲ್। ಊರಿಲೆ ಉಸಂದವರ್ ವಾಯಿಲೆ ಪೆರುತ್ತವರ್ ಒನ್ರೇಕಾಸುಕು ಪೆಣ್ ಕೇಕ ವಂದವರ್। ಶಾಭಾಷ್ ಪಿಳ್ಳೆ ಇವರ್ ಸಮರ್ಥನರೇ॥ಶೋಭಾನೆ॥ ನಾಡೆಲ್ಲಾ ಸುತ್ತಿವಂದು ನಲ್ಲ ಪೆಣ್ ಇಲ್ಲೈ ಎನ್ರು ಇಂದ ಗುಣಂಕೆಟ್ಟ ಪೆಣ್ಣೈ ವಾಂಗಿಕೊಂಡಾಳೆ॥ ॥ಶೋಭಾನೆ॥ ಅತ್ತಂಗ ಅಮ್ಮಂಗ ಕೂಟತ್ತಿಲೆ ಆಯಿರಂ

ಪೇರಿರುಕ್ಕಾರ್ ವಾಕಾವಾಳಿಯಾ ಸಂಬಂಧಂ ಪಣ್ಣಿ ವಾಂಗಿಕೊಳ್ಳಾಮಲ್ ಊರಿಲೆ ಉಸಂದವಳ್ ವಾಯಿಲೆ ಪೆರುತ್ತವಳ್ ಒನ್ರೇ ಕಾಸುಕು ಮಾಪಿಳ್ಳೈ ಕೇಕ್ಕ ವಂದವಳ್। ಸಭಾಷ್ ಪೊಣ್ಣೆ ಇವಳ್ ಸಮರ್ಥನಳೇ।। ।।ಶೋಭಾನೆ।।

ಸಾಕು ಈ ಹರಟೆ **ರಾಗ:ಮೋಹನ**

ಸಾಕು ಈ ಹರಟೆ। ಕಟಿ ಕಟಿ।।ಪ।। ಯಾಕೆ ವ್ಯರ್ಥವೀ ಕಟಪಟೆ। ಸಾಕು ಸಾಕು ಭೀಕರಾನನೆ।।ಅ.ಪ।। ಸಾವಿರಾರು ಜನರಿಗೆಲ್ಲಾ। ಯಾವ ಸಮಾರಾಧನೆಗೈದೆ। ಶಾವಿಗೆ ಪಾಯಸದೊಳುಪ್ಪು ಯಾವ ರುಚಿಯೆ ಬೆಪ್ಪಿನ ತಕ್ಕಡಿ।।1।। ನ್ಯಾಯವೇನೆ ನಿನಗೆ ಕುದುರೆ। ಲಾಯದೊಳಗೆ ಹುರುಳಿರಾಶಿಯ। ಬೇಯಿಸುವ ತೆರದೊಳು ನಮಗೆ ಮಾಯಕಾತಿ ಮುಳ್ಳಕ್ಕಿಯ ಬಡಿಸಿದೆ।।2।। ಯಾರು ತೃಪ್ತಿಯನಾಂತರೆಮ ಮೀರಿಕೂಗುವೆ। ಕಾಗೆಯಂದದಿ। ಮಾರಜನಕನ ಮಾಂಗಿರೀಶ। ನೋರ್ವಬಲ್ಲನು ನಮ್ಮ ಗುಣಗಳ।।3।।

ಸಾಕು ಸಾಕೆಲೆ ನಿನ್ನ **ರಾಗ: ಜಲಾಬ್**

ಸಾಕು ಸಾಕೆಲೆ ನಿನ್ನ। ಭೀಕರೋಕ್ತಿಗಳೆಲ್ಲ।।ಪ।। ಯಾಕೆ ಕೂಗುವೆಯೆ ನೀ। ಕಾಕವೇಣಿಯೆ ಛೀ।।ಅ.ಪ।। ತಿಂದು ತೇಗಿದೆಯಲ್ಲೆ। ದುಂದುಗ ಪ್ರಿಯೆ ನಲ್ಲೆ। ಮಂದಮತಿಯನಲ್ಲೆ। ಅಂದವನೆಲ್ಲ ಬಲ್ಲೆ।।1।। ನಮ್ಮ ಭಕ್ಷ್ಯವನ್ನೆಲ್ಲ। ಬಿಮ್ಮನೆ ತಿಂದು ತಿಂದು। ಕೊಮ್ಮೆಯಂದದೊಳಾಗಿ। ಯಮ್ಮೆಯೋಲರಚುವೆ।।2।। ಮಳ್ಳಿತನದೆ ತಿಂದು। ಜಳ್ಳು ಮಾತಾಡುವ। ಕುಳ್ಳಿಯೆ ನಿನ್ನ ಮಾತು। ಬಳ್ಳು ಕೂಗಲ್ಲವೇನೆ।।3।।

ಸಾಕೆಲೆ ಬೀಗಿತ್ತಿ ಯಾಕೆ **ರಾಗ:ಶಂಕರಾಭರಣ**

ಸಾಕೆಲೆ ಬೀಗಿತ್ತಿ ಯಾಕೆ ಮಾತಾಡುತ್ತಿ। ಲೋಕವು ನಿನ್ನ ವಿವೇಕಕೆ ನಗುವುದು।।ಪ।। ಬೀಗರ ಆಸೆಯ ನೀಗಿಸಲಾರದೆ। ಕೂಗಿದೊಡೇಂ ಫಲ ಸಾಗದು ಈ ಫಲ।।1।। ತೋರದೆ ಭಕ್ಷ್ಯವ ಮೀರಿದೆ ಗರ್ಜನೆ। ದೂರುವೆ ನಮ್ಮನು ನಾರಿಮಣಿಯೆ ನೀನು।।2।। ಶಿಬಿಪುರ ಪಾಲನು ವಿಭವ ವಿಶಾಲನು। ಶುಭವನು ಮೆಚ್ಚನು ರಭಸದ ಕೂಗನು।।3।।

ಸುಗುಣಾಮಣಿ। ಸೊಗಸೇನೆ ರಮಣಿ **ರಾಗ: ಮಾರ್ಗಹಿಂದೋಳ**

ಸುಗುಣಾಮಣಿ। ಸೊಗಸೇನೆ ರಮಣಿ। ಸುಗುಣಾಮಣೀ।।ಪ।। ಪೇಣಿಕೀರತಂದು ಕಾಣಿಸಾದೆ ತಿಂದೂ। ಸೇರಿದೆಲ್ಲರೆಂಬೋ। ಜರಿಪೋದೇನೆಜಂಭಾ।।1।। ಅರಿಯೇ ನೀನೆಂತ ಜರಿಯೂವ ರವನ್ನೂ। ಲೋಕದಲ್ಲಿ ಕಾಣೆ। ಇಂಥಾ ಬೀಗರನ್ನೂ।।2।। ಭಾರೀಬೀಗರೆಂಬೋ। ಭಾರೀ ಜಾತನೆಂಬೋ। ಸೇರಿದೆಲ್ಲರೆಂಬೋ ಜರಿಪೋದೇನೇ ಜಂಭಾ।।3।।

ಹುಚ್ಚರಾದವಲ್ಲೇ ನಾವು **ರಾಗ: ಬೇಹಾಗ್**

ಹುಚ್ಚರಾದವಲ್ಲೇ ನಾವು ಬೀಗಿತಿ ।।ಪ।। ಸಚ್ಚರಿತೆ ನೀನೆಂದು ನೆಚ್ಚಿ ಮನದಿಚ್ಛೆಯಿಂದ।।ಅ.ಪ।। ನೆಂಟರಿದಿರೊಳು ಹಣದ। ಗಂಟ ಕೇಳಿದೆಯಲ್ಲೆ। ತುಂಟಾವತೋರಿ ನೂರೆಂಟು ಲಾಡು ತಿಂದೆಯಲ್ಲೆ।।1।। ಹೊಟ್ಟೆಯ ನೋಡಲು ದೊಡ್ಡ। ಬೆಟ್ಟದಂತೆ ಕಾಂಬುದಲ್ಲೆ। ಬಿಟ್ಟೀ ಸಿಕ್ಕಿತುಯೆಂದೊಬ್ಬಟ್ಟ ಕದ್ದು ತಿಂದೆಯಲ್ಲೆ।।2।। ನಡೆಯುವುದು ಒಂದಂದ ನುಡಿವುದು ಮತ್ತೊಂದು ಚಂದ। ಬಡಿವಾರಗಳೇನಾನಂದ। ಕೊಡಗಿತ್ತಿಯ ಸಂಗದಿಂದ।।3।।

ಹುಚ್ಚೀ ನೀನಾದೆಯೇನೆ **ರಾಗ: ಆನಂದಭೈರವಿ**

ಹುಚ್ಚೀ ನೀನಾದೆಯೇನೆ ಬೀಗಿತ್ತಿ। ಬಲು ರಚ್ಚೀ ಹಿಡಿದು ಮಾತನಾಡುತ್ತಿ।।ಪ।। ನುಚ್ಚಕ್ಕಿಯನ್ನವನು ಬೇಯಿಸುತ್ತಿ ಬಹು ಹೆಚ್ಚಿನ ಬೀಗರನ್ನು ದೂಷಿಸುತ್ತಿ।।ಅ.ಪ।। ಉಪ್ಪೇರಿ ಪಲ್ಯಗಳ ಮಾಡಲಿಲ್ಲ। ದೊಡ್ಡ ಹಪ್ಪಳ ಸಂಡಿಗೆಗಳ ಬಡಿಸಲಿಲ್ಲ।

ಹಿಪ್ಪದಿಂದ ನಮ್ಮನ್ನುಪಚರಿಸಲಿಲ್ಲ। ನೀನು ಬೆಪ್ಪಾಗಿ ನಿಂತುದಚ್ಚರಿಯಲ್ಲಿ॥1॥ ಲಾಡು ಹೋಳಿಗೆಗಳು ಕೇಳಲಿಲ್ಲ। ದೊಡ್ಡ ಗೂಡೆ ಚಿರೋಟಿಗಳ ಬೇಡಲಿಲ್ಲ। ನೋಡಿದವುಗಳ ತಾರೆನ್ನಲಿಲ್ಲ। ನಮ್ಮ ಮೂಢತ್ವದಿಂದ ದೂಷಿಪೆಯಲ್ಲ॥2॥ ತಂಗಳನ್ನವ ಬಡಿಸಿದೆಯಲ್ಲಾ ನೀ। ಮಂಗನಂದದೊಳಿಣಿಕಿ ನೋಡಿದೆಯಲ್ಲ। ಮಾಂಗಿರೀಶನ ಭಕ್ತ ಜನರೆಲ್ಲಾ ನಿನ್ನ। ಇಂಗಿತಗಳ ತಿಳಿದು ನಗುವರಲ್ಲ॥3॥

ನಿಮ್ಮನೆಯ ಹೆಣ್ಣನ್ನು ನಮ್ಮನೆಗೆ ತರುವುದಕೆ

ನಿಮ್ಮನೆಯ ಹೆಣ್ಣನ್ನು ನಮ್ಮನೆಗೆ ತರುವುದಕೆ ನಮ್ಮೊಬ್ಬರ ಮನಸಿಲ್ಲಾ. ಹಣೆಯೊಳು ಬ್ರಹ್ಮ ಬರೆದನಲ್ಲಾ॥ಪ॥ ಮೂರು ಸಾವಿರದೊಳಗೆ ಮಾವಯ್ಯಗೇ ಮುದ್ದೀನ ಮಗನಿವನೂ॥1॥ ಆರು ಸಾವಿರದೊಳಾಗೇ ನಮ್ಮತ್ತೆಗೆ ಆದರದ ಮಗನಿವನೂ॥2॥ ಹತ್ತುಸಾವೀರದೊಳಾಗೆ ನಮಗೆಲ್ಲರಿಗೂ ಪ್ರೀತಿಯ ಅಣ್ಣನಿವನೂ॥3॥

ಬಸುರಿ

ಬಸುರಿಯ ಬಯಕೆ

ಆಹಾ ಈ ಕಲಿಯುಗದ ರಾಗ: ಆನಂದಭೈರವಿ

ಆಹಾ। ಈ ಕಲಿಯುಗದ ಗರ್ಭಿಣಿಯರಪೇಕ್ಷೆ ಪರಿಯನೂ॥ಪ॥ ಸಿರಿ ಗಿರಿಜೆಯರು ಪೂರ್ವ ಯುಗದಲರಿಯರು ॥ಅ.ಪ॥ ರೂಬಿ ಕ್ಯಾಟ್ ಸೋಪು ಮುಖಕೆ। ಹಾಟ್ ವಾಟರೂ। ಟೂತ್ ಬ್ರಷ್ ಹ್ಯಾಂಡ್ ಕರ್ಚೀಫ್। ವೈಟ್ ಪೌಡರೂ॥1॥ ರೆಡ್ ವೈಟ್ ಬ್ಲೂ ಬ್ಲಾಕ್ ಸಿಲ್ಕು ಫ್ಲಾನಲು। ಶೆರಟು ಕಾಲ್ ಚೀಲ ಬೂಡ್ಸ್ ಪರಂಗಿ ಡ್ರೆಸ್ಸುಗಳು॥2॥ ಈಸಿ ಚೇರ್ ಸೋಫಾ ಟೇಬಲ್ ಪೇಪರ್ ಪೆನ್ಸಿಲ್। ಲೆಟರ್ ಬ್ಲಾಟಿಂಗ್ ಪೇಪರ್ ಫೌಂಟನ್ ಪೆನ್ ಸೆಟ್‌ಗಳು॥3॥ ಬೆಣ್ಣೆ ಬಿಸ್ಕತ್ ಬ್ರೆಡ್ ಲಿಂಬ್ಲೆಡ್ ಸೋಡವಾಟರು। ಸಣ್ಣ ಕಪ್ ಕಾಫಿ ಕೋಕೋ ಓಂಪುಡಿಗಳು॥4॥ ಮೋಟಾರ್ನೊಳಗೆ ಪತಿಯ ಒಡನೆ ವಾಕಿಂಗ್ ಹೊರಟಳು। ಪಾರ್ಕ್ ಲಾಲ್‌ಬಾಗ್ ವಾಕಿಂಗ್ ತಿರುಗಿ ಶೇಕ್ಹ್ಯಾಂಡ್ ಕೊಡುವಳು॥5॥ ಕುದುರೆ ಗಾಡಿಯಲ್ಲಿ ಮೆಟರ್ನಿಟಿ ಹಾಸ್ಪಿಟಲ್-ಗ್ಹೊರಟಳು। ಕಮಾನ್ ಮೇಡಮ್ ಎಂದು ಲೇಬರ್ ವಾರ್ಡಿಗೆ ಕರೆದರು॥6॥ ಜನನ ಮಿನಿಟಿನೊಳಗೆ ಜನರಲ್ ಹಾಸ್ಪಿಟಲ್ ಸುಖಗಳು। ತನಯ ಜನಿಸೆ ತ್ವರಿತದಿಂದ ಇಂಗ್ಲೀಷ್ ಮೆಡಿಸನ್‌ಗಳು॥7॥

ಊಡಿಸಲ್ ಕಳಲುವಳ್ ಉಣದಿರಲ್(ಧ್ರುವಚರಿತ್ರೆ-ಕಾವ್ಯದಲ್ಲಿ ಬಯಕೆ) ರಾಗ:ರೇವತಿ

ಊಡಿಸಲ್ ಕಳಲುವಳ್ ಉಣದಿರಲ್ ಬಳಲುವಳ್। ನೋಡುತಿರಲ್ ಅಲಸುವಳ್ ನಮಿತವಾಕಳಿಸುವಳ್॥ಪ॥ ಪಾಡಲಾಲೈಸುವಳ್ ಪೊಸಪೊಸತ ಬಯಸುವಳ್। ಪೊಂಚು ಪೊಂಚುತ ಸುಳಿವಳ್ ರೂಢಿಯಿಂ ಬಾಷಿಸಳ್। ರಚ್ಚೆಗೆ ಪ್ರವೇಶಿಸಳ್ ಗೂಢದಿಂ ಹಿಗ್ಗುವಳ್ ಗುಂಪಿಗಂ ತಗ್ಗುವಳ್। ಮೂಢಳ್ ಎನೆ ತೋಚುವಳ್ ಮುರಿಮುರಿದು ನಾಚುವಳ್। ಉದರದುಬ್ಬಟೆಯೊದವಲು॥

ಬಯಕೆ ಕಾಡತಾವರೆವ್ವ ರಾಗ: ಮೋಹನ

ಬಯಕೆ ಕಾಡತಾವರೆವ್ವ। ಬಯಕೆ ಕಾಡತಾವರೆವ್ವ। ಬಯಸಿದುದನು। ಮಾಡಿ ಮಾಡಿ ನೀಡಿರೆ ಮಾಡಿ ಮಾಡಿ ನೀಡಿರೆ, ಮಾಡಿ ನೀಡಿರೆ॥ಪ॥ ಹಾಲಲ್ಲಿ ಸಕ್ಕರೆ ಬೆರೆಸಿ। ಮೇಲೆ ದೀಪ ದ್ರಾಕ್ಷಿ ಇರಿಸಿ। ಕೇಸರಿಯಾಲಕ್ಕಿಯಾ। ಸೋಸಿ ಚೂರ್ಣ ಹಾಕಿರೇ॥ ಮರಳಿಸಿದ। ಮಸಾಲೆ ಹಾಲ। ತರಿಸಿ ತಾರೆ ತಾಯಿ ಮೊದಲೆ ಬಯಸಿರುವೆನು। ಮಾಡಿ ಮಾಡಿ ನೀಡಿರೆ। ಮಾಡಿ ಮಾಡಿ ನೀಡಿರೆ। ಮಾಡಿ ನೀಡಿರೆ॥1॥ ಸಣ್ಣಕ್ಕಿಯ ಅನ್ನವೂ। ಬೆಣ್ಣೆ ಕಾಸಿದ ತುಪ್ಪವೂ। ಹಣ್ಣುಲಿಂಬಿರಸವೂ। ತವ್ವಿ ಕಲಿಸಿ ತುತ್ತನುಣಿಸಿರೆ। ಬಿರಿದಾ ಬುರಬುರಿಗಳನ್ನು। ಬಾಡಿಸುವೆನು। ಮಾಡಿ ಮಾಡಿ ನೀಡಿರೆ। ಮಾಡಿ ಮಾಡಿ ನೀಡಿರೆ। ಮಾಡಿ ನೀಡಿರೆ॥2॥ ಒಪ್ಪಿಡಿ ಅನ್ನವ ಬೇಯಿಸಿ ಹೆಪ್ಪಿನ ಕೆನೆ ಮೊಸರ ಕಲಿಸಿ। ತಪ್ಪದೆ ನೊರೆ ಹಾಲನೆರೆದು

ಬುತ್ತಿಯನ್ನು ತನ್ನಿರೇ। ಹಪ್ಪಳ ಸಂಡಿಗೆಗಳನೂ। ಉಪ್ಪಿನ ಕಾಯಿಗಳನೂ ಬಾಡಿಸುವೆನು ಮಾಡಿ ಮಾಡಿ ನೀಡಿರೇ ಮಾಡಿ ಮಾಡಿ ನೀಡಿರೆ॥3॥ ಮಾವಿನ್ಹಣ್ಣು ಬಾಳೆಹಣ್ಣು। ಸೇಬುಹಣ್ಣು ದ್ರಾಕ್ಷಿಹಣ್ಣು। ಜೀವ ಹರಿವ। ಅಂಜೂರಿಯ ಹಣ್ಣು ತರಿಸಿ ಇರಿಸಿರೆ। ಉತ್ತಮ ಪೇರಲಹಣ್ಣು। ಕಿತ್ತಳೆ ನೇರಳ ಹಣ್ಣು। ಬಯಸಿರುವೆನು। ತರಿಸಿ ತರಿಸಿ ಇರಿಸಿರೆ। ಬಯಕೆ ಪೂರ್ಣ ಮಾಡಿರೆ॥4॥

ಮಂಜುಳ ವೇಣಿಯೆ ರಂಗನ ರಾಣಿಯೆ — ರಾಗ: ಮೋಹನ

ಮಂಜುಳ ವೇಣಿಯೆ ರಂಗನ ರಾಣಿಯೆ। ಅಂಗನೆ ಗರ್ಭಾದಪೇಕ್ಷೆಗಳು। ತಾಯಿಯ ಪ್ರೇಮವೂ ಅತ್ತೆಯ ಒಲವೂ। ಪತಿಯ ಅನುರಾಗವೂ ಬಯಸುವಳೂ॥1॥ ಮೊದಲನೆ ತಿಂಗಳಲಿ ಏನನ್ನು ಅರಿಯದೆ। ತನ್ನಲ್ಲಿ ತಾನಾಗಿರಲು ಬಯಸುವಳು। ಎರಡನೇ ತಿಂಗಳಲಿ ಅತಿ ಬಳಲುತ ನಾರಿ। ಸುತನ ಬಯಕೆ ಕಾಟ ಕಾಡುತಲಿ॥2॥ ಮೂರನೆ ತಿಂಗಳಲಿ ಹುಳಿಮಾವಿನ ಕಾಯಿ। ಉಪ್ಪಿನಕಾಯಿಯನು ಬಯಸುವಳು। ನಾಲ್ಕನೇ ತಿಂಗಳಲಿ ನಾನಾ ಕನಸು ಕಾಣುತ। ತನ್ನ ಮನದಲ್ಲೆ ತಾನು ನಗುನಗುತಿರುವಳು॥3॥ ಐದನೆ ತಿಂಗಳಲಿ ಮಲ್ಲಿಗೆ ಮೊಗ್ಗಿನ ಜಡೆ। ಹಸಿರು ಸೀರೆ ಕುಪ್ಪಸ ಉಡಲು ಬಯಸುವಳು। ಆರನೇ ತಿಂಗಳಲಿ ಹರಳಿನಡ್ಡಿಕೆ ಬಳೆ। ಮುತ್ತಿನುಂಗುರ ಹಾಕಲು ಬಯಸುವಳು॥4॥ ಏಳನೆ ತಿಂಗಳಲಿ ಬಯಕೆಯ ಚಪಲದಿ। ತಾಯಿ ಕೈ ತಿಂಡಿಯ ತಿನ್ನಲು ಬಯಸುವಳು। ಎಂಟನೆ ತಿಂಗಳಲಿ ಪತಿಯ ಹಿತದ ಮಾತುಗಳು। ಕೇಳುತಿರಬೇಕೆಂದು ಬಯಸುವಳು॥5॥ ಒಂಭತ್ತನೆ ತಿಂಗಳಲಿ ಸೀಮಂತ ಮಾಡಲು। ಸೀರೆಕುಪ್ಪಸ ಉಡಿಸಿ ಬಳೆಯ ತೊಡಿಸುವರು। ಅರಿಸಿನ ಕುಂಕುಮ ಹಚ್ಚಿ ವಿಧ ವಿಧ ತಿಂಡಿಗಳು। ಫಲಪುಷ್ಪ ಎಲೆ ಅಡಿಕೆ ಉಡಿಯ ತುಂಬುವರು॥6॥ ಹತ್ತನೇ ತಿಂಗಳಲಿ ನಾರಿಯರು ವಾರಿಜೆಗೆ। ಸುಖವಾಗಿ ಕಂದನ ಪಡೆ ಎಂದು ಹರಸುವರು। ನವಮಾಸ ತುಂಬಲು ವಾರಿಜೆ ಶುಭದಿನದಿ। ಕೃಷ್ಣನಂಥ ಕಂದನ ಪಡೆದು ಸುಖಿಸುವಳು॥7॥

ರಂಗನ ರಾಣೀ ಮಂಜುಳವೇಣೀ — ರಾಗ:ಕಾಂಬೋಧಿ

ರಂಗನ ರಾಣೀ ಮಂಜುಳವೇಣೀ। ಅಂಗನೆ ಗರ್ಭದ ಅಪೇಕ್ಷೆಗಳು॥ಪ॥ ಶರಣು ಬ್ರಹ್ಮನರಾಣಿ ಶರಣು ಮಂಜುಳ ವೇಣಿ। ಶರಧಿ ಸುತಳ ಬಯಕೆ ವರ್ಣಿಸುವೆ॥ಅ.ಪ॥ ಪ್ರಥಮ ತಿಂಗಳಲ್ಲಿ ಅತಿ ಬಳಲುತ ನಾರಿ। ಸುತನು ಬರುವಾ ಸ್ಥಿತಿಯಾ ಕಾಣುತಲಿ। ಘೃತ ಕ್ಷೀರ ಪರಮಾನ್ನ ಹಿತವಾಗದು ತನ್ನ। ಸುತನ ಬಯಕೆ ಕಾಟ ತಾಳುತಲೀ॥1॥ ಎರಡನೇ ತಿಂಗಳಲ್ಲಿ ಎಳೆಯ ಹುಣಿಸೆ ನೆಲ್ಲಿ। ಹುಳಿಯ ದಾಡಿಮ ಫಲವು ಬಹಳ ಒಲವು। ಹುಳಿಮಾವಿನ ಕಾಯಿ ಸವಿಯುತ ವನದಲ್ಲಿ। ಕೆನೆ ಮೊಸರವಲಕ್ಕಿ ಬಯಸುವಳು॥2॥ ಮೂರನೆಯ ತಿಂಗಳಲ್ಲಿ ನಾರಿಗೆ ನಿಜವಾಗಿ ತೋರಿ ಬರಲು ತನ್ನ ತವರಿನೊಳು। ವಾರಿಗೆ ಗೆಳತಿಯರ ಕೂಡಾಡುವ ವನದಲ್ಲಿ ಕೆನೆ ಮೊಸರು ಬುತ್ತಿ ಬಯಸುವಳು॥3॥ ನಾಲ್ಕನೆಯ ತಿಂಗಳಲ್ಲಿ ಪಾಕದೊಳದ್ದಿದ। ಶಾವಿಗೆ ಜೀಲೇಬಿ ಚಿರೋಟಿಗಳು। ಬಾಸುಂದಿ ಪೂರಿ ಕೀರು ಬೇಸನ್ನುಗಳು। ದೋಸೆ ಸೀಕರ್ಣೆಗಳ ಬಯಸುವಳು॥4॥ಐದನೆ ತಿಂಗಳಲ್ಲಿ ಎಸೆವ ಸಂಪಿಗೆ ದವನ। ಕುಸುಮಗಂಧಿಗೆ ಮರುಗ ಹೆರಳ ಬಯಸುವಳು। ಹಸಿರು ಕುಪ್ಪುಸ ತೊಟ್ಟು ಹಸಿರು ಬಳೆಯನಿಟ್ಟು। ಹೊಸತರನೆಲ್ಲವ ಬಯಸುವಳು॥5॥ ಆರನೇ ತಿಂಗಳಲ್ಲಿ ಆರಿದನ್ನವು ಬೇಳೆ। ಸಾರು ಉಪ್ಪಿನಕಾಯಿ ಬಹಳ ಒಲವೂ। ಕೀರು ಮಾಲತಿಗಳೆ ಪರಡಿ ಪರಮಾನ್ನವು। ಹೊಸ ತರದಡಿಗೆಯ ಬಯಸುವಳು॥6॥ ಏಳನೇ ತಿಂಗಳಲ್ಲಿ ಹೋಳಿಗೆಣ್ಣೂರಿಗೆ। ಹೊಸ ಬೆಣ್ಣೆ ಕಾಸಿದ ತುಪ್ಪ ಬಯಸುವಳು। ಪರಡಿ ಪರಮಾನ್ನ ಚಕ್ಕುಲಿ ಕರ್ಜಿಕಾಯಿ ಬಯಸುವಳು। ನಲಿಯುತ ತೌರೂರಿಗೆ ತೆರಳುವಳು॥7॥ ಎಂಟನೆ ತಿಂಗಳಲ್ಲಿ ಕಂಠಿ ಮೋಹನಮಾಲೆ। ಮುತ್ತು ಹವಳದಸರ ಬಯಸುವಳು ಹಸಿರು ಪತ್ತಲವುಟ್ಟು ಎಸೆವೋ ಕುಪ್ಪುಸ ತೊಟ್ಟು ಹರಳು ಕೆಂಪಿನ ಓಲೆ ಬಯಸುವಳು॥8॥ ಒಂಭತ್ತನೆ ತಿಂಗಳು ತುಂಬಲು ಅಂಗನೆಗೆ ಬಂದು ಸೊಂಟದ ಬ್ಯಾನೆ ಶೂಲಿಗಳು ಸಂದು ಬಿಗಿದು ಬಹಳ ಶ್ರಮ ಪಡುತಾ ನಾರಿ ಚಂದ್ರನಂದದಿ ತೋರ್‍ವ ಕಂದನ ಪಡೆದಿಹಳು॥9॥

ಶ್ರೀರಮಣನ ಪಾದಸಾರಸಕೆರಗುವೆ **ರಾಗ:ಶ್ರೀರಂಜನಿ**

ಶ್ರೀರಮಣನ ಪಾದಸಾರಸಕೆರಗುವೆ। ಶ್ರೀಮಧ್ವಾಚಾರ್ಯರಿಗೆ ವಂದಿಸುತ ಭಾರತಿಗೆ ನಮಿಸಿ ಹೇರಂಭನ ಭಜಿಸಿ ಮಾನವೇಂದ್ರನ ಕಾಂತೆ ಭೂನಂದನೆ ತಾನು ಏನೇನು ಬಯಸಿದಳು॥ಪ॥ ತಿಂಗಳು ತುಂಬಲು ಕಂಗಳು ಗುಳಿಬೀಳೆ। ಸರ್ವಾಂಗವೂ ಕೃಶವಾದವು ಬಂಗಾರದ ಬಣ್ಣ ಮಂಗಳಾಂಗಿಯ ಮೈ ಶೃಂಗರಿಸುತಲೆ ಶ್ರೀರಂಗನಾಮಣಿಗೆ॥1॥ ಮಾಸವೆರಡಾಗಲು ಮಂಚದಿಂದಿಳಿಯಾಳು। ದುಂಡು ಮಲ್ಲಿಗೆಯ ಮುಡಿಯೋಳು। ಖಂಡ ಸಕ್ಕರೆ ದ್ರಾಕ್ಷಿ ಪೆಂಡ ಖರ್ಜೂರವ ಕಂಡರೆ ಮುಖ ತಿರುಗಿಸಿಕೊಂಡವಳು॥2॥ ತಿಳಿಯಿತು ಬಯಕೆಯು ನಳಿನದಳಾಕ್ಷಿಗೆ। ಎಳೆ ಹುಳಿಬೆರೆತ ಎಗಚಿ ಹಣ್ಣನು ಕಿತ್ತಲೆ ದಾಳಿಂಬೆ ನೇರಳೆಹಣ್ಣುಗಳ। ತಿನ್ನಬೇಕೆಂದು ಬಲು ಬಯಸುವಳು॥3॥ ಹೂರಣ, ಹುಗ್ಗಿಡುಬು ಎಣ್ಣೂರಿಗೆ ಚಕ್ಕುಲಿ ಖಾರ ಫೇಣಿಗಳನು ಆಂಬೋಡೆ ಬೆರೆತ ಗೊಜ್ಜನು ನಾರಿ ತಿನ್ನಬೇಕೆಂದು ಕಡುಬಯಸುವಳು॥4॥ ಎಳೆ ಬಿಸಿಲಿನಲ್ಲಿ ತನ್ನ ಗೆಳತಿಯರೊಡನೆ। ತಂಗಳುಣ್ಣಬೇಕೆಂಬಳೂ। ಎಳೆ ಮಂಚದೊಳು ತನ್ನ ಲಲನೆಯರೊಡನೆ ಕುಳಿತು ಮಂಚದ ಮೇಲೆ ಮಲಗಬೇಕೆಂಬಳೂ॥5॥ ಹೊಸ ಪತ್ತಲ ಉಟ್ಟು ಹಸಿರು ಬಣ್ಣದ ರವಿಕೆಯ ಬಯಸುವಳು। ಬಿಸುಜಲೋಚನೆ ಬೆಸಗೊಂಡು ಬಳಲುತ ಅಸಮಾಧಾನದಿಂದಲೇ ವಸುಧೆಯೊಳ್ ಮಲಗುವಳು॥6॥ ನವವೈದು ತಿಂಗಳು ತರುಣಿಗೆ ತುಂಬಲು ಹರುಷದಿಂದ ಬಾಲೆಯರು ಪರಿಪರಿಬಳೆಗಳ ಕರದೊಳು ಇರಿಸುತ್ತ ಪರಮ ಪುರುಷ ಶ್ರೀನರಹರಿ ಜಯವೆಂದು॥7॥

ಹಸಿರು ಕಡ್ಡಿಯ ಸೀರೆ **ರಾಗ: ಖರಹರಪ್ರಿಯ, ಆದಿತಾಳ**

ಹಸಿರು ಕಡ್ಡಿಯ ಸೀರೆ ತೋಪು ಮುಸುಕು ಮ್ಯಾಲೆ ಮಾಡಿ। ಬಿಸಿಲೀಗೆ ಬೆನ್ನ ಕೊಟ್ಟು ನಡೆಯಂಗಾಗೇತ್ರಿ। ಬಾಲನ ಬವ ಖೇಲಿ ಬಯಸಂಗಾಗೈತ್ರಿ॥ಪ॥ ಹಸಿರು ಕುಪ್ಪಸದ ಮ್ಯಾಲೆ ಹಸನಾದೆರಡು ವಂಕಿಯನ್ನಿಟ್ಟು। ಬಿಸಿಲಿಗೆ ತೋಳ ತಿರುವಿ ನಡೆಯಂಗಾಗೈತ್ರಿ। ಬಾಲನ ಬವ ಖೇಲಿ ಬಯಸಂಗಾಗೈತ್ರಿ। ಕಾಲ ಪಿಲ್ಲಿ ಗೆಜ್ಜೆ ಪಟ್ಟಿ ಹಾರ ಬೈತಲೆ ಬಟ್ಟು। ವಾಲೆ ಚಳತುಂಬಿ ನಿಟ್ಕೊಂಡು ನೆಡೆಯಂಗಾಗೈತ್ರಿ। ಬಾಲನ ಬವ ಖೇಲಿ ಬಯಸಂಗಾಗೇತ್ರಿ॥1॥ ಬಿಳಿಯಾ ಜೋಳದ ರೊಟ್ಟಿ ಎಳೆಯ ಜವಳಿ ಕಾಯಿಪಲ್ಯ। ಹೊಳೆಯ ದಂಡೆಲೀ ಕುಂತ್‌ಕಂಡ್ ಉಣ್ಣಾಂಗಾಗೈತ್ರಿ। ಬಾಲನ ಬವ ಖೇಲಿ ಬಯಸಂಗಾಗೇತ್ರಿ। ಕರಾದು ಮುರಾದು ಕರ್ಜಿಕಾಯಿ। ಹಪ್ಪಳ ಸಂಡೀಗುಪ್ಪಿನ ಕಾಯಿ। ಹೊಂಗೆ ದಂಡೇಲಿ ಕುಂತ್ ಕಂಡ್ ಉಣ್ಣಾಂಗಾಗೇತ್ರಿ। ಬಾಲನ ಬವ ಖೇಲಿ ಬಯಸಂಗಾಗೇತ್ರಿ॥2॥ ಸಜ್ಜೆ ಅನ್ನಾರೊಟ್ಟಿ ಎಣ್ಣೆ ಬದನೆಕಾಯಿ ಪಲ್ಯ। ಹಗರಿ ದಂಡೇಲಿ ಕುಂತ್ ಕಂಡ್ ಉಣ್ಣಾಂಗ್ಯಾಗೇತ್ರಿ। ಬಾಲನ ಬವ ಖೇಲಿ ಬಯಸಂಗಾಗೇತ್ರಿ। ಹೂಗಾರ, ಮನೀಗೆ ಹೋಗಿ ಹೂವಿನ ದಂಡೆಯನ್ಹೆಣೆಸ್ಕೋಂಡು। ರಾಯಾರ ಎಡಗಡೆ ಕುಂತ್ ಕಂಡ್ ಮುಡಿಯಂಗಾಗೇತ್ರಿ। ಬಾಲನ ಬವ ಖೇಲಿ ಬಯಸಂಗಾಗೇತ್ರಿ॥3॥

ಬಳೆ ತೊಡಿಸುವುದು

ಬಳೆಯಂ ತೊಡಿಸಿದರು **ರಾಗ: ಬೇಹಾಗ್, ಆದಿತಾಳ**

ಬಳೆಯಂ ತೊಡಿಸಿದರು॥ಪ॥ ವಿಲಸಿತ ಗುಣಯುತೆ ಗಿರಿಸುತೆಗೇ॥ಅ.ಪ॥ ಕುಸುಮಾಸ್ತ್ರನ ಪಾಲಿಸಿ ಜಸವಂ ತಳೆದಾ ಮಹಾ ಬಿಸಜಾಯತ ನೇತ್ರೆಗೇ ಶಶಿ ಮುಕುಟೆಗೆ ಸಂತಸದಿಂದಲಿ॥1॥ ಪಾದಸೇವೆಯ ಮಾಡುವ ಸುದತೀ ಸತಿ ಪಾಡುವ ಮಧುರ ಗೀತೆಗಳೊಪ್ಪಿರೆ ವಿಧವಿಧ ವಿಭವಾಸ್ಪದವಿದೆನಲು॥2॥ ನರಸಿಂಹ ಸಹೋದರಿ ಕರುಣಾಕರಿ ಶಂಕರಿ ಪರಮ ಸದ್ಗುಣ ಮಂಜರಿ ವರದೆಯೆನಿಪ ಶಂಕರನರಸಿಗೆ॥3॥

ಬಳೆಯ ನೀಡಲಿ ಬಂದ **ರಾಗ: ನಾಯಕಿ-ಆದಿತಾಳ**

ಬಳೆಯ ನೀಡಲಿ ಬಂದ। ರಜತಾದ್ರಿಯಿಂದ।ತನ್ನ ಮಡದಿಯರರಿಯದಂತೆ ವರದ ನಂಜುಂಡ॥ಪ॥ ಹಾವಿಗೆಯನೆ ಮೆಟ್ಟಿ ಹಾವು ಶಿರಕೆ ಸುತ್ತಿ। ಕಾವಿ ಬಟ್ಟೆಯನುಟ್ಟು। ಕೈಲಾಸ ಬಿಟ್ಟು। ಹೂವಿನಬಳೆ ಸಂಚಿ ಹೆಗಲ ಮೇಲಿಟ್ಟು। ಹಿಮಗಿರಿ

ಸುತೆಯ ಮೇಲ್ ದೃಢ ಮನಸಿಟ್ಟು॥1॥ ಸಣ್ಣ ಸಾಣೆಯ ಬಳೆ ಚಿನ್ನದ್ಹೂವಿನ ಬಳೆ। ಹೊನ್ನ ಹೊಂಬಾಳೆಯಂತ ಹೊನ್ನ ಹೊಸ ಬಳೆಯು ಹಸಿರು ಸಾಣೆಯ ಬಳೆ ಕುಸುರಿ ಬಣ್ಣದ ಬಳೆ। ಹಸನಾಗಿ ರಚಿಸಿದ ಕುಸುಮ ಕುಂಕುಮ ಬಳೆಯ॥2॥ ಈಶ ನಿಮ್ಮಯ ದೇಶ ನಾಮವ ಪೇಳು। ಕಾಶಿಯ ಕ್ಷೇತ್ರದೊಳ್ ಇರುವೆನು ಕೇಳು। ಸುವಾಸಿನೀಯರು ಪೂಜೆ ಮಾಡುವರು ತಾಳು। ಭಾಸುರಾಂಗಿಗೇ ಬಳೇ ತೊಡುವೆಯಾ ಪೇಳು॥3॥ ಅರ್ಧಚಂದ್ರಾರ್ಕನ ತಿದ್ದಿದ ಬಳೆಯು। ಭದ್ರೆ ಗಂಗೆಯ ಕೈಗೆ ತೊಡುವೆ ಬಾರೆಂದ। ಪಂಚವರ್ಣದ ಬಳೆ ಪಾಂಚಿಯ ಬಳೆಯು। ಶಂಖ ವರ್ಣದ ಬಳೆ ಕಂಕಣಿ ಬಳೆಯು। ಪಂಚಮುಖನು ನಗುತ ಪಂಚ ಗಂಗೆಯ ಕೈಗೆ। ವಂಕಿ ಬಳೆಯನಿಟ್ಟು ಶಂಕರ ತಾನೂ॥4॥ ಪರಮೇಶ ಶೆಟ್ಟಿ ಪಾರ್ವತಿ ಪ್ರಿಯನಾಂ। ಗರಳಪುರಾ ಶೆಟ್ಟಿ ಗಂಗಾಧರನು। ಮೃಗಧರ ಶೆಟ್ಟಿ ತಾನೂ ವರಗೌರೀ ಪ್ರಿಯನು। ಕರವ ಪಿಡಿವೋ ಕಾಶೀ ವಿಶ್ವೇಶ್ವರನೂ॥5॥

ಬಳೆ ಬಂದಿದೆ ಬಾರೆ ಗೌರಿ

ಬಳೆ ಬಂದಿದೆ ಬಾರೆ ಗೌರಿ ಬಳೆಯ ಪೂಜಿಸು ಬಾರೆ॥ಪ॥ ಕೈಲಾಸದಿಂದ ಬಳೆಗಳ ನಿನಗೋಸ್ಕರ ತಂದ ಬಳೆಗಾರ ಬಾಗಿಲಿಗೆ ಬಂದ। ಗಿರಿರಾಜನ ಸುತೆ ಪಾರ್ವತೀದೇವಿ। ಶರಣ ಸಂಜೀವಿ ಭಕ್ತರೋದ್ಧಾರಿ। ಕರಿ, ಕೆಂಪು, ಹಸಿರು ಚಿತ್ತಾರದ ಬಳೆಗಳನು ತಂದೆ॥1॥ ಹರನೆಂಬ ಶೆಟ್ಟಿ ಬಂದೂ ಪಾರ್ವತಿ ಮರುಳು ಮಾಡಿದನಲ್ಲೇ। ಹಳದಿ ನೀಲದ ಬಳೆ ನಿನಗಿಡಬೇಕೆಂದು ಹದಿಹರೆಯದವರೆಲ್ಲಾ ಕರೆದು ಪೇಳಿದರು। ಮುತ್ತಿನಾ ತಟ್ಟೇಲಿ ಆರತಿ ಬೆಳಗಿ ಲಕ್ಷ್ಮೀ ಭಾರತಿ ಗಾನವ ಪಾಡಿ ಪುತ್ರರ ಪಡೆಯೆಂದಕ್ಷತೆಯಾ ತಳೆದು ಸೃಷ್ಟಿಗೊಡೆಯ ಗುರುವೆಂಕಟಾ ನಾರಸಿಂಹ ಭಕ್ತರ ಪಾಲಿಪೋದು ಕೃಪೆಯಿಂದ॥3॥

ಭೂಮಿದೇವಿಯ ಕುವರಿಗೆ — ರಾಗ: ಮಧ್ಯಮಾವತಿ

ಭೂಮಿದೇವಿಯ ಕುವರಿಗೆ ಜಾನಕಿಗೆ। ಕಾಮಿತದಾತ ರಾಮಚಂದ್ರನರ್ಧಾಗಿಂಗೆ ಸಿರಿಗೆ॥ಪ॥ ಸಾಮಜಗಮನೆಗೆ ಸೋಮ ಸುಂದರಿಗೆ। ಕಾಮಿತಾರ್ಥ ಸಂದಾಯಿನಿಗೇ ಸುರ। ಭಾಮಾ ಮಣಿಯರು ಹೀರದ ಬಳೆಗಳ। ಪ್ರೇಮದಿಂದ ತೊಡಿಸುತ ಪಾಡಿದರು॥ಅ.ಪ॥ ರತುನದ ತಟ್ಟೆಯ ತಾವಳವಡಿಸಿ ವನಿತೆಯರೆಲ್ಲಾ। ಅತುಳ ಮಂಗಳ ಗಾನಗಳನು ಪಾಡೀ। ಅತಿ ಮುದದಿಂದಾರತಿಗಳ ಬೆಳಗುತ। ಕಂತುಕವಾಂತು ನವರತುನದ ಬಳೆಗಳ। ಮತಿವಂತೆಯ ಕರಯುಗಳಕೆ ತೊಡಿಸುತ। ಸತತ ಸೌಖ್ಯವೆಂದಾಶೀರ್ವದಿಸುತ॥1॥ ರಮೆಯ ಮುಂಗುರುಳು ಗಳನು ನೇವರಿಸಿ। ಆನಂದದಿಂದ ಸುಮದ ದಂಡೆಗಳನು ಮುಡಿಯೊಳು ಮುಡಿಸೀ । ವಿಮಲವಾದ ಕಸ್ತೂರಿಯ ತಿಲುಕವ ಕಮಲ ಸಂಭವೆಯ ಫಾಲಕೆ ಧರಿಸುತ। ಅಮಿತ ರತ್ನದಾ ಭರಣಗಳಿಡುತಲಿ। ಮಮತೆಯಿಂದ ಬಳೆಗಳ ತೊಡಿಸಿದರು॥2॥ ಅಂಗಜಮಾತೆಯ ನಳಿತೋಳು ಗಳ। ಶೃಂಗಾರಗೈದು ಭಂಗಾರದುಂಗುರಗಳ ತೊಡಿಸುತಲೀ। ಮಾಂಗಿರಿ ಸದನೆಗೆ ಮದನನ ಜನನಿಗೆ। ರಂಗನಾಥನರ್ಧಾಂಗಿಗೆ ನಿರುಪಮ। ಮಂಗಳವೆನ್ನುತ ಸಂಭ್ರಮದಿಂದಲಿ। ಅಂಗನೆಯರು ತಾವಾಶೀರ್ವದಿಸಿದರ್॥3॥

ಹೂ ಮುಡಿಸುವುದು

ಕುಸುಮವ ಮುಡಿಸಿದರು — ರಾಗ: ಮೋಹನ, ಆದಿತಾಳ

ಕುಸುಮವ ಮುಡಿಸಿದರು। ಬಿಸಜಾಕ್ಷಿಗೊಲಿದು॥ಪ॥ ಕ್ಷೀರಸಾಗರ ಜಾತೆ। ನೀರಜಭವ ಮಾತೆ। ಶ್ರೀರಮಣಿಗೆ ವರ। ಪಾರಿಜಾತ ದವನವ॥1॥ ಶ್ರಿತಕರಾನನೆಗೆ। ಪೂತ ತಾವರೆಯನು। ಶ್ರೀತರುಣಿಗೆ ನವ ಕೇತಕಿ ಮೊದಲಾದ॥2॥ ಬಾಲ ಶಶಿಪ್ರಭ ಫಾಲೆಗೆ ನತಜನ। ಪಾಲೆಗೆ ಶ್ರೀಹರಿ ಲೋಲೆಗೆ ಮಲ್ಲಿಕಾ॥3॥

ನವ ಮಲ್ಲಿಕಾದಿ ಪೂಗಳ — ರಾಗ: ಮಾರ್ಗಹಿಂದೋಳ

ನವ ಮಲ್ಲಿಕಾದಿ ಪೂಗಳ ಪನ್ನೀರ ಚೆಲ್ಲಿದಾ। ತರುಣಿ ರುಕ್ಮಿಣಿಗೆ ಹರಿಯು ನಗುತಾ ಮುಡಿಸಿದಾ॥ಪ॥ ಕೇತಕೀ ಖ್ಯಾದಿಗೆಸಂಪಿಗೆ ಜಾಜಿ ಮಲ್ಲಿಗೆ। ಜಗನ್ಮಾತೇರುಕ್ಮಿಣಿಗೆ ಹರಿಯು॥ ಪ್ರೀತಿಯಿಂದಲಿ॥1॥ ಪಂಚಪದ್ಮಾ ಪಾರಿಜಾತ ಪಾದರೀರೋಚವು। ಚಂಪಕಾಪುನ್ನಾಗ ಕೇತಕೀ। ಮರುಗದವನವು॥2॥ ಸ್ವರ್ಣವರ್ಣದಲ್ಲಿಸುವರ್ಣ ಕುಸುಮವಾ। ಪ್ರಾಣೇಶವೀಠಲನ ಮನದಲ್ಲಿ ಸ್ಮರಿಸುತ್ತಾ। ಕುಸುಮ ಮುಡಿಸಿದಾ॥3॥

ರಮಣಿಯರೊಲಿದು ಮುಡಿಸಿದರು — ರಾಗ: ಬೇಹಾಗ್

ರಮಣಿಯರೊಲಿದು ಮುಡಿಸಿದರು ಕುಸುಮಗಳ॥ಪ॥ ವಾರಿಜ ಸದನೆಗೆ ಮಾರನ ಜನನಿಗೆ। ಮಾರಮಣಿಗೆ ಕಾಳೋರಗ ವೇಣಿಗೆ। ನೀರೆಯರತಿ ಮುದ ಭಾರವನಾಂತು ಗಂಭೀರೆಗೆ ಚಂಪಕ ಮಲ್ಲಿಗೆಯಾ ಮುಡಿಸಿದರು॥1॥ ಇಂದಿರಾದೇವಿಗೆ ಚಂದಿರನನುಜೆ ಗೋವಿಂದನ ರಮಣಿಗೆ ಮಂದಗಮನೆಯರಾ। ನಂದದೆ ಪರಿಮಳ ಗಂಧವಿಡಿದ ದಿವ್ಯ। ಕೆಂದಾವರೆಗಳ ಮುಡಿಸಿದರೂ॥2॥ ಮಂಗಳದಾಯಕ ರಂಗನಾಯಕಿ ಮಾ। ತಂಗಗಮನೆಗೆ ಪನ್ನಂಗವೇಣಿಗೆ ಸಿರಿಗೆ। ಮಂಗಳಗಳ ಪಾಡುತ ತಾಳೆಯ ಹೂವ। ಮಾಂಗಿರಿ ಪತಿಯರ್ಧಾಂಗಿಗೆ ಮುಡಿಸಿದರೂ ॥3॥

ರಾಜೀವಲೋಚನೆ ರಾಜಿತೆಗೇ — ರಾಗ:ಕಾಂಬೋದಿ

ರಾಜೀವಲೋಚನೆ ರಾಜಿತೆಗೇ। ಪಂಕೇಜಭವಾಮರರಾರ್ಚಿತೆಗೇ। ರಾಜ ಸುದಯೆಗೇ ಮೂಜಗ ದಂಬೆಗೆ। ರಾಜವದನೆಯರು ಸೋಜಿಗಗೊಳುತಲಿ। ಜಾಜಿಯಾ ಹೂವ್ವಾ ಮುಡಿಸಿದರು॥1॥ ಚಂಪೆಯಾದ್ಯುತಿ ಸಂಪತ್ತಿನವೋಲ್। ಸಂಪನ್ನಾಯಕಿ ಪೆಂಪೆಸೆಯೇ। ಸಂಪತ್ಪದೆ ಗಿಣೀಗಿಂಪಾ ರ್ಚಿತೆಗೆ। ಸಂಪನ್ನೆಯರು ಗುಂಪಾಗಿ ಕಟ್ಟಿಹ। ಸಂಪಿಗೆ ಹೂವಾ ಮುಡಿಸಿದರು॥2॥ ಪುಲ್ಲಲೋಚನೆ ಶ್ರೀ ಪರಮ ಪುರುಷನಾ। ಸಲ್ಲಲಿತಾಮಣಿ ರುಕ್ಮಿಣಿಗೇ। ಚಲ್ವ ವದನೆಯರೂ ಸಲ್ಲಾಪದಿಂದಲೀ। ಮೆಲ್ನುಡಿಯಾಡುತ ಉಲ್ಲಾಸದಿಂದಲೀ। ಮಲ್ಲಿಗೇ ಹೂವಾ ಮುಡಿಸಿದರು ॥3॥

ಶ್ರೀಕರವಾದ ದ್ವಾರಕೆಯೊಳಗೆ — ರಾಗ:ಶ್ರೀ

ಶ್ರೀಕರವಾದ ದ್ವಾರಕೆಯೊಳಗೆ ಲೋಕನಾಯಕಿ ರುಕ್ಮಿಣಿ ಬೆಳಗೆ ಶ್ರೀಕಾಂತನಿಗೂ ಪಿನಾಕಿಯಾ ಪ್ರಿಯಗೂ ಗೋಕುಲ ಲೋಕದೊಳಿರುವ ನಾರಿಯರೆಲ್ಲಾನೇಕಾ ಸಂಭ್ರಮದಿ ನೆರೆದರು॥ಪ॥ ಹಂಸವಾಹನ ಪಿತನರಗಿಣಿಗೆ ಪುಂಸವನವು ಮಾಡಿಸಿ ಕಡೆಗೆ ಹಂಸಗಳೊಳಗೆ ಸುಧಾಂಶವು ಬೆಳಗೆ ಕಂಸಹರನು ಸೀಮಂತವನಾಗ ಸಂಖ್ಯೆಯಿಂ ನಡೆಸಿ ಮುದದಿಂದ॥1॥ ಕೊಡಿಸುತ ಬಹುಫಲ ದಕ್ಷಿಣೆಯ ಉಡಿಸುತ ನವದುಕೂಲವ ತೊಡಿಸಿ ಕಂಚುಕೆಯ ನುಡಿಸಿ ತಂಬೂರಿಯ ಪೊಡವಿಯ ವಿಪ್ರರು ಗಡಣದಿ ಹರಸುತ ಮಡದಿಯರು ಹೂವ ಮುಡಿಸಿಯಾರು॥2॥ ಮರಿದುಂಬಿಯು ಝೇಂಕರಿಸುವ ಅರುಣೋದಯದಲಿ ಸುರಿದಿರುವ ಪರಿಮಳ ಭರಿತ ವಾಗಿರುವ ಸುರತರುಣಿಯರು ಹರಸುತ ಪ್ರಿಯೆಗೆ ಸುರಗಿಯ ಹೂವ ಮುಡಿಸಿಯಾರು॥3॥ ಸಂಜೆಯ ಹೊತ್ತಿನೊಳರಳುವುದು ಮಂಜು ತಗಲುತಾನುದುರುವುದು ಸಂಜೆನಿಸುವುದು ರಂಜಿತವಹುದು ಕಂಜಾಕ್ಷನ ರಾಣಿ ಕುಂಜರ ಗಮನೆಗೆ ರಂಜನದ್ಹೂವ ಮುಡಿಸ್ಯಾರು॥4॥ ಹೂವಿನ ವತ್ಸರದೊಳು ವೃತ್ತಾಭೂವಧುಗಳು ಸ್ಥಿರಗೊಳಿಸುತ್ತಾ ಭಾವದೊಳ್ಮತ್ತಾ ದೇವಿಗೆನ್ನುತ್ತಾ ಭಾವಿಸಿ ತಂದುಪಚರಿಸಿಸೌರಭ್ಯದ ಸೇವಂತಿಗೆ ಹೂವ ಮುಡಿಸ್ಯಾರು॥5॥ ಪೂಜಾಪುಷ್ಪಕ ದೊಳಗೆಲ್ಲಾ ಶಿವಪೂಜೆಗೆ ಯೋಗ್ಯವಾಗಿಹುದಲ್ಲಾ ಸೋಜಿಗವಲ್ಲಾ ಮಾರ್ಜಷಿಬಲ್ಲಾ ಮೂರ್ಜಗದೊಡೆಯನ ಪಟ್ಟದ ರಾಣಿಗೆ ಜಾಜಿಯ ಹೂವ ಮುಡಿಸ್ಯಾರು॥6॥ ಹಸ್ತಮಯದಿ ವಿಸ್ತರಿಸುವುದು ಅದು ಉತ್ತಮ ಜಾತಿಯೊಳು ಬೆಳೆದಿಹುದು ಚಿತ್ತದೊಳಿದು ನೃತ್ಯರು ಕೊಯ್ದು ಚಿತ್ತಜ ಪಿತನರ್ಧಾಂಗಿಗೆ ಕಸ್ತೂರಿ ಮಲ್ಲಿಗೆಯ ಮುಡಿಸ್ಯಾರು॥7॥ ಪುಂಡರೀಕಾಕ್ಷಿ ರುಕ್ಮಿಣಿ ಯೆನುತಾ

ಭೂಮಂಡಲ ಸತಿಯರು ತೋಷಿಸುತಾ ಹಿಂಡುವರೆಸುತಾ ಕಂಡು ನುತಿಸುತಾ ರುಂಡಮಾಲನ ಪ್ರಿಯ ಶ್ರೀಹರಿ ಅರಸಿಗೆ ದುಂಡುಮಲ್ಲಿಗೆಯಾ ಮುಡಿಸ್ಯಾರು॥8॥ ಚೆನ್ನೆಯ ಚೆಲುವೆಯರಾಶ್ರಿತರು ಸನ್ನುತಪಾಡುತ ಸುದತಿಯರು ಮನ್ನಣೆಯವರು ಸನ್ನುತ ಹಿತರು ಪನ್ನಗಶಯನನ ಪರಮ ಸಂಪ್ರೀತೆಗೆ ಪುನ್ನಗದ ಹೂವ ಮುಡಿಸ್ಯಾರು॥9॥ ನಾಗಶನಯನನ ಮಡದ್ಯೆನುತ ನಾಗಕನ್ನಿಕೆಯರು ತೋಷಿಸುತಾ ಆಗವೆರಸುತಾ ಬೇಗ ನುತಿಸುತಾ ನಾಗಾರಿಧ್ವಜನ ಪರಮ ಸುಪ್ರೀತೆಗೆ ನಾಗಸಂಪಿಗೆಯ ಮುಡಿಸ್ಯಾರು॥10॥ ಹೊಂಪುಳ ವರ್ಣದಿ ಮೆರೆಯುವುದು ತಂಪುಕಾಲದಿ ತಾನರಳುವುದು ಮುಂಪಿಸುತಿಹುದು ಕೆಂಪುಗೊಂಡಿಹುದು ಸೊಂಪುಗೊಳ್ಳುತಾ ನಾರಾಯಣನರಸಿಗೆ ಸಂಪಿಗೆಯ ಹೂವ ಮುಡಿಸ್ಯಾರು॥11॥ ಭಾವಜ ತಾನುದಿಸುವನೆಂದು ಭಾಮಿನಿಯರು ನೆರೆನಡೆತಂದು ಭಾವದೊಳಂದು ದೇವಿಗೆ ನಿಂದು ತಾವರೆಯನು ಘನಮಾತೆಗೆ ಸತಿಯರು ತಾವರೆಯ ಹೂವ ಮುಡಿಸ್ಯಾರು॥12॥ ಕ್ಷೀರವರ್ಣದಿ ಮೆರೆದಿರುವ ಭೂರಿನೇತ್ರನಿಗತಿ ಪ್ರಿಯಕರವ ನಾರಿಯನೊರೆವ ನಾರದತರುವ ಪಾರವಾರ ಗಂಭೀರದಿ ಮೆರೆಯುವ ಪಾರಿಜಾತವನು ಮುಡಿಸ್ಯಾರು॥13॥ ಇಚ್ಛೆಯೊಳೆಗೆ ತಾನಲಿಯುವುದು ಅದು ಅಚ್ಯುತನರಗಿಣಿ ತರಿಸಿಹುದು ಸ್ವಚ್ಛವಾಗಿಹುದು ನಿಚ್ಚಲವಹುದು ನಿಶ್ಚಯದಿಂದೊಯ್ದು ಗರ್ಭಿಣಿಯ ಮುಡಿಯೊಳು ಪಚ್ಚೆಯ ತೆನೆಯ ಮುಡಿಸ್ಯಾರು॥14॥ ಮಡದಿಯರಡಿಗಡಿಗೆ ಎಡೆಬಿಡುತಾ ಸಡಗರಗಡಣದಿ ದೃಢಗೊಳುತಾ ಪೊಡವಿಯೊಳಿಡುತಾ ನುಡಿ ಝೇಂಕರಿಸುತಾ ಕಡಲೊಡೆಯನ ಎಡತೊಡೆಯೊಳು ಕುಳಿತಿಹ ಮಡದಿಗೆ ಮುಡಿವಾಳದ ಹೂವ ಮುಡಿಸ್ಯಾರು ॥15॥ ಮಂಗಳ ಕಾರ್ಯಕೆ ಶೋಭಿಪುದು ವರಲಿಂಗರಾಜನ ಮನವಾಗಿಹುದು ರಂಗುದೋರು ವುದು ಶೃಂಗಾರಿಹುದು ತುಂಗ ವಿಕ್ರಮನಾದ ರಂಗನರಾಣಿಗೆ ಶಿಂಗಾರದ ಹೂವ ಮುಡಿಸ್ಯಾರು ॥16॥ ವಾತಹರಗೆ ಪ್ರಿಯಕರವಾಗಿ ನೂತನದೊಳು ಕುಸುಮಳಾಗಿ ಜ್ಯೋತಿತಾನಾಗಿ ನೂತನವಾಗಿ ಭೂತಳದೊಳು ಪರಿಮಳಿಪ ಸುವರ್ಣದ ಕೇತಕೆಯ ಹೂವ ಮುಡಿಸ್ಯಾರು॥17॥ ಈಪರಿಯಲಿ ಪೂಗಳ ಮುಡಿಸಿ ಖ್ಯಾತೆರುಕ್ಮಿಣಿಯ ಪಾಡುತಲಿ ನಲಿದು ನಿಂತು ಕೈಮುಗಿದು। ನೂತನ ಪಡೆದು ಮಾತುಳ ವರ್ಧನರಸಿ ಸೀಮಂತಕೆ ನೂತನದಾರತಿಯ ಬೆಳಗಿರೆ॥18॥

ಶ್ರೀರಮಣೀಮಣಿ ರುಕ್ಮಿಣಿಗೆ — ರಾಗ: ಕಾಂಬೋದಿ, ಆದಿತಾಳ

ಶ್ರೀರಮಣೀಮಣಿ ರುಕ್ಮಿಣಿಗೆ ಆಶ್ರಿತವರದೆ ವೈಭವದ ಕೃಪಾಕರಿಗೇ॥ಪ॥ ಸಾರಸ ಕಾರೆಗೇ। ಗೌರ ಶರೀರಗೆ। ನಾರಿಯರೆಲ್ಲರೂ ಹಾರೈಸುತ್ತಲೀ। ಪಾರಿಜಾತವನೂ। ಮುಡಿಸಿದರು॥1॥ ರಾಜೀವ ಲೋಚನೆ। ರಾಜಿತೆಗೆ। ಪಂಕಜಭವೆ ಅಮರ। ರಾಜನುತೇ॥ ಉದಯಕಾಲದೊಳ್। ಮೂಜಗದಂಬೆಗೆ। ರಾಜವದನೆಯರು। ಸೋಜಿಗಗೊಳುತಲೀ। ಜಾಜಿಯ ಹೂವಾ ಮುಡಿಸಿದರು॥2॥ ನಸು ಕಂಪಿನ ಸಂಪತ್ತಿನ ವೋಲ್। ಸಂಪನ್ನಾಂಗದ। ಪೆಂಪೆಸೆಯೇ। ಸಂಪತ್ಪ್ರದಗಣೆ ಗಿರಿ ಪಾರ್ವತಿಗೆ। ಚಂಪಾಂಗನೆಯರು ಗುಂಪಾಗಿ ಕಟ್ಟಿಹ ಸಂಪಿಗೆ ಹೂವಾ ಮುಡಿಸಿದರು॥3॥ ಫುಲ್ಲಲೋಚನ ಶ್ರೀ ಪರಮ ಪುರುಷನಾ। ಸಲ್ಲಲಿತಾಮಣಿ। ರುಕ್ಮಿಣಿಗೇ। ಚೆಲ್ವ ವದನೆಯರು। ಸಲ್ಲಾಪದಿಂದಲಿ। ಮೆಲ್ನುಡಿಯಾಡುತ। ಉಲ್ಲಾಸದಿಂದಲಿ। ಮಲ್ಲಿಗೆ ಹೂವಾ ಮುಡಿಸಿದರು॥4॥

ಹೂವನು ಮುಡಿಸಿದರೀಗ — ರಾಗ: ಖಮಾಚ್

ಹೂವನು ಮುಡಿಸಿದರೀಗ। ರಾಜೀವನರಸಿಗೀಗಾ॥ಪ॥ ಆದರದಿಂದಲಿ ಅರಳಿದ ಮಲ್ಲಿಗೆ। ಕ್ಯಾದಿಗೆ ಸಂಪಿಗೆ। ಕುಸುಮಗಳಾ। ಪಾದರಿ ಪರಿಮಳ ಹೂಗಳ ಸೇರಿಸಿ। ಮಾಧವನರಸಿಗೆ ಆದರದೀ॥1॥ ಮರುಗ ದವನಗಳು ಸುರಗಿಯ ಸರಗಳು। ಪರಿಪರಿ ವಿಧದಾ ಪೂಗಳು। ಪರಮ ಹರುಷದಲಿ ವರಮಹಾಲಕ್ಷ್ಮಿಯ। ವರಗಳ ಬೇಡುತ ವನಿತೆಯರು॥2॥

ಹೂವು ಮುಡಿಸಿರೆ ನೀವು — ರಾಗ: ಶ್ರೀ

ಹೂವು ಮುಡಿಸಿರೆ ನೀವು। ದೇವಕಿದೇವಿಗೆ॥ಪ॥ ನಲ್ಲೆಯರೆಲ್ಲರೂ ಮಲ್ಲಿಗೆ ಹೂವಿನ ಚಲ್ವದಂಡೆಯ ಮಾಡಿ ಫುಲ್ಲಲೋಚನೆಗೆ॥1॥ ಸಖಿಯರೆಲ್ಲರೂ ಕೂಡಿ। ಬಕುಲ ಪುಷ್ಪಗಳನೂ। ಯುಕ್ತಿಯಿಂದಲಿ ಹೆಣೆದು। ಲಕುಮಿಗೆ

ಬೇಗ॥2॥ ವಾರಿಜ ಮುಖಿಯರೂ। ಪಾರಿಜಾತದ ಮಾಲೆ। ವಾರಿದುರುಬಿಗೆ। ಬೈರಾದಿಂದಲಿ॥3॥ ಇಂದು ವದನೆಯರು ಅಂದ ಗುಲಾಬಿಯ। ಚೆಂದ ಸರವನರವಿಂದ ಲೋಚನೆಗೆ॥4॥

ಹೂವು ಮುಡಿಸಿರಿ ನೀವ್ **ರಾಗ: ಮಾಂಡ್**

ಹೂವು ಮುಡಿಸಿರಿ ನೀವ್ ಉಡಿಯ ತುಂಬಿರಿ ಭಾಮಿನಿ ಕುಲಮಣಿಗೆ ಸುಭದ್ರೆಗೆ॥ಪ॥ ಜಂಬು ನೇರಲೆ ಅಂಜುರಿ ದ್ರಾಕ್ಷಿ ಜಂಬು ಸೀತಾಫಲವು ಅಂಗಜನಯ್ಯನ ತಂಗಿ ಸುಭದ್ರೆಗೆ॥1॥ ಬಾಲೆ ಗುಣಮಣಿ ಶೀಲೆಯನ್ನು ಹಸೆಯ ಮೇಲೆ ಕುಳ್ಳಿರಿಸಿ। ಲೋಲದಿ ಕುಸುಮಗಳ ಮಾಲೆ ಮುಡಿಸುತ ಲೋಲಿಪನ ತಂಗಿಗೆ ಬೇಗನೆ॥2॥ ತುಂಬಿಗುರುಳಿಗೆ ರಂಬೆ ಸತಿಯರು। ದಂಡೆ ಮುಡಿಸಿ ಪಟ್ಟಾವಳಿ ಕುಪ್ಪುಸ ಚಂದದಿ ತೊಡಿಸುತ। ದೇವೇಂದ್ರನ ಸೂಸಿ ದೇವಕಿ ಮಗಳಿಗೆ॥3॥

ಆರತಿ

ಆರತಿ ಮಾಡುವ ಬನ್ನಿರೇ **ರಾಗ: ಮೋಹನ**

ಆರತಿ ಮಾಡುವ ಬನ್ನಿರೇ। ಸೀಮಂತಕ್ಕೆ। ಆರತಿ ಮಾಡುವ ಬನ್ನಿರೇ॥ಪ॥ ಅರುಣೋದಯದ ಈ ಶುಭ ಘಳಿಗೆಯು। ಮಂಗಳಮಯವಾಗಿ॥2ಸಾರಿ॥ ಆರತಿ॥ ಸುಖ ಸಂಸಾರ, ದಾಂಪತ್ಯ ಜೀವನದ। ಫಲ ಕಂಡು ಬಂದಿದೆ ಬಾಳಲಿ ಇಂದು॥2ಸಾರಿ॥ ಮಮತೆಯ ಮಡಿಲ ತುಂಬಿರಿ॥2ಸಾರಿ॥ ಆರತಿ॥ ಹಸಿರಿನ ಸೀರೆ ಉಡಿಸಿ। ಹಸಿರಿನ ಬಳೆ ತೊಡಿಸಿ। ಮುಡಿ ತುಂಬಾ ಬಗೆ ಬಗೆಯ ಹೂವ ಮುಡಿಸಿ॥2ಸಾರಿ॥ ವಿಧ ವಿಧ ಭಕ್ಷ್ಯ ಬಡಿಸಿ॥2ಸಾರಿ॥ ಆರತಿ॥ ರಾಮನೇ ಬರಲೀ। ಸೀತೆಯೆ ಬರಲೀ। ಮನೆಗೊಂದು ಮುದ್ದಾದ ಮಗುವು ಬರಲೀ। ಮಗುವಿನ ನಗು ಬರಲೀ॥2ಸಾರಿ॥ ಆರತಿ॥

ಅರಿಶಿನ ಕುಂಕುಮದಿ ಅರಸೀಯ (ಬಾಣಂತಿಗೆ) **ರಾಗ: ಬಿಲಹರಿ**

ಅರಿಶಿನ ಕುಂಕುಮದಿ ಅರಸೀಯ ಮೈಯ ಬಣ್ಣಾ। ನವರತ್ನದ್ಹಸೆಯ ಮೇಲೆ ನಾರಿತಾನೊಪ್ಪಿದಳೆ॥ಪ॥ ಎಸೆದಳೆ ಗೋಕುಲದಿ ಹಸಿಯ ಬಾಣಂತಿ ಗೋಪಿ। ವಸುಧೇಶ ಕೃಷ್ಣನೆಂಬೊ ಹಸುಳೆ ಹಸುಗೂಸಿನ ತಾಯಿಗೆ। ಕುಶಲಾದಾರತಿಯಾ ಬೆಳಗೀರೇ॥1॥ ಕಟ್ಟೀದ ಮಂಡೆಕಟ್ಟು ಇಟ್ಟ ಸಾದಿನ ಬಟ್ಟೊ। ಬಟ್ಟು ಕಸ್ತೂರಿಯನಿಟ್ಟು ಕಾಂತೆ ಪ್ರಜ್ವಲಿಸುತಾ॥2॥ ಸಣ್ಣ ನಡುವಿಗೆ ಸುತ್ತು ಸರದ ಕೊರಳಿಗೆ ಮುತ್ತು। ಕಣ್ಣಿಗ್ಹಚ್ಚಿದ ಕಪ್ಪು ಕಾಂತೆ ಪ್ರಜ್ವಲಿಸುತಾ॥3॥

ಕೊಯ್ಲಿಗೆ ಬಂದಳು ಸಾವಿತ್ರಿ (ಬಾಣಂತಿಸ್ನಾನಕ್ಕೆಮೊದಲು-ಕೊಯ್ಲು) **ರಾಗ:ಶಂಕರಾಭರಣ**

ಕೊಯ್ಲಿಗೆ ಬಂದಳು ಸಾವಿತ್ರಿ ಮೆಲ್ಲಮೆಲ್ಲಗೆ ಕೊಯ್ಲಿಗೆ ಬಂದಳು ಸಾವಿತ್ರಿ॥ಪ॥ ಬಿಳಿಯ ಸೀರೆ ಕುಪ್ಪಸ ತೊಟ್ಟು। ಕೈಯಲ್ಲಿ ಬೇವುಮಾವು ಚಾಕು। ಪಿಡಿದು ಮಲ್ಲಿಗೆ ಮುಡಿದು ಕಾಡಿಗೆ। ಹಚ್ಚಿ ಕೊಯ್ಲಿಗೆ ತಾನು ಬಂದಳಾಗ॥1॥ ನೆಲಗಡಲೆ ನೆನೆಅಕ್ಕಿ ಎಲೆ ಅಡಿಕೆಯನಿಟ್ಟು ಅರಶಿನ ಕುಂಕುಮ। ಹಾಲನು ಹಾಕುತ ಐದು ಜನ ಮುತ್ತೈದೇರು। ಓಕಳಿ ಎರಚಿ ಎರಡು ಮಕ್ಕಳು ಸಾಕೆಂದು ಹರಸಿ ಆರುತಿ ಮಾಡಿದರು॥2॥

ತೊಟ್ಟಿಲು ಶಾಸ್ತ್ರ

ದಶರಥ ರಾಜನ ಸತಿ ಸುತರಿಗೆ (ಕುಯ್ಲುಹೋಗುವುದು) **ರಾಗ:ಕುರಂಜಿ**

ದಶರಥ ರಾಜನ ಸತಿ ಸುತರಿಗೆ ದಶರಾತ್ರಿಯಾಗಿ ಇರಲೂ॥ಪ॥ ಎಸೆವೋ ಮಾಣಿಕದ ಮಣಿಕುಯಲ ರಚಿಸಿ। ನಾಲ್ಕು ಕಡೆಗೆ। ಆದಿತ್ಯನಿಗೆ ಅರ್ಘ್ಯವನೆ ಕೊಡುವೋರು॥1॥ ಚಿನ್ನಮಾಣಿಕದ ಇಟ್ಟಿಗೆಯಲಿ ಬಣ್ಣಿಸಿದರು। ಬಚ್ಚಲಲಿ ಬೆನ್ನೀರ ತೊಳೆಯಿರಿ। ಚಿನ್ನದ ತಾಯಿಗೆ ಚಿನ್ನದೆರಡು ಸುತರಾ ಪಡೆಎಂದು। ಬೆನ್ನೀರಾ ತೊಳೆಯಿರೇ। ಬಾಲಾನ ತಾಯಿಗೇ॥

ಆರತಿಗಳನೆತ್ತಿ ನಾರಿಯರೆಲ್ಲಾ ರಾಗ: ಕಾಂಬೋಧಿ

ಆರತಿಗಳನೆತ್ತಿ ನಾರಿಯರೆಲ್ಲಾ। ಸಾರಿದ್ದ ನಾಲ್ಕು ದಿಕ್ಕಿಗೆ ಸೊಡರಿರಿಸಿ। ಸಾರಿಸಿ ಚೌಕವ ತುಂಬಿ ಕಾರಣೆ ರಚಿಸಿ। ಓರಣದಿಂದ ಪದ್ಮಗಳನಿಕ್ಕಿದರೂ।।ಪ।। ತೋಟ್ಟಿಲ ತಂದಿರಿಸಿ ಅರ್ಚಿಸಿ ಗಂಧವ। ಬಟ್ಟ ಮುತ್ತಿನ ಜಲ್ಲಿಗಳನ್ನೆ ರಚಿಸಿ। ಘಟ್ಟಿ ವಜ್ರದ ಕೊಂಬಿಗೆ ಸರಪಣಿಹಾಕಿ। ಇಟ್ಟರೆ ನಾಲ್ಕು ದಿಕ್ಕಿಗೆ ಬೇವಿನೆಸಳಾ।।1।। ಅರೆವ ಗುಂಡಿಗೆ ಅರಿಶಿನವನ್ನೆ ಪೂಸಿ। ಸರವ ಸುತ್ತಿ ಬೇವಿನ ಎಸಳಿರಿಸಿ। ಹರೆದೀರು ಕೇಶವ ಮಾಧವ ಎನ್ನುತ್ತ। ಭರದಿಂದ ತೊಟ್ಟಿಲೊಳ ಗಿಟ್ಟರಾಗ।।2।। ಕಡಲೆ ಗುಗ್ಗುರಿಯು ಕಂದನ ಕಾಲದೆಸೆಯಲ್ಲಿ। ಕಡುಬೇಗ ಒಡೆದ ತೆಂಗಿನಕಾಯಿಗಳನ್ನು। ಒಡೆದು ಗೌರಿಯಪುತ್ರ ಗಜಮುಖರ್ಗರ್ಪಿಸಿ। ಭವದಿಂದ ತೊಟ್ಟೀಲೊಳಗಿಟ್ಟರಾಗ।।3।। ಕೇಶವಯ್ಯನ ಕೊಳ್ಳೀರೆಂದೆನುತಾ। ಸಾಸಿರನಾಮನ ತನ್ನೀರೆಂದೆನುತಾ। ಶೇಷಶಯನ ಶ್ರೀ ಹರಿ ಬಲರಾಮರ। ಓಆ ಸುದತಿಯರೆಲ್ಲಾ ಪಾಡಿ ತೂಗಿದರೂ।।4।। ವೃದ್ಧಮುತ್ತೈದೆಯರೆಲ್ಲಾರೂ ಬಂದು। ವಿದ್ಯುಕ್ತದಿಂದ ಶಿಶುವನ್ನೆತ್ತಿಕೊಂಡು। ಪ್ರದ್ಯುಮ್ನನ ಶ್ರೀ ಹರಿಬಲರಾರಮ ಮುದ್ದಿಸಿ ಸಕಲ ಸತಿಯರೂ ತೂಗಿದರೂ।।5।। ನೀರೋಳು ಮುಳುಗಿದ ನೀತಿವಂತನೆ ಜೋ। ನೀರಜನಯ್ಯ ನಿಗಮಗೋಚರನೇ। ಭಾರದಿ ಬೆಟ್ಟವ ಪೊತ್ತು ನಿಂತನೆ ಜೋ। ಕೂರ್ಮಾವತಾರಿ ಜೋ। ಎಂದು ತೂಗಿದರು।।6।। ಕೋರೆದಾಡಿಯಲಸುರನ ಕೊಂದೆ ಜೋಜೋ। ಧಾರುಣಿಯನು ಗೆಲಿದ ಧರ್ಮಪಾಲನೆ ಜೋ ಕ್ರೂರಮೃಗದ ರೂಪಿನಿಂದ ಕರುಳೀನ। ಹಾರವನ್ನಾಕಿದೆ ರಾಧಾಪತಿ ಜೋ।।7।। ಪುಟ್ಟಬ್ರಾಹ್ಮಣನಾಗಿ ಬಲಿಯ ಬೇಡಿದೆ ಜೋ। ದೊಡ್ಡೆಡೆಯನೆಲ್ಲಾ ಈರಡಿ ಮಾಡಿದೆ ಜೋ। ಘಟ್ಟಿ ಕೊಡಲಿಯ ಪಿಡಿದು ನಿಂದನೆ ಜೋ। ಕಟ್ಟುಗ್ರಾರಾಮ ಜೋ ಎಂದು ತೂಗಿದರು।।8।। ಮುಪ್ಪೂರವನೆ ಗೆಲಿದ ಮುರಹರನೆ ಜೋ ಜೋ। ಮಿತ್ರೆಯರೆಲ್ಲರ ವ್ರತಗಳನಳಿದೆ ಜೋ। ಬಪ್ಪದಿ ತೇಜೀಯ ಏರಿ ಆಡುತಲಿದ್ದೆ। ಅಪ್ರಮಹಿಮನೆ ಜೋ ಎಂದು ತೂಗಿದರು।।9।। ಹತ್ತಾವರಗಳೆತ್ತಿ ಪಾಡುತಲೇ। ಮುಕ್ತಳಾದೇ ಎಂದು ಮುಗುದೆ ಎಲ್ಲರಿಗೂ ಮುತ್ತಿನ ಹರಿವಾಣದಲಿ ಬಾಗಿನಗಳ ಇಟ್ಟು ಸುಖಾದ್ರಿಯೊಳ್ ಓಲಾಡಿದರು।।10।।

ಜೋ2 ಗುಂಡ ಪರಮ (ಗುಂಡಪ್ಪನ್ನ ತೊಟ್ಟಲಿಗೆ ಹಾಕಿದ್ದು) ರಾಗ: ಕುರಂಜಿ

ಜೋಜೋ ಗುಂಡ ಪರಮ ಪ್ರಚಂಡ। ಜೋಜೋ ಗುಂಡ ಸುರುಚಿರ ದಂಡಾ।।ಪ।। ಜೋಜೋಜೋ ದೊಡ್ಡ ಕರಿಯಾ ಕಲ್ಗುಂಡಾ। ಜೋಜೋಜೋ ಮದ್ದನರಿಯಾದ ಗುಂಡಾ।। ದುಂಡು ಮಲ್ಲಿಗೇಗಿಂತ ಮೃದುವಾದ ಗುಂಡಾ। ಕೆಂಡಾ ಸಂಪಿಗೇಗಿಂತ ಚೆಲುವಾದಗುಂಡಾ। ಪಂಡರೀಕಕ್ಕಿಂತ ಲಘುವಾದ ಗುಂಡಾ। ಮುಂಡಮೂಕಾರಾ ಕೈಯ್ಯ ಕೋದಂಡ ಗುಂಡಾ।।1।। ಒಬ್ಬಟ್ಟು ಹೂರಣಾವರೆಯುವಾ ಗುಂಡಾ। ತಬ್ಬಿಬ್ಬಾಡುವಾತನ ಕೆಡಹೂವ ಗುಂಡಾ। ರುಬ್ಬಿ ರುಬ್ಬೀ ದೋಸೆಯೀಯುವ ಗಂಡಾ। ಕೊಬ್ಬಿದಾ ಜನರಾನು ದಬ್ಬುವಾ ಗುಂಡಾ।।2।। ಬಿರುಗಾಳಿ ಮಳೆಗಾಳ ಗಣೆಸಾದಾ ಗುಂಡಾ। ಪರಿಪರಿ ಬಂಧನವರಿಯಾದಾ ಗುಂಡಾ। ಉರುಳಿಸಿದಲ್ಲಿಯೇ ನಿದ್ರಿಸುವ ಗುಂಡಾ। ಕೊರತೇಯಾನರಿಯಾದಾ ಸುಖದ ಕಲ್ಗುಂಡಾ।।3।। ನೀನಿಲ್ಲಾದಿರುವಾ ಮನೆಗಳಿಲ್ಲ ಗುಂಡಾ। ನೀನಿರೂವಲ್ಲಿ ಕಿಂಡಿಗಳುಂಟು ಗುಂಡಾ। ಕಾನನಾದೊಳಗಿದ್ದು ಕರಗಾದಾ ಗುಂಡಾ। ಮಾನಾವಾ ಗಣಕೆಲ್ಲ ಬೇಕಾದ ಗುಂಡಾ।।4।। ಒರಳೂ ಕಲ್ಲಿನ ಮೇಲೆಸೆಯುವ ಗುಂಡಾ। ಕರುಣೆಯಾ ಕರದೋಳು ನಲಿಯುವಾ ಗುಂಡಾ। ವರದುಕೂಲಂಗಳ ಬಯಸಾದ ಗುಂಡಾ। ವರದಾ ಮಾಂಗಿರೀರಂಗಾನೇನೀಸುವಾ ಗುಂಡಾ।।5।।

ಜೋ3 ಗುಂಡಾ ಲಂಡಾ ರಾಗ: ನೀಲಾಂಬರಿ

ಜೋ ಜೋ ಜೋ ಗುಂಡಾ ಲಂಡಾ। ಮಂಡೇಲಿ ಕಣಕವ ಮರ್ದಿಸುವ ಗುಂಡಾ।।ಪ।। ಕೈ ಕಳಚಿಬಿದ್ದರೆ ಕಾಲೆರಡು ತುಂಡು। ದಂಡೀಲಿ ಹೊಡೆಯುವ ಫಿರಂಗಿ ಗುಂಡ। ಮಂಡೆನೋವಿಲ್ಲದೆ ಮಗನು ಹುಟ್ಟಿರಲು ಹಿಂಡು ಬ್ರಾಹ್ಮಣ್ಯಗಳೆಲ್ಲರೊಂದಾಗಿ ಕಂಡು ಸಂಭ್ರಮಪಟ್ಟು ಹರುಷವತಾಳೆ। ಗುಂಡಪ್ಪನೆಂದು ಹೆಸರಿಟ್ಟ ಅವರಪ್ಪ।।1।।

ಹೊಟ್ಟೆನೋವಿಲ್ಲದೆ ಹುಟ್ಟಲು ಬಾಲ ತಟ್ಟನೆ ಮಂಗಳಾಷ್ಟಕದಿಂದ ಜೋಯಿಸರು ಗಟ್ಯಾಗಿ ಹಿಟ್ಟು ಮೆಣಸರೆಯುವ ನೆಂದು ಜಾತಕಫಲವನ್ಹೇಳಿದರು।।2।। ಭೂತಳದೊಳು ನಿನಗೆ ಯಾರು ಎಣೆಯಿಲ್ಲ। ಮಳೆ ಚಳಿ ಬಿಸಿಲು ಬೆಂಕಿಯ ಭಯವಿಲ್ಲ। ಹಳೆಮೊರ ಅರಿವೆ ಎಣ್ಣೆಯು ಬೇಕಿಲ್ಲ। ಅಳುವ ಕೂಸೆಂದು ಮುದ್ದಿಸುವ ಗೋಜಿಲ್ಲ। ಖಾರವನರೆಯುವ ಕೈಗಳಿಗೆ ಇವನೆ ಆಧಾರ। ಕ್ರೂರ ರೋಗಾದಿಗಳಿಗಿವ ದೂರ ಊರೊಳಗಿಲ್ಲವು ಇವನ ಸಂಚಾರ।।3।। ಬಾಮೆ ತಂಗ್ಯಮ್ಮ ಪಡೆದಳೆ ಮಗನಾ। ಸುದ್ದಿಯ ಕೇಳಿ ಸನ್ಮಾನಗಳಿಂದಾ। ಮುದ್ದು ತಾಯಮ್ಮ ತಾ ಪಡೆದಳೆ ಕುವರನಾ। ತಿದ್ದಿದ ಗಾರೆಯನುಜ್ಜುವ ಗುಂಡಾ।।4।। ಗುಂಡಿನ ಸರವ ಗುಂಡಪ್ಪಗೆ ಹಾಕಿ। ಮಂಡೆಯೊಳಗೆ ಎಳೆ ಬೇವನೆ ಸೆಕ್ಕಿ। ಪುಂಡರೀಕಾಕ್ಷನ ತೊಟ್ಟಿಲೊಳಿಟ್ಟೂ। ಗುಂಡಪ್ಪ ಜೋಜೋ ಎಂದು ತೂಗಿದರೂ।।5।। ಕಣ್ಣು ಮೂಗಿಲ್ಲದ ಕಡು ಚೆಲ್ವ ಗುಂಡ। ಸಣ್ಣನಾಗಿ ಮೆಣಸರೆವಂಥ ಗುಂಡಾ। ತಣ್ಣೀರಿಗೆ ನೀನು ಬೆಚ್ಚದ ಗುಂಡಾ। ಇನ್ನು ಉರುಟಾಡದೆ ಮಲಗಿರು ಕಂಡ್ಯಾ।।6।। ಹಸಿವು ನಿದ್ರೆಯಿಲ್ಲದತಿ ಜಾಣ ಗುಂಡಾ। ಹೊಟ್ಟೆಗೆ ಬೇಕೆಂದು ಹಠಮಾಡದಾ ಗುಂಡಾ। ಬೇಳೆ ಹುಳಿಗೆ ಕೊಬ್ರಿ ಅರೆವಂಥ ಗುಂಡಾ। ಭಾರವಾಗಿ ತೊಟ್ಟಿಲೊಳಿರು ಕಂಡ್ಯ ಗುಂಡಾ।।7।। ತಾಯಿ ತಂದೆ ನಿನಗ್ಯಾರೋ ಗುಂಡಪ್ಪ। ಕಾಡು ಕಲ್ಲನು ಕೆತ್ತಿದವನೆ ನಮ್ಮಪ್ಪ। ಆರು ಕಾಸಿಗೆ ಕೊಂಡ ತಾಯಮ್ಮಗೆ ನಾನು। ಕಾರವಾಗಿ ಚಟ್ನಿ ಅರೆಯುವೆ ನೆಂದಾ।।8।। ಅಜ್ಜಯ್ಯ ಮಗುವಿಗೆ ಗೆಜ್ಜೆಯ ತಂದೂ। ಗೆಜ್ಜೆಯ ಕಾಲ್ಗಡಗವ ಮಾಡಿಸಿ ತಂದೂ। ಹೆಜ್ಜಿಲ್ಲ ಕಾಲಿಲ್ಲ ಎಲ್ಲಿಡಬೇಕೆಂದು। ಅಜ್ಜಯ್ಯ ತಾನಾಗ ಆಲೋಚಿಸಿದಾ।।9।। ಮಾವಯ್ಯ ಮಗುವಿಗೆ ಮಾಗಾಯಿ ಉಡಿದಾರ ಮಾಡಿಸಿ ತಂದು। ಸೊಂಟಿಲ್ಲ ಪಾದಿಲ್ಲ ಎಲ್ಲಿಡಬೇಕೆಂದು। ಮಾವಯ್ಯ ತಾನಾಗ ಆಲೋಚಿಸಿದಾ।।10।। ಹೆತ್ತ ಬಾಣಂತಿಯ ಹಿರಿಯೋರು ನೋಡಿ। ಪಥ್ಯಕ್ಕೆ ಬಳ್ಳಕ್ಕಿ ಅನ್ನವ ಮಾಡಿ। ಮಾಡಿದ ಮೇಲೋಗರ ನೀರು ಮಜ್ಜಿಗೆಗಳ। ಪಥ್ಯಕ್ಕೆ ಬಡಿಸಿದರು ಮತ್ತೆ ಅವರತ್ತೆ।।11।।

ಜೋ3 ಗುಂಡಯ್ಯಾ ನೀ **ರಾಗ: ಕುರಂಜಿ**

ಜೋ ಜೋ ಜೋ ಗುಂಡಯ್ಯಾ ನೀ ಜಗದೊಳು ಬಹು ವಿಖ್ಯಾತನಯ್ಯಾ।।ಪ।। ಬೇವಿನ ಸೊಪ್ಪನ್ನು ಸೊಂಟಕ್ಕೆ ಕಟ್ಟಿ ಹೊಸ ಬಟ್ಟೆ ತೊಡಿಸಿದೆ ಎನ್ನುವರಯ್ಯ।।ಅ.ಪ।। ಬರೆದರೆ ನಾಮವ ಭೂತನ್ನ ಜರಿವೇ ಧರಿಸಿ ವಿಭೂತಿಯ ಕೈಲಾಸ ಗುರುವೇ। ಪರಿಕಿಸಿದವರಿಗೆ ಅಭಯವನ್ನೆ ಕೊಡುವೇ ನರರೀಗೆ ನಿತ್ಯ ನೀ ಬೇಕಾಗಿರುವೇ।।1।। ಕಣಿಕಾ ಹೂರಣಾ ದೋಸೇಹಿಟ್ಟುಗಳೆಲ್ಲಾ ಕ್ಷಣದೊಳು ಚೆನ್ನಾಗಿ ತಿರುವೋದ ಬಲ್ಲಾ। ಕ್ಷಣಸಹ ಸುತ ಜನನೀಯ ಬಾಧಿಪೋನಲ್ಲಾ। ಕುಣಿಸೀದರಾಡುವ ಎಗರಿ ತಾವೋನಲ್ಲಾ।।2।। ಸೊಂಟಾದ ಮೇಲ್ಗಡೆ ನಿಲ್ಲುವೊನಲ್ಲಾ ತುಂಟಾರ ಕಂಡರೆ ಹೆದರೂವನಲ್ಲ। ಭಂಟನು ಜಾರೀ ಬಿದ್ದರೆ ಕಾಲಾ ಕುಂಟನೆ ಮಾಡಲು ಚೆನ್ನಾಗಿ ಬಲ್ಲಾ।।3।। ಸುಣ್ಣದ ಬಟ್ಟುಗಳಿಟ್ಟ ರೆನ್ನಪ್ಪಾ ಕಣ್ಣಿಗೆ ಬೀಳುವ ಭಯವಿಲ್ಲವಪ್ಪಾ। ಸಣ್ಣ ಕೂಸೆಂದೆತ್ತಲ್ ದೊಡ್ಡ ಭೂತಪ್ಪಾ ಬಣ್ಣಿಸಲಾರೆನಾ ನಿನ್ನ ಗುಂಡಪ್ಪಾ।।4।। ತೊಟ್ಟಿಲು ಬೇಕೆಂದು ಕಾಡುವನಲ್ಲಾ ಹೊಟ್ಟಿನ ಮೂಲೆಯೊಳ್ ಮಲಗೋದ ಬಲ್ಲ। ಪೆಟ್ಟಿಗೆ ಬಟ್ಟೆಯ ಕೇಳುವನಲ್ಲಾ ಹುಟ್ಟಿದರಿವನಂಥ ಮಗು ಕಷ್ಟವಿಲ್ಲ।।5।। ಅತ್ತೆಯ ಹೋತರೆ ಕಿತ್ತಲೆದ್ದಣ್ಣು ಮಾವನ ಹೋತರೆ ಮಾದಲದ್ದಣ್ಣು। ನೀನ್ಯಾರ ಹೋತೆಯೊ ಎಲೆ ಗುಂಡಪ್ಪ ಎಂದರೆ ನಾಕಲ್ಲು ಕುಟುಕನ ಹೋತೆನೊ ಎಂದ।।6।। ಜನನಿಯ ತೊಡೆಯೊಳ್ ಗುಂಡಾನ ಇಟ್ಟು ವನಿತೆಯರೆಲ್ಲರು ಸಡಗರ ಪಟ್ಟು ವನಜಾತನಯ್ಯನ ತೊಟ್ಟಿಲೊಳ್ ಇಟ್ಟು ವಿನಯದಿಂತೂಗಿದರ್ ಆನಂದ ಪಟ್ಟು।।7।।

ಜೋ6 ಗುಂಡಪ್ಪ ಮೂಜಗದೊಳು **ರಾಗ: ಕುರಂಜಿ**

ಜೋ ಜೋಜೋಜೋಜೋಜೋ ಗುಂಡಪ್ಪ ಮೂಜಗದೊಳು ನಿನಗೆ ಎಣೆಯುಂಟೇ ನಪ್ಪ।।ಪ।। ಕಾನನ ದೊಳಗಿದ್ದು ಕರಗದ ಗುಂಡಪ್ಪ ವರದ ಮಾಂ ಗಿರರಂಗನಾಗಿ ಮೆರೆದೆ ಗುಂಡಪ್ಪ।।ಅ.ಪ।। ಕಣಕ ಹೂರಣ ಕಿಚಡಿಗಳು ನಿನಗೆ ತೃಣಕೆ ಸಮಾನ ವಾಗಿಹುದಯ್ಯ। ಇಳೆಯ ಒಳಗೆ ಹೊರಗೆ ಕೇರಿ ಭಾವಿಗಳೊಳಗೆ ಚೆಲುವ ಗುಂಡಪ್ಪ ವ್ಯಾಪಕನಾಗಿ ಬೆಳೆದ।।1।।

ಮುದ್ದು ತಾಯಮ್ಮ ಅಜ್ಜಯ್ಯಾ ಬಂದು ಗೆಜ್ಜೆ ಕಾಲ್ಗಡಗವ ಮಾಡಿಸಿತಂದು। ಕೈಯಿಲ್ಲ ಕಾಲಿಲ್ಲ ಎಲ್ಲಿಡಲೆಂದು ಭಾಮೆರಮಣೀಯ ಕರೆದು ಕೇಳಿದರು॥2॥ ಭಾವ, ಮಾವಯ್ಯಾ, ಎಲ್ಲರು ಬಂದು ಮಾಗಾಯಿ ಅರಳೆಲೆ ಮಾಡಿಸಿ ತಂದೂ। ಕಿವಿಯಿಲ್ಲ ಮೂಗಿಲ್ಲ ಎಲ್ಲಿಡಲೆಂದು ಭಾಮೆರಮಣೀಯ ಕರೆದು ಕೇಳಿದರು॥3॥ ಕಡಲೆ ಗುಗ್ಗರಿಯ ಕಂದನ ಕಾಲ್ದೆಸೆಯೋಳ್ ಕಡುಬೇಗದಿಂದ ತಂದಿರಿಸಿದರಾಗ। ಚೆಲುವ ಗುಂಡಪ್ಪನ ತೊಟ್ಟಿಲೊಳಿಟ್ಟು ಮುದದಿಂದ ಜೋಗುಳಪಾಡಿ ತೂಗಿದರು॥4॥

ಜೋ5 ಗುಂಡಪ್ಪ ನೀನ್ಯಾಕೆ — ರಾಗ:ಕುರಂಜಿ

ಜೋ ಜೋ ಜೋ ಜೋ ಜೋ ಗುಂಡಪ್ಪ। ನೀನ್ಯಾಕೆ ಅಳುವೆಯೋ ಎಲೆ ಗುಂಡಪ್ಪ। ನಿನಗೇನು ಬೇಕೆಂದು ನನಗೆ ತಿಳಿಯದಪ್ಪ। ಬೆಲ್ಲವ ಕುಟ್ಟುವ ಕಲ್ಲು ಗುಂಡಪ್ಪ॥1॥ ಅತ್ತೆಯು ನಿನಗೆ ಅಂಗಿ ಟೋಪಿ ಹಾಕಿ। ಉಡಿದಾರ ಉಡುಗೆಜ್ಜೆ ಉಂಗುರವಿಟ್ಟು ಬಜಬೆಣ್ಣೆ ಬೆರಳಲಿ ನಿನಗೆ ನೆಕ್ಕಿಸಿ ತೊಟ್ಟಲಲಿ ಮಲಗಿಸಿ ತೂಗುವಳು॥2॥ ಬೆಳ್ಳಿಯ ಬಟ್ಲಲ್ಲಿ ಹಾಲು ಕುಡಿಸುವಳು। ಕಣ್ಣಿಗೆ ಕಾಡಿಗೆ ಹಚ್ಚಿ ರಕ್ಷೆ ಇಡುವಳು। ಹಟವೂ ಮಾಡದೆ ನೀನು ಹಾಯಾಗಿ ಮಲಗು। ಜೋಗುಳ ಪಾಡುತ ತೂಗುವರು ॥3॥ ಎಂಥ ಮಗನಮ್ಮ ಈ ಗುಂಡಪ್ಪ। ಕೈಕಾಲು ಕಣ್ಣಿಲ್ಲ ಅಳಲು ಬಾಯಿಲ್ಲ। ನಿನ್ಯಾರನ್ ಹೋತೆಯೋ ಎಲೆ ಗುಂಡಪ್ಪ। ನೀಲಕಂಠೇಶ್ವರ ನೀನಾಗಿರುವೆ॥ 4॥

ಜೋ3 ಸೀತೆ (ಹೆಣ್ಣುಮಗುವಿಗೆ ತೊಟ್ಟಲು ಹಾಕಿದ್ದು) — ರಾಗ: ನೀಲಾಂಬರಿ

ಜೋ ಜೋ ಜೋ ಸೀತೆ ಜೋ ಜಗನ್ಮಾತೆ। ಜೋಜೋಜೋ ಜನಕ ಸುತೆ ಪ್ರಖ್ಯಾತೆ ಜೋ ಜೋ॥ಪ॥ ಜೋ ರಾಮಚಂದ್ರರ ಮೋಹನ ಕಾಂತೇ। ತೋರುವೆ ಜಗದೊಳು ಜಯಲಕ್ಷ್ಮಿ ಯಂತೇ। ಅಷ್ಟಕಂಬದ ಮಂಟಪ ವನಲಂಕರಿಸೀ। ಸುತ್ತ ಮೇಲ್ಕಟ್ಟು ತೋರಣವ ಶೃಂಗರಿಸೀ। ಪುಷ್ಯರಾಗದ ಹೊನ್ನ ತೊಟ್ಟಿಲನಿರಿಸೀ। ಪಟ್ಟೆ ದುಕೂಲವನ್ಹಾಸಿ ವಿಸ್ತರಿಸೀ॥1॥ ಜನನಿಯ ಜಠರಾದಿ ಜನಿಸದೆ ಬಂದೇ। ಜನಕರಾಯಗೆ ನೀ ಮಗಳಾಗಿ ನಿಂದೇ। ಧನುವನೆತ್ತಿದ ಧೀರಗೊಲಿವೆ ನೀ ಮುಂದೇ। ಇನಕುಲ ತಿಲಕನ ಮನಗೆಲುವೆಯೆಂದೇ॥2॥ ಪಂಚವರ್ಣದ ಗಿಣಿ ನವಿಲಾನೆ ಕಟ್ಟೀ। ಸಂತೋಷದಿಂದ ಹಚ್ಚಿದ ಜ್ಯೋತಿಯ ಕಾಂತೀ। ಪ್ರಪಂಚದೊಳೆಲ್ಲ ತುಂಬಿತು ನಿನ್ನ ಕೀರ್ತಿ। ಸಂತೋಷ ತೋರುವೆ ನಿಜ ಶಾಂತಮೂರ್ತೀ॥3॥ ಹಾಲುತುಪ್ಪಗಳನ್ನೆ ಹದ ಮಾಡೀ ಕುಡಿಸೀ। ಬಾಯಿಗೆ ಬಜೆ ಬೆಣ್ಣೆಯ ತಂದು ಇಡಿಸೀ। ಕಾಡಿಗೆ ಕಣ್ಣು ಹುಬ್ಬಿನ ನಡುವೆ ರಚಿಸೀ। ಜಾನಕಿಯ ಸರ್ವಾಂಗಕೆ ರಕ್ಷೆಯನಿಡಿಸೀ॥4॥ ಪಟ್ಟಾಭಿರಾಮರ ಅರಸಿಯ ನೋಡಿ। ಮುತ್ತಿನಾಭರಣವ ಶೃಂಗಾರ ಮಾಡೀ। ಮುತ್ತೈದೆಯರೆಲ್ಲರು ಸಂತೋಷಗೂಡೀ। ತೊಟ್ಟಿಲೊಳ್ ಸೀತೆಯ ಮಲಗಿಸಿ ಪಾಡೀ॥5॥ ಮಾನಿನಿಯರೆಲ್ಲರು ಮುದದಿಂದ ಪಾಡೀ। ಆರತಿ ಎತ್ತುತ ಪಾಡಿಕೊಂಡಾಡೀ। ಜಾನಕಿ ದೇವಿಗೆ ತೊಟ್ಟಿಲನ್ನೂಡೀ। ಪಾದವ ಪಿಡಿದೂ ರಕ್ಷಿಸು ಎಂದು ಬೇಡಿ॥6॥ ಮಂಗಳ ದ್ರವ್ಯಗಳ ಮುದದಿಂದ ಕೊಟ್ಟೂ। ಸುಂದರಾಂಗಿಯರೆಲ್ಲ ಸಂತೋಷಪಟ್ಟೂ। ಗಂಧಕಸ್ತೂರಿ ಪುಷ್ಪಂಗಳನಿಟ್ಟೂ। ತುಂಬಿ ತಟ್ಟೆಯೊಳು ವೀಳ್ಯ ಬಾಗಿನ ಕೊಟ್ಟೂ॥7॥

ಪಟ್ಟಣದೊಳಗುಳ್ಳ ಸತಿಯರು — ರಾಗ: ಕುರಂಜಿ

ಪಟ್ಟಣದೊಳಗುಳ್ಳ ಸತಿಯರು ಕೂಡೀ ದಿಟ್ಟ ಭೀಷ್ಮಕನರಮನೆಯೊಳಗಂದೂ ಪಟ್ಟೆ ಪಟ್ಟಾವಳೀ ನೆರಿಹಿಡಿದುಟ್ಟೂ ಒಟ್ಟು ಪಾಡಿದರತಿ ಸಂಭ್ರಮಪಟ್ಟೂ॥1॥ ಅಂಗನೆಯರು ಎಲ್ಲ ಸರಸರನೆ ಬಂದೂ ಅಂಗೂಲಿಗುಂಗುರಾ। ಅಣೆನೇಣ ಪಿಡಿದೂ ಮಂಗಳ ಪಾಂಗ ಶ್ರೀ ರಂಗನ್ನ ಒಲಿಸೆಂದು ಮಂಗಳ ಧವಳವ ಪಾಡಿ ತೂಗಿದರೂ॥2॥ ಆದಿನಾರಾಯಣನ ರಾಣಿಯಾಗೆಂದೂ ರುಕ್ಮಿಣೀ ದೇವಿಯ ಪಿಡಿದೆತ್ತಿಕೊಂಡು। ಮಾಣಿಕ್ಯಮಯದ ತೊಟ್ಟಿಲೊಲಗಿಟ್ಟು ಜೋಡಿ ವಸಂಸರಪಳಿಗಳ ಪಿಡಿದು ತೂಗಿದರು॥3॥

ಲಾಲೀಽಽ ಲಾಲೀಽಽ ಲಾಲೀಽಽ ಲಾಲೀಽಽ

ಲಾಲಿಽಽ ಲಾಲೀಽಽ ಲಾಲೀಽಽ ಲಾಲೀಽಽ। ಶ್ರೀ ಚಕ್ರಧಾರಿಗೆ ಶಿರಬಾಗಿ ಲಾಲೀ। ರಾಜೀವ ನೇತ್ರನಿಗೆ ರಮಣೀಯ ಲಾಲೀ॥ಪ॥ ಹಾಲ್ಗೆನ್ನೆ ಕೃಷ್ಣನಿಗೆ ಹಾಲ್ಜೇನ ಲಾಲೀ। ಜಗವಾಳೋ ಸ್ವಾಮಿಗೆ ಶರಣೆಂಬೆ ಲಾಲೀ॥ಅ.ಪ.॥ ಕಲ್ಯಾಣ ರಾಮನಿಗೆ ಕೌಸಲ್ಯೆ ಲಾಲೀ। ಯದುವಂಶ ವಿಭುವಿಗೆ ಯಶೋದೆ ಲಾಲೀ। ಪರಮೇಶ ಸುತನಿಗೆ ಪಾರ್ವತಿಯ ಲಾಲೀ। ಧರೆಯಾಳೋ ಧನಿಗೆ ಶರಣೆಂಬೆ ಲಾಲೀ॥1॥ ಶ್ರೀಕನಕದಾಸರದು ಕೃಷ್ಣನಿಗೆ ಲಾಲೀ। ಲಿಂಗಕ್ಕೆ ಜಂಗಮರ ವಚನಗಳೇ ಲಾಲೀ। ವೇದ ವೇದ್ಯನಿಗೆ ವೇದಾಂತ ಲಾಲೀ। ಆಗಮನಿಗಮಗಳ ಲಾಲಿಗೆ ಲಾಲೀ॥2॥

ಶೇಷಾದ್ರಿಶಯನ ಲಾಲೀ **ರಾಗ: ಕುರಂಜಿ**

ಶೇಷಾದ್ರಿಶಯನ ಲಾಲೀ।ಕ್ಷೀರಾಬ್ಧಿ ಜಾತೆ ಲಾಲೀ। ರಜತಾದ್ರಿ ವಾಸ ಲಾಲೀ। ಶ್ರೀಶೈಲಬಾಲೆ ಲಾಲೀ॥ಪ॥ ಕಮಲಾಕ್ಷ ಹರಿ ಕಂಸಾರೀ। ಕಮಲಾನನೇ ಸುಂದರೀ। ಕರಿಚರ್ಮವಸನ ಲಾಲೀ। ಕರಿವದನ ಜನನಿ ಲಾಲೀ॥1॥ ಪುರಾರಿ ಸಖನೆ ಲಾಲೀ। ಮನ್ಮಥಾನ ಜನನಿ ಲಾಲೀ। ಪುರಾಂತಕನೆ ಲಾಲೀ। ಪರಶಕ್ತಿ ಜನನಿ ಲಾಲೀ॥2॥ ಜಾಹ್ನವಿ ಜನಕ ಲಾಲೀ। ಜಗದಾದಿ ಲಕ್ಷ್ಮೀ ಲಾಲೀ। ಗುರುಸಾಂಬಶಿವನೆ ಲಾಲೀ। ಜಗದಂಬೆ ಲಲಿತೆ ಲಾಲೀ॥3॥

ರಕ್ಷೆ ಇಡುವುದು

ಅಂದಿಕಾಪ್ಪು, ಸಂದಿಕಾಪ್ಪು (ತಮಿಳು) **ರಾಗ:ರೇವತಿ**

ಅಂದಿಕಾಪ್ಪು, ಸಂದಿಕಾಪ್ಪು, ಮುಚ್ಚಂದಿಕಾಪ್ಪು, ಪೆರುಮಾಳ್ ಕಾಪ್ಪು, ಪಿರಾಟಿಮಾರ್ ಕಾಪ್ಪು ಅಂದಿರಕ್ಷೆ, ಸಂದಿರಕ್ಷೆ, ಮುಚ್ಚಂದಿ ರಕ್ಷೆ, ಕಣ್ಣುಕು ಕಾಮನ್ ರಕ್ಷೆ, ಬೆನ್ನುಕು ಭೀಮನ್ ರಕ್ಷೆ, ಉಚ್ಚಿಕ್ಕಿ ಕೃಷ್ಣನ ರಕ್ಷೆ, ತೊಟ್ಟಿಲುಕ್ಕು ರಂಗರಕ್ಷೆ, ಕಾಮನ್ ಕಾವಲ್, ಭೀಮನ್ ಕಾವಲ್, ವಿಭೀಷಣರ್ ಕಾವಲ್, ಅಷ್ಟದಿಕ್ಪಾಲಕರ್ ಕಾವಲ್, ಸೂರ್ಯಚಂದ್ರರ್ ಕಾವಲ್, ಶ್ರೀರಾಮಚಂದ್ರ ಉನ್ನುಡೆಯ ರಕ್ಷೆ.

ಹಾಲು ಕುಡಿಸುವುದು

ಹಾಲು ಕುಡಿಯೆ ಲಕ್ಷ್ಮೀ ದೇವಿ **ರಾಗ: ಶಂಕರಾಭರಣ**

ಹಾಲು ಕುಡಿಯೆ ಲಕ್ಷ್ಮೀದೇವಿ ಕಾದ ಹಾಲಾರಿಸಿರುವೆ। ಭೀಷ್ಮಕನ ಕುಮಾರೀ॥ಪ॥ ಕನ್ಯೆಯೊಳಗೆ ಸಂಪನ್ನೇ ನಿನ್ನ ಪುಣ್ಯಕ್ಕೆ ಎಣೆ ಹೋಲುವರ್‍ಯಾರ್ ನಾಕಾಣೆ। ಕನ್ನಡಿ ಕದಪಿನ ಜಾಣೆ ಜಗವನ್ನು ರಕ್ಷಿಸುವೊ ಶ್ರೀಕೃಷ್ಣನ್ನರಾಣಿ॥1॥ ನಾರಿಯರ ಮಾತಾಕೇಳಿ ಕಡು ಪ್ರೇಮದಿಂದಲಿ ಆದಿಲಕ್ಷ್ಮೀಯು ನಗುತಾ ಶ್ರೀಹರಿ ಧ್ಯಾನದೊಳಿರುತಾ। ಕಡುಪ್ರೇಮದಿಂದಲಿ ಹಾಲ ಕುಡಿವೋಳು ನಗುತಾ॥2॥

ಉಪನಯನದ ಹಾಡು

ನಿಗಮಾಗಮನ ನೋಡೆ **ರಾಗ: ಶಂಕರಾಭರಣ**

ನಿಗಮಾಗಮನ ನೋಡೆ ಸುಂದರಾಗ ನಿಪುಣ ನೋಡೆ। ಜಗವ ಪೊತ್ತು ಒಯ್ದ ಖಳನ ಸಿಗಿದು ಕಾಯ್ದವನ ನೋಡೆ॥1॥
ಚಿಕ್ಕ ಮಗುವಿಗೊಲಿದು ತಾನು ರಕ್ಕಸಾಧಿಪನನು ತರಿಯೆ। ಪಕ್ಕನೊಂದು ಕಂಬದಿಂದ ಜೀಗಿ ಬಂದ ಸ್ವಾಮಿ ನೋಡೆ॥2॥
ಬಲಿಯ ಮನೆಗೆ ಹರುಷದಿಂದ ಬಂದು ದಾನವನ್ನು ಬೇಡಿ। ಚಲುವ ವಟುವು ತ್ರಿವಿಕ್ರಮಾಕಾರವನ್ನೆ ತಾಳಿ ಮೆರೆದ॥3॥
ಸ್ವಾಮಿ ಭಿಕ್ಷೆ ಬೇಡುತಿಹನು ವಾಮನಾವತಾರಿ ಹರಿಯು। ಪ್ರೇಮದಿಂದ ನೀಡಿ ಅವಗೆ ಕಾಮಿತಾರ್ಥಪೆಡವ ಜವದಿ॥4॥

ಬಾರೈಯ್ಯಾ ರಾಮಾ ಹರುಷದಿಂದಲಿ **ರಾಗ: ಕಾಂಬೋಧಿ**

ಬಾರೈಯ್ಯಾ ರಾಮಾ ಹರುಷದಿಂದಲಿ ಈಗ ನೀರೆಯರು ಕರೆವೋರು ಮೆರೆವೋ ಪೀಠಕೆ ಬೇಗ ಬಾ॥ಪ॥ ಮುತ್ತು ರತ್ನದ

ಹಸೆಗೆ ಚಿತ್ರಗಳ ಬಿಡಿಸಿದರು। ಉತ್ತುಮಾಂಗನೆಯರು ಕರೆಯುತಿಹರೂ। ಒತ್ತಿ ತೈಲವ ನಿನಗೆ ಮಂಗಳ ಸ್ನಾನವನು। ಮತ್ತೆ ಮಾಡಿಸಲು ತಾವ್ ಕಾದಿಹರೋ॥1॥ ಇಂದಿನಾ ಶುಭದಿನದಿ ತಂದೆ ದಶರಥರಾಯ। ಮೌಂಜಿ ಬಂಧನವ ನಿನಗೆ ಮಾಡಬೇಕೆಂದು। ಬಂದು ಮುದದಿ ನಿಂದೂ ಚೆಂದದಿ ಮಾತೆಯರು ಅಂದದಾ ಹಸೆಗೀಗ ಕರೆಯುತಿಹರೂ॥2॥ ಇಂಪಿನಿಂದಲಿ ಪಾಡಿ। ಕಂಪ ಸೂಸುತಿರುವ ಸಂಪಿಗೆಣ್ಣಿಯನೊತ್ತಿ। ಪಂಕಜಾಕ್ಷಗೆ ಮುದದಿ। ಆರತಿಯನೆತ್ತಿ। ಸೊಕ್ಕಿನಿಂದಲಿ ಮೆರೆವಾ ಅಸುರರ ಖಂಡಿಸಲು। ಸೊಂಪಿನಿಂದಲಿ ಮೆರೆದು ಸುಜನರಾ ಪೊರೆಯುತಲಿಹ॥3॥

ಬಾರಯ್ಯ ಶಂಕರಾ ಹರುಷದಿಂದಲಿ **ರಾಗ:ಕಾಂಬೋಧಿ**

ಬಾರಯ್ಯ ಶಂಕರಾ ಹರುಷದಿಂದಲಿ ಮೆರೆವೋ ಪೀಠಕೆ॥ಪ॥ ತಂದೆಯ ಚರಣಕ್ಕೆ ಗಂಧ ಅಕ್ಷತೆ ಇಟ್ಟು। ತಂದೆ ನೀನೀಗ ಸಲಹೆಂದು। ತಂದೆ ನೀನೀಗ ಸಲಹಬೇಕೆನುತಲಿ। ತಂದೆಗೆ ನಮಿಸಿ ನುಡಿದಾನು॥1॥ ಪುತ್ರನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು। ಬಲಗಿವಿಯಲಿ ಕೊಳ್ಳೆ ಉಪದೇಶವಾ। ಜನನಿಯ ಚರಣವ ವಿನಯದಿಂದಲೆ ತೊಳೆದು। ಪ್ರವರವ ಹೇಳಿ ನಮಿಸಿದಾ॥2॥ ನೆರೆದು ವೇದವ ಪೊಗಳುತಲಿರಲು। ಪರಮ ಪುರುಷನ ಹಸ್ತದೊಳಗೆ ರತ್ನಮಯದ ಬಟ್ಟಲನು ಇಟ್ಟು। ಭವತಿ ಭಿಕ್ಷಾಂದೇಹಿ ಎನ್ನಲು ಬಾಲ। ಹರುಷದಿಂದಲಿ ಭಿಕ್ಷೆ ನೀಡಿದರು॥3॥

ಬ್ರಹ್ಮೋಪದೇಶವಾಯ್ತಮ್ಮ ನಿರ್ಗುಣ **ರಾಗ:ಪೂರ್ವಿಕಲ್ಯಾಣಿ**

ಬ್ರಹ್ಮೋಪದೇಶವಾಯ್ತಮ್ಮ ನಿರ್ಗುಣ ಪರಕರ್ಮದ ಕತ್ತಲೆಯ ಮೂಲವ ಕೆಡಿಸಿ ನಿರ್ಮಲ ಜ್ಞಾನವೆಂಬ ಜ್ಯೋತಿಯನಿರಿಸಿ। ಹಮ್ಮಿನ ತನುಗುಣವೆಲ್ಲವ ಬಿಡಿಸುತ। ಚಿನ್ಮಯರೂಪಿನ ಗುರುಮುಖದಿಂದ॥ಪ॥ ಗುರುವೇ ಬ್ರಹ್ಮಾ ವಿಷ್ಣುವು ಪರಮೇಶನು। ಗುರುವೇ ಪರದೈವವೆನ್ನುತ ಹರುಷದೊಳಾಪಾಂಗದಲಿ ಚತುರ್ವಿಧ। ಗುರುವಿನ ಸೇವೆಯನು ಗೈಯುತಲಿರಲು। ಪರಿ ಪರಿ ಸಂಶಯವೆಲ್ಲವ ಬಿಡಿಸುತ। ಪರವಸ್ತು ತನ್ನೊಳು ತೋರಿದ ಗುರುವು॥1॥ ಪಂಚ ಮುದ್ರಿಕೆಯ ಬಿಡಿಸಿದ ರಹಸ್ಯವಾಗಿ ಪಂಚಾಕ್ಷರಿ ಅರ್ಥವ ಬೋಧಿಸಿದ ಪಂಚಬ್ರಹ್ಮರ ಕರದಲಿ ಪೂಜಿಸುತಲಿ। ಪಂಚಾಮೃತದ ನೈವೇದ್ಯ ಮಾಡಿಸುತಲಿ। ಪಂಚಸೂತಕಗಳ ಪರಿಹರಿಸುತಲಿ। ಸಂಚಿತ ಕರ್ಮವ ಅಳಿಸಿದನು ಗುರುವು॥2॥ ಪುತ್ರಕಾಮೇಷ್ಠಿ ಫಲದಿಂದ ಉತ್ತಮನಾದ ಪುತ್ರನ ಪಡೆಯುತಲಿ, ಅರ್ತಿಯಿಂದ ಉತ್ತಮ ಸ್ವರ್ಗಕೆ ತಾ, ಹೋದರೆ ಪುನರಪಿ ಮರ್ತ್ಯಕೆ ಬೀಳುವೆಯೋ। ಆದರಿಂದ ಸುಖವೆ, ಸ್ವಾತ್ಮ ಜ್ಞಾನವೆಂಬ ಪುತ್ರನ ಪಡೆದರೆ ಮುಕ್ತಿಯು ಲಭಿಸುವುದೆಂದನು ಗುರುವು॥3॥ ಹತ್ತು ವಿಷಯದಿ ಕೂಡಿರುವ ಮಾನಸವನ್ನು ಸತ್ವ ಚಿತ್ತಾನಂದದಿ ಮೆರೆಸುತಲೀ। ನಿತ್ಯಾನಂದವ ಪಡೆ ನೀನೆಂದು, ತಾ ಬೋಧಿಸಿ ಸತ್ತು ಹುಟ್ಟುವೊ ಕಷ್ಟವ ತಾ ತಪ್ಪಿಸಿ ನಿತ್ಯ ಪ್ರಪಂಚದ ಶಾಂತಿಯ ಬಿಡಿಸುತ ಮೃತ್ಯು ಬಾಧೆ ಪರಿಹರಿಸಿದ ಗುರುವು॥4॥ ರಾಮರೂಪಿಗೆ ಮೋಹಿಸದೆ ಮನದೊಳಗಾತ್ಮ। ರಾಮನೆ ತಾನೆನ್ನುತ ನಿಶ್ಚಯದಿಂದ। ತಾಮಸ ಗುಣಗಳೊಳು ಮೆರೆಯದೆ ಎಂದಿಗು ಪಾಮರ ಸಂಗವನೆ ಮಾಡದೆ ಸಂತತ ನೇಮದಿ ನಿತ್ಯಾನಂದದಿ ಸುಖಿಸೆಂದು ಸ್ವಾಮಿ ಶ್ರೀ ಗುರು ಮಹಾಲಿಂಗನ ತಿಳುಹಿದ॥5॥

ವೇಸೇನು ಆಪೋಶನ

ವೇಸೇನು ಆಪೋಶನ ಶ್ರೀಶುನಿಕರ ಮುನ। ವೇಡಕ ತೋಮನ ಜಾನಕಿ ವೇಗಮೆ॥ಪ॥ ತಾಟಕಿ ಸಂಹಾರಮು ತರುಚುಗ ಚೇಸಿನ ತಾಮರ ಸಾಕ್ಷುನಿಕೋಮಲ ಕರ ಮುನ॥1॥ ವರಮುನಿ ಶಾಪ ವಿಮೋಚನ ಚೇಸಿನ। ಜನಕ ಭೂಪಾಲುನಿಜಾ ಮಾತಕಿ ವೇಳ॥2॥ ಧರಲೋನ ವೆಲಸಿನ ದಕ್ಷಿಣ ಕಾಸಿಲೋ। ಸ್ಥಿರ ಮುಗನುಂಡಕು ನರಸಿಂಹ ಮೂರ್ತಿಕಿ॥3॥

ಸುಜ್ಞಾನಿಯು ವರ ಕಶ್ಯಪನು **ರಾಗ:ಬೃಂದಾವನಸಾರಂಗ**

ಸುಜ್ಞಾನಿಯು ವರ ಕಶ್ಯಪನು ಕಂದಗೆ ಯಜ್ಞೋಪವೀತವ ಹಾಕಿದರು॥ಪ॥ ಅದಿತಿ ಪಯೋವ್ರತವನು ತನ್ನ ಸದನದಿ

ಮಾಡುತಿರಲು ಮುನ್ನ॥ಅ.ಪ॥ ಮುದದಿಂದ ಹರಿಮೆಚ್ಚಿ ವರವನಿತ್ತನು ನಿನ್ನ ಉದರದೊಳಗೆ ಜನಿಸುವೆನೆಂದು॥1॥ ಪುಟ್ಟಬಾಲಕನುದಿಸಿದನೆಂದು ಇಟ್ಟರು ಹೆಸರ ವಾಮನನೆಂದು ಪುಟ್ಟವರಿಗೆ ಪುಟ್ಟವನಾಗಿ ಬೆಳೆದನು॥2॥

ಹಾಕೇ ಲಕ್ಷ್ಮೀ ಆಪೋಶನ ರಾಗ:ಹಿಂದೋಳ

ಹಾಕೇ ಲಕ್ಷ್ಮೀ ಆಪೋಶನ ಪಾರ್ಥಸಾರಥಿಗೆ... ಹಾಕೆ॥ಪ॥ ಜಾರಚೋರ ವಸ್ತ್ರಾಪಹಾರ ಕಾಯ್ದನುದ್ಧಾರೀ ಕಂಸಾರಿ ಮುರಾರಿಯ ಕೈಗೇ... ಹಾಕೆ ಲಕ್ಷ್ಮೀ ಆಪೋಶನ॥ಅ.ಪ॥ ಸುರರು ಅಸುರರ ಭಾದೆಗೆ ಭರದಿ ಮೊರೆ ಇಡೇ ಬರುವನು ಭಯವು ಬೇಡೆಂದು ಅಭಯವ ಕೊಟ್ಟಂದು ಕಡಲೊಳು ಶ್ರೀರೂಪದೀ... ತಾ ಬಂದು ಕನಕ ಕಳಶದಿ ಅಮೃತವ ತಂದು ಅಸುರರ ವಂಚಿಸಿ ಅಮೃತವ ಬಡಿಸಿದ ಅಗಣಿತ ಗುಣನಿಧಿ ಪೂರ್ಣನ ಕೈಗೇ ಹಾಕೆ॥1॥ ತಾಳಾಮೇಳಗಳಾನಾಡುತ ಗೋಪಾರ ಕೂಡಿ ತೋಳದಂಡಿಗೆಯನಾಡುತ ವೇಣಾನೂದುತಾ ಆಕಳ ಕಾಯುವ ಬೃಂದಾವನದಲಿ ಶ್ರೀಪತಿ ಗೋಪಾಲಕರೊಡಗೂಡಿ ಆ ಋಷಿ ಪತ್ನಿಯ ಅನ್ನವ ಬೇಡಿದ ಗೋವರ್ಧನ ಗಿರಿ ಎತ್ತಿದ ಕೈಗೇ-ಹಾಕೇ॥2॥

ಶ್ರೀವಟು ವಾಮನನಿಗೆ ರಾಗ: ಹಂಸಧ್ವನಿ

ಶ್ರೀವಟು ವಾಮನನಿಗೆ ಭಾವಜರೂಪನಿಗೆ। ಹೂವಿನಾರತಿ ಮಾಡಿ ಭಾವಕಿಯರು ಕೂಡಿ॥1॥ ಚೆಲುವ ವಾಮನನಾಗಿ ಬಲಿಯ ಮನೆಗೆ ಹೋಗಿ। ನೆಲವ ದಾನವ ಬೇಡಿ ಒಲಿದಗಾರತಿ ಮಾಡಿ॥2॥ ಮಂಗಳಾದಾಯಕಗೇ ತುಂಗ ಪರಾಕ್ರಮಗೇ। ಮಂಗಳಾಂಗಿಯರು ಕೂಡಿ ಮಂಗಳಾರತಿ ಮಾಡಿ॥3॥

ಆಶೀರ್ವಾದ

ಚಿರಂಜೀವಿಯಾಗಿರೋ ಚಿಣ್ಣನೀನು ರಾಗ: ಕಾಂಬೋದಿ

ಚಿರಂಜೀವಿಯಾಗಿರೋ ಚಿಣ್ಣ ನೀನು। ಪರಮ ಭಾಗವತರ ಪಾದ ಧೂಳನು ಧರಿಸಿ॥ಪ॥ ಮರೆಯಬೇಡ ಹರಿಯ ಮರೆಯಬೇಡೆಂದಿಗೂ। ತಿರಿಯಬೇಡ ನೆರೆಯ ಮನೆಗಳಿಗ್ಹೋಗಿ। ಒರೆಯಬೇಡನ್ಯರೊಳು ಪರತತ್ವಗಳನೆಲ್ಲ। ಬೆರೆಯಬೇಡ ಪರಸ್ತ್ರೀಯರನು ಸ್ವಪ್ನದಲು॥1॥ ಲೋಕದ್ವಾರ್ತೆಯ ಕೇಳಿ ನೀನು ಕಂಗೆಡಬೇಡ। ಲೋಕೇಶನಾ ಚರಿತೆ ಕೇಳದಿರಬೇಡ॥ ಪಾಕವನು ಮಾಡಿ ನೀ ಒಂಟಿಯಾಗುಣಬೇಡ। ಭೂಕಾಂತೆಯನು ನೀನು ಧಿಕ್ಕರಿಸಬೇಡ॥2॥ ಸಾಲವನು ಮಾಡಬೇಡ ಸಾಲದೆಂದೆನಬೇಡ। ನಾಳೆಗೆ ಹೇಗೆಂಬ ಚಿಂತೆಬೇಡ॥ ಖೂಳ ಜನರೊಡನಾಡಿ ನೀನು ಕಂಗೆಡಬೇಡ। ಬಾಳುವರ ಸಂಗಡ ಬಾಳೆಲೊ ಬಾಲ॥3॥ ಮಂದಮತಿಗಳಕೂಡೆ ಮಾತನಾಡಲು ಬೇಡ। ನಿಂದಕರ ಕಣ್ಣೆತ್ತಿ ನೋಡಬೇಡ॥ ಇಂದಿರೆಯರಸ ಶ್ರೀ ವಿಜಯವಿಠಲನ ಚರಣ। ದ್ವಂದ್ವದಲಿ ಮಸ್ತಕವ ನೀಡದಿರಬೇಡ॥4॥

ಬಹು ಭಾಗ್ಯವಂತರಾಗಿ ರಾಗ:ರೀತಿಗೌಳ

ಬಹು ಭಾಗ್ಯವಂತರಾಗಿ ಕಂದಗಳಿರಾ। ಬಹುಕಾಲ ಬಾಳಿರೋ ಚೆನ್ನಾಗಿ ಮಕ್ಕಳಿರಾ॥ಪ॥ ಭಾಗ್ಯವೆಂಬುದೇ ನಿಮಗೆ ಭಕ್ತಿ ಭಾಗ್ಯವೇ ಭಾಗ್ಯ। ಭಾಗ್ಯ ಇನ್ನೊಂದು ಆರೋಗ್ಯ ಭಾಗ್ಯ। ಭಾಗ್ಯ ಮತ್ತೊಂದು ಆಶೀರ್ವಾದವೇ ಭಾಗ್ಯ। ಭಾಗ್ಯದೊಳು ದೊಡ್ಡ ಭಾಗ್ಯ ದಾಸತನದಾ ಭಾಗ್ಯ॥1॥ ಕಷ್ಟ ಬಂದರೆ ನಿಮಗೆ ದುಃಖವನು ಪಡಬೇಡಿ। ಕಷ್ಟವೂ ಸ್ಥಿರವೆಂದು ನಂಬಬೇಡಿ। ಕಷ್ಟವನು ಪರಿಹರಿಸಿ ನಿಮ್ಮನ್ನು ಮುದ್ದಾಡಿ। ಸೃಷ್ಟಿಗೊಡೆಯನು ಕಾಯ್ವ ಸಂದೇಹ ಬೇಡಿ॥2॥ ಪರರನ್ನು ಬೇಡಬೇಡಿ ಪರರ ಬಳಿ ಹೋಗಬೇಡಿ। ಪರಮ ನೀಚರ ಸೇವೆ ಮಾಡಬೇಡಿ। ಪರರ ಹೆಂಗಳ ನೀವು ಕಣ್ಣೆತ್ತಿ ನೋಡಬೇಡಿ। ಇರುಳು ಕಾಲದಿ ಹೊರಗೆ ತಿರುಗಾಡಬೇಡಿ॥3॥ ಪ್ರಾಣೇಶ ವಿಠಲನ ನಾಮವನು ಬಿಡಬೇಡಿ। ದೀನವತ್ಸಲ ವೆಂಕಟೇಶನನು ಪಾಡಿ ಇನ್ನು ನೀವು ಬಾಳಿರೈ ಪುತ್ರ ಪೌತ್ರರ ಕೂಡಿ। ಘನ್ನ ಮಹಿಮ ಸಲಹುವನು ಸಂದೇಹ ಬೇಡಿ॥4॥

ಗೃಹಪ್ರವೇಶ

ಗೋವುಪೂಜೆ

ಓಂ ಜಯ2 ಗೋಮಾತೆ **ರಾಗ: ದ್ವಿಜಾವಂತಿ**

ಓಂ ಜಯ ಜಯ ಗೋಮಾತೆ, ಓಂ (2ಸಾರಿ) ಜಯ ಜಯ ಗೋಮಾತೆ। ಭಕ್ತರ ಮನದ ಸಂಕಟ (2ಸಾರಿ) ಕಳೆಯುವೆ। ನೀ ತಾಯೇ ಜಯ ಜಯ ಗೋಮಾತೆ।।ಪ।। ಸಮುದ್ರ ಮಂಥನ ಸಮಯದಲಿ। ಉದಿಸಿ ಭುವಿಗೆ ಬಂದಿಹ ತಾಯಿ। ಕಾಮಧೇನು ಸ್ವರೂಪಿ ನಿನಗೆ (2ಸಾರಿ)ತಲೆಬಾಗಿ ವಂದಿಪೆವು। ಜಯ ಜಯ ಗೋಮಾತೆ।।1।। ಹಾಲಾಹಲವನೆ ಒಳಗೆ ಉಳಿಸಿ। ಅಮೃತವ ನೀಡುವೆ। ನಿನ್ನುಪಕಾರವ ಸ್ಮರಿಸುತ(2)ಕೋಟಿ ಕೋಟಿ ವಂದನೆ। ಜಯ ಜಯ ಗೋಮಾತೆ।।2।। ದೇವತೆ ಕೋಟಿ ಮೆರೆಯುವ ನಿನ್ನ ತನುಮನಕೆಂದೆಂದು। ಕೋಟಿ ನೀರಾಜನ ತೋರುತ(2) ಧನ್ಯರಾಗೆ ಮಾತೆಯರು। ಜಯ ಜಯ ಗೋಮಾತೆ।।3।। ಮನುಕುಲ ಕೋಟಿಯ ಸ್ವಾಸ್ಥ್ಯ ನೀನಿತ್ತರೆ ಮಾತ್ರವೆ ಭಿಕ್ಷಾ। ನಿನ್ನಯ ಚರಣಕೆ ಪ್ರೇಮದಿ(2) ಸಾಷ್ಟಾಂಗ ವಂದನೆ। ಜಯಜಯ ಗೋಮಾತೆ।।4।। ತಂದೆಯು ತಾಯಿಯು ನೀನೆ ಬಂಧು ಬಳಗವು ನೀನೇನೆ। ಸ್ವೀಕರಿಸೆಮ್ಮೆಯ ಸಾದರ। ಸ್ವೀಕರಿಸೆಮ್ಮೆಯ ಸಾದರದಾರತಿ। ಸ್ವೀಕರಿಸೆಮ್ಮೆಯ ಸಾದರ ದಾರತಿ ವಂದೆ।।5।।

ಗೋವು ಪಾದಗಳೆ **ರಾಗ:ಆನಂದಭೈರವಿ**

ಗೋವು ಪಾದಗಳೆ ಪಿತೃದೇವತೆಗಳು। ಕಾಲುಗಳೇ ಕಂಬಗಳು,ಮೊಣಕಾಲೆ ಸಾಲಿಗ್ರಾಮಗಳು। ಕಂಗಳೆ ಸೂರ್ಯಚಂದ್ರರು ಮೊಗವು ಜೇಷ್ಠಾದೇವಿ। ಕೊಂಬುಗಳೇ ಗಂಧರ್ವರು। ಕುಂಭ ರುದ್ರಾದೇವಿ। ಕೆಚ್ಚಲಲ್ಲಿ ಅರುಣಾ ದೇವತೆಗಳು। ರೋಮಗಳೆಲ್ಲ ಲಿಂಗಗಳು।।ಪ।। ಗುದದ್ವಾರದಲ್ಲಿ ಭಾಗೀರಥಿದೇವಿ। ಯೋನಿದ್ವಾರದಲ್ಲಿ ಶ್ರೀಮಹಾಲಕ್ಷ್ಮೀ। ತ್ರಿಮೂರ್ತಿಗಳು ಅಷ್ಟದಿಕ್ಪಾಲಕರು ನವಗ್ರಹಾದಿ ದೇವತೆಗಳು ಸ್ಥಿರವಾಗಿ ನೆಲೆಸಿರುವಂಥಹ।।1।। ಗೋಮಾತೆಯೇ ಕಾಮಧೇನುವು। ಧರ್ಮಜನ ಸತಿ ದ್ರೌಪದಿದೇವಿ। ಅರ್ಜುನನ ಸತಿ ಸುಭದ್ರಾದೇವಿ। ವಸಿಷ್ಟನ ಸತಿ ಅರುಂಧತಿದೇವಿ। ಶ್ರೀರಾಮನ ಪತ್ನಿ ಸೀತಾದೇವಿ।।2।। ಕೂಟದಲ್ಲಿ ಕುಳಿತು ವಿಚಾರವ ಮಾಡಿ। ಸ್ತ್ರೀಯರು ಮಾಡಿದ ಪಾಪಗಳೆಲ್ಲ ಯಾವ ತೆರದಲಿ ಕಳೆವುದೆಂದು। ಕೃಷ್ಣನನ್ನು ಕೇಳಲಾಗಿ ಶ್ರೀಕೃಷ್ಣರಾಧಾ ರುಕ್ಮಿಣಿಯೊಡನೆ ಇಂತೆಂದನು।।3।। ಉದಯಕಾಲದೊಳೆದ್ದು ಗೋವು ಹಾಡನು ಪಠಿಸಿದರೆ। ಅರಿತು ಮಾಡಿದ ಪಾಪ ಅರಿಯದೆ ಪಾಡಿದ ಪಾಪ। ಮೈಲಿಗೆ ಬೆರೆಸಿದ ಪಾಪ ಪತಿಗೆ ಎದುರಾಡಿದ ಪಾಪ ಎಲ್ಲ ಪಾಪಗಳು ಕಳೆಯುವುವು।।4।। ಗೋಪ್ರದಕ್ಷಿಣೆ ಮಾಡಿ ಅರಿಶಿನ ಕುಂಕುಮವಿಟ್ಟು। ಗಂಧಾಕ್ಷತೆಯನಿಟ್ಟು ಹೂವಿಂದ ಅಲಂಕರಿಸಿ। ಈ ದಿನದ ಈ ಗೋವು ಕಾಮಧೇನುವೆಂದು ತಿಳಿದು। ಪೂಜೆಗೈಯುತ ಬೇಡಿದ ಮಗಳನ್ನು ಸಲಹುವುದು।।5।। ಬೇಡಿದಿಷ್ಟಗಳೆಲ್ಲವ ನೀಡುವ ವರದಾತೆ। ಬೇಡಿದ ಬೇಡದ ಇಷ್ಟಾರ್ಥವ 36 ತೋಟಗಳ ಫಲಗಳ ಸೇವಿಸುವ 36 ವಿಧಗಳ ಧನ ಧಾನ್ಯಗಳ ಪಡೆದಂತ ಮನೆಯು ಬೇಕೆಂದು।।6।। ಬೇಡಿದ ತಾನು ತನ್ನ ಅತ್ತೆ, ಅತ್ತೆಯ ಅತ್ತೆ, 34 ತಲೆ ಮಾರಿನವರು ರತ್ನಾಭರಣಗಳ ಒಡವೆಗಳ ಧರಿಸುತ್ತ। ಅರಿಶಿನ ಕುಂಕುಮ ಹೂವು ಮುಡಿಯುತ್ತ।।7।। ಮುತ್ತೈದೆ ತನದ ವರವ ಬೇಡುತ್ತಾ, ತಾನು ತನ್ನ ತಾಯಿ ತನ್ನ ತಾಯಿಯ ತಾಯಂದಿರು 34 ತಲೆ ಮಾರಿನವರೆಲ್ಲ। ಮೊಮ್ಮಕ್ಕಳನ್ನೆತ್ತಿಕೊಂಡು। ಮುತ್ತು ರತ್ನ ಹೊನ್ನ ಆಭರಣಗಳಧರಿಸಿ। ಅರಿಶಿನ, ಕುಂಕುಮವಿಟ್ಟು। ಹೂವ ಮುಡಿದು ಮುತ್ತೈದತನ ನೀಡೆಂದು ಬೇಡುತಲಿ ಪ್ರಾತಃಕಾಲ ಯಾರು ಗೋವು ಹಾಡು ಪಠಿಸುವರೋ। ಶ್ರೀಹರಿ ಸನ್ನಿಧಿ ಪಡೆಯುವರು। ಮಧ್ಯಾಹ್ನ ಪಠನ ಮಾಡಿದರೆ। ಶ್ರೀಹರಿಸನ್ನಿಧಿ ಪಡೆಯುವರು। ಸಾಯಂಕಾಲ ಪಠನ ಮಾಡಿದರೆ। ಶ್ರೀಮಹಾಲಕ್ಷ್ಮೀ ಪ್ರತ್ಯಕ್ಷಳಾಗುವಳು। ಶುಕ್ರವಾರ, ಮಂಗಳವಾರ। ಪಠನ ಮಾಡಿದರೆ 8ದಿನ ಮಾಡಿದ ಪಾಪ ಕಳೆಯುವುದು। ಏಕಾದಶಿ ದ್ವಾದಶಿ ದಿನಗಳಲ್ಲಿ ಗೋವು ಹಾಡುಪಠನ ಮಾಡಿದರೆ

ಪಿತೃದೇವತೆಗಳೆಲ್ಲ ಸ್ವರ್ಗವಾಸಿಗಳಾಗುವರು। ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಪಠನ ಮಾಡಿದರೆ ಯಮ ಕಿಂಕರರ ಭಯವೇ ಇಲ್ಲ। ಯಮ ಪುರಿಯ ದರ್ಶನವೇ ಇಲ್ಲ ಎಂಥ ಕೈಲಾಸವು ಎಂಥ ವೈಕುಂಠವು। ಎಂಥ ವೈಭೋಗವು ಕೃಷ್ಣ॥

ಕೋಟಿಸೂರ್ಯ ಪ್ರಭಾಪೂರ್ಣೆ **ರಾಗ: ಆಭೋಗಿ**

ಕೋಟಿಸೂರ್ಯ ಪ್ರಭಾಪೂರ್ಣೆ ನಿನಗೆ ಮಂಗಳಾರತಿ। ಮಾತೆಗೆ, ಭೂಮಾತೆಗೆ, ಗೋಮಾತೆಗೆ, ಶರಣಾಗತಿ॥ಪ॥ ಕಾಯುವವರ ಕಾಯುವವಳೆ ತಾಯಿ ಪುಣ್ಯಕೋಟಿಯೇ। ಅನ್ನ ಕೊಡುವ ಅನ್ನಪೂರ್ಣೆ ನಿನಗೆ ಯಾರು ಸಾಟಿಯೇ?॥ ಕಸವ ಕೂಡ ರಸಮಾಡುವ ಪರಮಾದ್ಭುತ ಗೀತೆಯೆ। ಪ್ರೀತಿಯೊಂದೆ ನೀತಿಯೆನುವ ಮಾತಿಲ್ಲದ ಮಾತೆಯೆ॥1॥ ಮಂಗಲ ಪ್ರದೆ, ಮಂಗಳಾಂಗಿ ತಾಯೇ ಶುಭಮಂಗಳೇ। ಬಾಳಿನಂಧಕಾರ ಕಳೆವ ಹಾಲಿನ ಬೆಳದಿಂಗಳೇ। ದೇವಲೋಕವನ್ನು ಮರ್ತ್ಯದಲ್ಲೆ ತೆರೆವ ಕಂಗಳೇ। ಯಾರಮ್ಮಾ ನಿನಗೆ ಸಮಾ ತಾಯಿ ಸರ್ವಮಂಗಳೇ॥2॥ ಬಲಿಯಾದರೆ ನೀನು ಇಡೀ ಲೋಕವೆಲ್ಲ ತಬ್ಬಲಿ। ಉಳಿದು ಉಳಿಸು ಮಕ್ಕಳನ್ನು ನಿನ್ನ ಕರುಣೆ ಕಾಯಲಿ। ಕ್ಷೀರದಾತೆ ಲೋಕಮಾತೆ ಅಮೃತಶರಧಿ ಜಾತೆಯೇ। ಪ್ರಾಣ ಎನ್ನಬಹುದೆ ನಿನ್ನ ಲೋಕಪ್ರಾಣದಾತೆಯೇ॥

ಗಾವೋ ಮಮಾಗ್ರತಃ ಸಂತು ಗಾವೋ ಮೇ

ಗಾವೋ ಮಮಾಗ್ರತಃ ಸಂತು ಗಾವೋ ಮೇ ಸಂತು ಪೃಷ್ಠತಃ। ಗಾವೋ ಮೇ ಹೃದಯೇ ನಿತ್ಯಂ ಗವಾಂ ಮಧ್ಯೇ ವಸಾಮ್ಯಹಮ್॥ ಸುರಭಿಸ್ತ್ವಂ ಜಗನ್ಮಾತಃ ನಿತ್ಯಂ ವಿಷ್ಣುಪದೇ ಸ್ಥಿತಾ। ಮಾತರ್ಮಾಯಾಭಿಲಷಿತಂ ಸಫಲಂ ಕುರು ನಂದಿನಿ॥

ಸುರಭಿರ್ವೈಷ್ಣವೀ ಮಾತಃ

ಸುರಭಿರ್ವೈಷ್ಣವೀ ಮಾತಃ ಸುರಲೋಕೇ ಮಹೀಯ ಸೇ। ಗ್ರಾಸಮುಷ್ಟಿರ್ಮಯಾ ದತ್ತಾ ಸುರಭೇ ಪ್ರತಿಗೃಹ್ಯತಾಮ್॥

ಜನಪದಗೀತೆಗಳು (ಸಾಮಾನ್ಯ)

ಅತ್ತಿಯ ಮರವಾ (ಶಿವಪಾರ್ವತಿ-ಶೋಭಾನೆ) **ರಾಗ: ಪುನ್ನಾಗವರಾಳಿ**

ಅತ್ತಿಯ ಮರವಾ ಕಿತ್ತು ನೆಡುವೋರುಂಟೆ। ಅತ್ತಿಲ್ಲದ ಮನೆಗೆ ಗೌರಿಯ॥2ಸಾರಿ॥ ಕೊಟ್ಟರೆ ಒಪ್ಪಾ ಇನ್ನ್ಯಾರು ಕಲಿಸೋರು॥ ಅತ್ತೇಯು ನಾನೇಯ ಮಾವಾನು ನಾನೇಯ। ಮತ್ತೆ ಸೋದರಿಕೆ ಗೌರೀಗೆ॥2ಸಾರಿ॥ ಒಪ್ಪವ ನಾನೇಯ ಕಲಿಸುವೆ॥ ಆಲದ ಮರವ ಸೀಳಿ ನೆಡುವೋರುಂಟೆ ಮಾವಿಲ್ಲದ ಮನೆಗೆ ಗೌರಿಯ॥2ಸಾರಿ॥ ಕೊಟ್ಟರೆ ಆಯಾವ ಇನ್ನ್ಯಾರು ಕಲಿಸೋರು॥ ಮಾವಾನು ನಾನೇಯ ಭಾವಾನು ನಾನೇಯ ಮತ್ತೆ ಸೋದರಿಕೆ ಗೌರೀಗೆ॥2ಸಾರಿ॥ ಆಯಾವ ನಾನೇಯ ಕಲಿಸುವೆ॥ ಅವರ್ಬ್ಯಾದಿಲುಣ್ಣೋರು ಬೀದೀಲಿ ಒರಗೋರು। ತ್ಯಾಗದೆಲೆ ಹಿಡಿದು ತಿರಿದುಣ್ಣೋರು॥ ತ್ಯಾಗದೆಲೆ ಹಿಡಿದು ತಿರಿದುಂಬೊ ಜಂಗಮಗೆ ತಾಯಿ ಸಿರಿಗೌರಿ ಮನಸಾದಾ॥ ಪಾತಾಳ ಕಂಬಕು ಆಕಾಶ ಡಿಂಬಕ್ಕು। ಹಾಕ್ಯಾರು ಮುತ್ತಿನ ಚಪ್ಪರವ॥2ಸಾರಿ॥ ಕಟ್ಯಾರು ತೋರಣ ಮಾಡ್ಯಾರು ಸಿರಿಗೌರಿಯ ಮದುವೆಯ॥

ಅಲ್ಲೈತೆ ನೋಡು ನಮ್ಮ ಹೊಲ **ರಾಗ: ಪುನ್ನಾಗವರಾಳಿ**

ಅಲ್ಲೈತೆ ನೋಡು ನಮ್ಮ ಹೊಲ। ಸೀಮ್ಯಾಗೆ ಇಲ್ಲ ಇಂಥ ನೆಲ। ಭೂಮ್ಯಾಗೆ ನಿಂತು ನಾವು ಬದುಕನ್ನು ಮಾಡಿದಾಗ। ಕೊಡ್ತಾಳೆ ಭೂ ತಾಯಿ ಎಂಥ ಫಲ॥1॥ ಕರಿ ಎತ್ತು ಬಿಳಿ ಎತ್ತು ಹೂಡಿಕೊಂಡು। ಕೊಲ್ಹಾರ ಬಂಡಿ ಹೊಡಕೊಂಡು। ಬಂಡೀಲಿ ಬುತ್ತೀನ ಇಟ್ಟುಕೊಂಡು। ನಾ ಹೊಂಟೇವ್ನಿ ಹೆಂಡತಿ ಕಟ್‌ಕೊಂಡು॥2॥ ತಿಳಿಹಸಿರು ಸೀರೆಯನುಟ್ಟೆಹಳು। ತೆನೆಯಂತ ನತ್ತ ನಿಟ್ಟಿಹಳು। ತಲೆ ಹಾಕಿ ಥಕಥಕ ಕುಣಿದಿಹಳು। ಭೂತಾಯಿ ಬಡತನ ನೀಗುವಳು॥3॥